ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17 ಸಂಚಿಕೆ 49 ರೂ. 2.00 3 ಡಿಸೆಂಬರ್ 1995

ಬದಲಾಗುತ್ತಿರುವ ಸನ್ನಿವೇಶದಲ್ಲಿ ರೈತ ಆಂದೋಲನದ ಕೊಡುಗೆ ಬಹಳ ಮಹತ್ವಪೂರ್ಣ

- ಸುರ್ಜಿತ್

ಕಾಂಗ್ರೆಸ್(ಐ) ಮತ್ತು ಬಿಜೆಪಿಗಳ ಅಧಿಕಾರ ಗಿಟ್ಟಿಸುವ ಆಸೆ ಮುಂಬರುವ ಚುನಾವಣೆಗಳಲ್ಲಿ ನುಚ್ಚು ನೂರಾಗಲಿದೆ. ಸಂಸತ್ತಿನಲ್ಲಿ ಯಾರಿಗೂ ಬಹುಮತವಿಲ್ಲದ ಸ್ಥಿತಿ ಉಂಟಾದರೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಪಾತ್ರ ಸಹಜವಾಗಿಯೇ ಬಹಳ ಮಹತ್ವದ್ದಾಗುತ್ತದೆ, ಪರಿಸ್ಥಿತಿಯನ್ನು ಜನಪರವಾಗಿ ಪರಿಣಾಮಕಾರಿಯಾಗಿ ಬದಲಿಸಲು ಸಾಧ್ಯವಾಗುತ್ತದೆ. ಸಾಮ್ರಾಜ್ಯಶಾಹಿಗಳು ಇಂತಹ ಪರಿಸ್ಥಿತಿ ಏರ್ಪಡದಂತೆ ನೋಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇಂತಹ ಹಿನ್ನೆಲೆಯಲ್ಲಿ ದೇಶದ ರೈತಾಪಿ ಜನಗಳ ಆಂದೋಲನ ತನ್ನ ನೆಲೆಯನ್ನು ವಿಸ್ತರಿಸಿ, ಬಲಗೊಳಿಸಬೇಕಾಗಿದೆ. ಆ ಮೂಲಕ ದೇಶದ ಎಡ-ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಪಡಿಸಬೇಕಾಗಿದೆ. ಇದು ರೈತ ಆಂದೋಲನವನ್ನು ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಮುಂದೊಯ್ಯುವುದರಿಂದ ಮಾತ್ರ ಸಾಧ್ಯ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ. ಅವರು ಅಖಿಲ ಭಾರತ ಕಿಸಾನ್ ಸಭಾದ 28ನೇ ಸಮ್ಮೇಳನದ ಉದ್ಘಾಟನಾ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಒರಿಸ್ಸಾ ರಾಜ್ಯದ ಕಟಕ್‌ನಲ್ಲಿ ನವಂಬರ್ 19ರಂದು ಆರಂಭವಾದ ಎಐಕೆಎಸ್‌ನ 28ನೇ ಸಮ್ಮೇಳನದ ಉದ್ಘಾಟನಾ ಅಧಿವೇಶನ ಒರಿಸ್ಸಾ ರಾಜ್ಯದ ಜನತೆಯ ಧೀರ ಪ್ರತಿರೋಧದ ಸಂಕೇತವಾದ ಬಾರಾಬತಿ ಕೋಟೆಯ ಪಕ್ಕದಲ್ಲಿರುವ ಸ್ಟೇಡಿಯಂನಲ್ಲಿ ಧ್ವಜಾರೋಹಣದೊಂದಿಗೆ ಆರಂಭವಾಯಿತು. ಒರಿಸ್ಸಾದ ರೈತ ಮುಖಂಡ ಜಗನ್ನಾಥ್ ಮಿಶ್ರಾ ಸ್ವಾಗತ ಭಾಷಣ ಮಾಡಿದರು. ಎಐಕೆಎಸ್ ಅಧ್ಯಕ್ಷ ಎನ್. ಶಂಕರಯ್ಯ ತನ್ನ ಸಂಕ್ಷಿಪ್ತ ಅಧ್ಯಕ್ಷೀಯ ಭಾಷಣದಲ್ಲಿ ಒಟ್ಟು ಒಂದೂವರೆ ಕೋಟಿಗೂ ಹೆಚ್ಚು ಸದಸ್ಯ ಬಲವಿರುವ ಎಐಕೆಎಸ್ ಹಾಗೂ ಅಖಿಲ ಭಾರತ ಕೃಷಿ ಕೂಲಿಕಾರ ಸಂಘ ದೇಶದಲ್ಲಿ ಪರ್ಯಾಯ ಕೃಷಿ ನೀತಿಗಳಿಗಾಗಿ ಒಂದು ಆಂದೋಲನವನ್ನು ಬೆಳೆಸಿ ಆಳುವ ವರ್ಗಗಳು ಮಾಡುತ್ತಿರುವ ಧಾಳಿಗಳನ್ನು ಪ್ರತಿರೋಧಿಸಿ ಪ್ರಜಾಪ್ರಭುತ್ವದ ರಕ್ಷಣೆಗೆ ಹಾಗೂ ಜನಗಳ ಜೀವನ ಮಟ್ಟವನ್ನು ಸುಧಾರಿಸುವ ಹೋರಾಟದಲ್ಲಿ ಮಹತ್ವದ ಕಾಣಿಕೆ ನೀಡಬೇಕು ಎಂದು ಕರೆ ನೀಡಿದರು.

ನಂತರ ಮಾತನಾಡಿದ ಕಾಂ. ಸುರ್ಜಿತ್ ಇದೇ ಧಾಟಿಯಲ್ಲಿ ಮುಂದುವರೆದು ಎಐಕೆಎಸ್ ಮುಂದಿನ ವರ್ಷ 60ನೇ ವಾರ್ಷಿಕೋತ್ಸವವನ್ನು ಆಚರಿಸಲಿದೆ ಎಂದು ನೆನಪಿಸುತ್ತಾ ಒಂದು ಪಾಳೆಯಗಾರಿ-ವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ ಕ್ರಾಂತಿಯ ಚಾಲಕ ಶಕ್ತಿಯಾಗುವಂತಹ, ನಂತರ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಸಮಾಜವಾದದತ್ತ ಸಾಗುವ ಕಣ್ಣೋಟದ ಮಹತ್ವವನ್ನು ವಿವರಿಸಿದರು.

ಆರಂಭದಲ್ಲಿ ಹೇಳಿದಂತೆ ಪ್ರಸ್ತುತ ಬದಲಾದ ಸನ್ನಿವೇಶದ ಬಗ್ಗೆ ಮಾತನಾಡುತ್ತಾ "ಉದಾಹರಣೆಗೆ, ಹೊಸ ಆರ್ಥಿಕ ಹಾಗೂ ಕೃಷಿ ನೀತಿಗಳು ಬೆಲೆ ವ್ಯವಸ್ಥೆಯ ಮೂಲಕ ಶ್ರೀಮಂತ ರೈತರನ್ನು ತಮ್ಮತ್ತ ಸೆಳೆಯುತ್ತಿವೆ. ಆದರೆ ಬಡತನದ ರೇಖೆಯ ಕೆಳಗಿರುವವರ ಸಂಖ್ಯೆ 33% ರಿಂದ 40% ಕ್ಕೇರಿದೆ. ನಿಜವಾಗಿ ಈ ನೀತಿಗಳ ಉದ್ದೇಶ 15% ಮಂದಿಗೆ ಪ್ರಯೋಜನ ತರುವುದು. ಉಳಿದ 80% ದಿವಾಳಿಯಾಗುವ, ಹಸಿವಿನಿಂದ ನರಳುವ ಸ್ಥಿತಿ ತಲುಪುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ಬಡ ರೈತರು ಮತ್ತು ಕೃಷಿ ಕೂಲಿಕಾರರ ಐಕ್ಯತೆಯನ್ನಾಧರಿಸಿದ ಕಾರ್ಯತಂತ್ರವೇ ಏಕೈಕ ಉತ್ತರ. ಇದನ್ನು ಕಾರ್ಯರೂಪಕ್ಕೆ ತಂದಲ್ಲೆಲ್ಲಾ ಯಶಸ್ವಿಯಾಗಿದೆ. ಆದರೆ ಪಶ್ಚಿಮ ಬಂಗಾಳ, ಕೇರಳಗಳಲ್ಲೂ ಯಾವುದೂ ಅಚಲವಾಗಿಲ್ಲ, ರೈತರು ಮತ್ತು ಕೃಷಿ ಕೂಲಿಕಾರರ ನಡುವೆಯೂ ವೈರುಧ್ಯಗಳು ಮೂಡಿ ಬರುತ್ತಿವೆ. ಅವನ್ನು ರೈತ-ಕಾರ್ಮಿಕ ಐಕ್ಯತೆ ರೈತ ಆಂದೋಲನದ ಯಶಸ್ಸಿನ ಮುಖ್ಯಾಂಶ ಎಂಬ ತಿಳುವಳಿಕೆಯ ಪ್ರಜಾಪ್ರಭುತ್ವ ರೀತಿಯಲ್ಲಿ ಪರಿಹರಿಸಿಕೊಳ್ಳಬೇಕು" ಎಂದು ಸುರ್ಜಿತ್ ಸಲಹೆ ಮಾಡಿದರು.

ಸಂಘಟನೆಯ ನಿರ್ಣಯ ವ್ಯವಸ್ಥೆಯಲ್ಲಿ ಹೆಚ್ಚೆಚ್ಚು ವಿಶಾಲ ವಿಭಾಗಗಳನ್ನು ಒಳಗೊಳ್ಳಿ, ಏಕೆಂದರೆ ಜನಸಾಮಾನ್ಯರನ್ನು ಒಳಗೊಳ್ಳದೆ ಯಾವುದೇ ಆಂದೋಲನ ಬೆಳೆಯದು ಎಂದು ಕರೆ ನೀಡಿದ ಸುರ್ಜಿತ್ ಯಾವೆಲ್ಲಾ ಜನಗಳ ಬೇಡಿಕೆಗಳನ್ನು ಕೈಗೆತ್ತಿಕೊಳ್ಳಬಹುದು ಎಂದು ಸ್ಥೂಲವಾಗಿ ವಿವರಿಸಿದರು. ಜನಗಳೆತ್ತಿದ ಬೇಡಿಕೆಗಳನ್ನು ಕೈಗೆತ್ತಿಕೊಂಡು ಈ ಸಮ್ಮೇಳನ ಎ.ಐ.ಕೆ.ಎಸ್.ನ ಇತಿಹಾಸದಲ್ಲಿ ಒಂದು ತಿರುವು ಬಿಂದಾಗಲಿ ಎಂದು ಹಾರೈಸಿದರು.

ದೇಶದ 17 ರಾಜ್ಯಗಳಿಂದ 500ಕ್ಕೂ ಹೆಚ್ಚು ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ನಾಲ್ಕು ನಿರ್ದಿಷ್ಟ ವಿಷಯಗಳ ಬಗ್ಗೆ ಕೂಲಂಕುಷ ಚರ್ಚೆಗಾಗಿ ನಾಲ್ಕು ಆಯೋಗಗಳ ರಚನೆ ಈ ಸಮ್ಮೇಳನದ ವಿಶಿಷ್ಟತೆ. ಭೂಮಿ ಸಂಬಂಧೀ ಪ್ರಶ್ನೆಗಳು, ಕೃಷಿ ಅಭಿವೃದ್ಧಿ, ಪಂಚಾಯತುಗಳು ಮತ್ತು ಸಹಕಾರ ಹಾಗೂ ಸಂಘಟನೆ ಇವೇ ನಾಲ್ಕು ನಿರ್ದಿಷ್ಟ ವಿಷಯಗಳು.

(ಐ.ಎನ್.ಎಸ್.)

28ನೇ ಸಮ್ಮೇಳನ ಆರಿಸಿದ ಎಐಕೆಎಸ್ ಮುಖಂಡರು

ಅಧ್ಯಕ್ಷರು: ಬಿನೋಯ್ ಕೊನಾರ್
ಉಪಾಧ್ಯಕ್ಷರು: ಹರ್ಕಿಶನ್‌ಸಿಂಗ್ ಸುರ್ಜಿತ್
ಬಿನೋಯ್ ಕೃಷ್ಣ ಚೌಧುರಿ
ರಾಮ್‌ನಾರಾಯಣಗೋಸ್ವಾಮಿ
ವರದರಾಜನ್
ಪಾಲೊಳ್ಳಿ ಮಹ್ಮದ್ ಕುಟ್ಟಿ
ಪ್ರಧಾನಕಾರ್ಯದರ್ಶಿ:ಎಸ್.ರಾಮಚಂದ್ರನ್‌ಪಿಳ್ಳೆ
ಜಂಟಿ ಕಾರ್ಯದರ್ಶಿಗಳು: ಪಿ.ಕೆ.ಟಂಡನ್
ಶ್ರೀನಿವಾಸ ರಾವ್
ಎನ್.ಕೆ. ಶುಕ್ಲಾ

ಅಖಿಲ ಭಾರತ ಕಿಸಾನ್ ಸಭಾದ 28ನೇ ಸಮ್ಮೇಳನ 125 ಸದಸ್ಯರುಳ್ಳ ಅಖಿಲ ಭಾರತ ಕಿಸಾನ್ ಮಂಡಳಿ(ಎಐಕೆಸಿ) ಯನ್ನು ಆರಿಸಿತು. ಕರ್ನಾಟಕದಿಂದ ಪಿ.ರಾಮಚಂದ್ರರಾವ್, ಮಾರುತಿ ಮಾನ್ಪಡೆ, ಸಿ.ಎಸ್.ಬಾಳೆ ಮತ್ತು ಪಿ.ಜಗನ್ನಾಥ್ ಎಐಕೆಸಿಗೆ ಆರಿಸಲ್ಪಟ್ಟರು ಪಿ.ರಾಮಚಂದ್ರರಾವ್ ಕೇಂದ್ರ ಕಿಸಾನ್ ಮಂಡಳಿ(ಸಿಕೆಸಿ)ಗೂ ಆರಿಸ್ಪಟ್ಟಿದ್ದಾರೆ.

ಡಾ। ಅಂಬೇಡ್ಕರ್ ಪ್ರತಿಮೆಗೆ ಪಾನಮತ್ತ ವಿದ್ಯಾರ್ಥಿಗಳಿಂದ ಅವಮಾನ ಏನನ್ನು ತೋರಿಸುತ್ತದೆ?

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿ ಶ್ರೀಮತಿ ಲಲಿತಾನಾಯಕ್ ಇವರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಕೊಡಬೇಕೆಂದು ರಾಜ್ಯಾದ್ಯಂತ ಹಲವು ಜಿಲ್ಲೆಗಳಲ್ಲಿ ಚಳುವಳಿ ನಡೆಯುತ್ತಿದೆ. ಬಸ್ ಗಳನ್ನು ಸುಡುವುದು, ಬಂದ್ ಮಾಡುವುದು, ಇತ್ಯಾದಿ ಈ ಚಳುವಳಿಯ ಭಾಗವಾಗಿ ಹಲವೆಡೆ ಅವ್ಯಾಹತವಾಗಿ ನಡೆಯುತ್ತಿದೆ. ಈ ಮಧ್ಯೆ ಶ್ರೀಮತಿ ಲಲಿತಾನಾಯಕ್ ಇವರೂ ತಾವು ರಾಜಿನಾಮೆ ಕೊಡಬೇಕೇ ಬೇಡವೇ ಎಂದು ತೀವ್ರವಾಗಿ ವಿಚಾರ ಮಾಡುತ್ತಿರುವುದಾಗಿ ವರದಿಗಳಿವೆ.

ಈ ಚಳುವಳಿಗಾರರ ಬೇಡಿಕೆಯೆಂದರೆ ಇತ್ತೀಚೆಗೆ ಬೆಂಗಳೂರಿನಲ್ಲಿ ಕೆಲವು ಪಾನಮತ್ತ ವಿದ್ಯಾರ್ಥಿಗಳು(ಅವರ ಪೈಕಿ ಶ್ರೀಮತಿ ಲಲಿತಾನಾಯಕ್ ಇವರ ಪುತ್ರನೂ ಇದ್ದ ಎನ್ನಲಾಗಿದೆ) ಬಾಬಾ ಸಾಹೇಬ್ ಅಂಬೇಡ್ಕರರ ಪ್ರತಿಮೆಯನ್ನು ಜಗ್ಗಿ ಅವಮಾನಗೊಳಿಸಿದ್ದ ಘಟನೆಗೆ ಸಂಬಂಧಪಟ್ಟು. ಶ್ರೀಮತಿ ಲಲಿತಾನಾಯಕರ ಪುತ್ರ ಇದ್ದುದರಿಂದ ಅವರು ತಮ್ಮ ಮಂತ್ರಿಪದವಿಗೆ ರಾಜಿನಾಮ ಕೊಡಬೇಕು ಎಂಬುದೇ ಎರಡನೇ ಬೇಡಿಕೆ.

- ಪಿ. ರಾಮಚಂದ್ರರಾವ್

ಇಂತಹ ಘಟನೆಯನ್ನು ಎಲ್ಲರೂ ಖಂಡಿಸಬೇಕು ಎಂಬುದರಲ್ಲಿ ಸಂಶಯವಿಲ್ಲ. ನಾವೂ ಖಂಡಿಸುತ್ತೇವೆ. ತಪ್ಪಿತಸ್ಥರಿಗೆ ಶಿಕ್ಷೆಯಾಗಲೇಬೇಕು.

ಆದರೆ ಈ ಘಟನೆ ಎರಡು ಪ್ರಮುಖ ಅಂಶಗಳನ್ನು ಪ್ರದರ್ಶಿಸುತ್ತದೆ. ಒಂದು, ವಿದ್ಯಾರ್ಥಿಗಳ ಮಧ್ಯೆ ಅದರಲ್ಲೂ ಹಣದಲ್ಲಿ ಲೋಲಾಡುವ ಕುಟುಂಬಗಳ ವಿದ್ಯಾರ್ಥಿಗಳು ಹಲವರ ಮಧ್ಯೆ, ಪಾನಮತ್ತತೆ, ಡ್ರಗ್ ಉಪಯೋಗ ಇತ್ಯಾದಿ ಹೆಚ್ಚುತ್ತಿರುವುದು. ಎರಡು, ವಿದ್ಯಾರ್ಥಿಗಳಲ್ಲಿ ಹಲವರಲ್ಲಿ ರಾಷ್ಟ್ರೀಯ ಮುಖಂಡರ(ಹಿಂದಿನ ಹಾಗೂ ಇಂದಿನ) ಬಗ್ಗೆ ಅಗೌರವ ಹೆಚ್ಚುತ್ತಿರುವುದು, ರಾಷ್ಟ್ರೀಯ ಸ್ವಾತಂತ್ರ್ಯದ ಹೋರಾಟದ ಕುರಿತು ನಿರ್ಲಕ್ಷ್ಯದ ಭಾವನೆ.

ಈ ಚಳುವಳಿ ವಿದ್ಯಾರ್ಥಿಗಳಲ್ಲಿ ಎದ್ದು ಕಾಣುವ ಈ ಎರಡು ದೌರ್ಬಲ್ಯಗಳನ್ನು ಹೋಗಲಾಡಿಸಲು ಸಹಾಯಕವಾಗುವ ಚಳುವಳಿಯಾಗಿ ಪರಿಣಮಿಸಲಿ ಎಂಬುದು ನಮ್ಮ ಆಶಯ.

ಆದರೆ, ಈ ಚಳುವಳಿಯ ಹಲವು ಘಟನೆಗಳನ್ನು ವೀಕ್ಷಿಸಿದಾಗ ಹಾಗೂ ಅದರಲ್ಲಿ ಮಗ ಮಾಡಿದ ತಪ್ಪಿಗೆ ಮಂತ್ರಿ ಲಲಿತಾನಾಯಕರ ರಾಜಿನಾಮೆ ಕೇಳುವ ಬೇಡಿಕೆಗೆ ಹೆಚ್ಚು ಒತ್ತು ನೀಡುತ್ತಿರುವುದನ್ನು ನೋಡಿದಾಗ ಇದರ ಹಿಂದೆ ಕೆಲವು ರಾಜಕೀಯ ಶಕ್ತಿಗಳ ಕೈಗಳು ಇದ್ದಂತೆ ಕಾಣುತ್ತದೆ.

ತನಿಖೆ ಆಗಬೇಕು ಎಂಬ ಬೇಡಿಕೆ ಸಮಂಜಸ, ತನಿಖೆಯಲ್ಲಿ ಶ್ರೀಮತಿ ಲಲಿತಾನಾಯಕರ ಪಾತ್ರ ಇತ್ತೆಂದು ಕಂಡುಬಂದರೆ ಅವರು ರಾಜಿನಾಮ ಕೊಡಬೇಕು ಎಂದು ಬೇಡಿಕೆ ಇಡುವುದು ಸರಿ, ಇಡಲೇಬೇಕು, ಅವರು ರಾಜಿನಾಮ ಕೊಡಲೇಬೇಕು.

ಶ್ರೀಮತಿ ಲಲಿತಾನಾಯಕ್ ಇವರು ತೀರಾ ಹಿಂದುಳಿದ ಜನಾಂಗಕ್ಕೆ ಸೇರಿದ ಒಬ್ಬ ಮಂತ್ರಿ. ಅದೂ ಮಹಿಳಾ ಮಂತ್ರಿ. ವಿನಾ ಕಾರಣ, ಅವರ ಪಾತ್ರ ಏನೇನೂ ಈ ಘಟನೆಯಲ್ಲಿ ಇಲ್ಲದಿದ್ದರೆ ಅವರ ರಾಜಿನಾಮೆ ಕೇಳುವ ಬೇಡಿಕೆ ಸಮಂಜಸವಾಗಲಿಕ್ಕಿಲ್ಲ ಎಂಬುದು ನಮ್ಮ ಅಭಿಮತ. ಈ ಘಟನೆ ದಲಿತರಿಗುಂಟು ಮಾಡಿರುವ ನೋವು ಇಡೀ ಪ್ರಜಾಪ್ರಭುತ್ವ ವಿಭಾಗಗಳಿಂದು ಮಾಡಿರುವ ನೋವು. ಆದರೆ ಇದನ್ನು ದಲಿತರ ಬಗ್ಗೆ ಕೇವಲ ಅಧಿಕಾರ ದೃಷ್ಟಿಯಿಂದ ಮೊಸಳೆ ಕಣ್ಣೀರು ಹಾಕುವವರು ದುರ್ಲಾಭ ಪಡೆಯಲು ಅವಕಾಶ ನೀಡಬಾರದು.

ರಾಜ್ಯ ಸರಕಾರವು ಕೂಡಲೇ ಒಂದು ಹೈಕೋರ್ಟ್ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆಗೆ ಆಜ್ಞೆ ಕೊಡಬೇಕೆಂದೂ, ಆ ತನಿಖಾ ವರದಿ ಬಂದಾಕ್ಷಣ, ಅದರಲ್ಲಿ ಶ್ರೀಮತಿ ಲಲಿತಾನಾಯಕರ ಸ್ವಂತ ಪ್ರೇರಣೆ ಇತ್ತು ಎಂದು ಕಂಡು ಬಂದರೆ ಅವರು ರಾಜಿನಾಮೆ ಕೊಡಬೇಕೆಂದು ನಾವು ಒತ್ತಾಯಿಸುತ್ತೇವೆ.

ಅಸಂಘಟಿತ ಕಾರ್ಮಿಕರ ಹೋರಾಟ ತೀವ್ರ ಮಟ್ಟಕ್ಕೆ

ಡಿಸೆಂಬರ್ 18ರಿಂದ ಲೇಬರ್ ಇಲಾಖೆಯ ಕಛೇರಿಗಳ ಪಿಕೆಟಿಂಗ್

ಅಸಂಘಟಿತ ಕಾರ್ಮಿಕರ ದೀರ್ಘಕಾಲದಿಂದ ನಡೆಯುತ್ತಿರುವ ಅನ್ಯಾಯಗಳನ್ನು ಸರಿಪಡಿಸುವ ಹೋರಾಟವನ್ನು ರಾಜ್ಯದಲ್ಲಿ ತೀವ್ರಗೊಳಿಸಲು ಸಿಐಟಿಯು ನಿರ್ಧರಿಸಿದೆ. ನವಂಬರ್ 11 ಹಾಗೂ 12ರಂದು ಮಂಗಳೂರಿನಲ್ಲಿ ಸಭೆ ಸೇರಿದ್ದ ಸಿಐಟಿಯು ಕರ್ನಾಟಕ ರಾಜ್ಯ ಮಂಡಳಿ ಡಿಸೆಂಬರ್ 18ರಿಂದ 2 ಹಂತಗಳ ಹೋರಾಟವನ್ನು ಆರಂಭಿಸಲು ನಿರ್ಧರಿಸಿದೆ. ಮೊದಲನೆಯ ಹಂತದಲ್ಲಿ ಡಿಸಬರಂ 18ರಿಂದ 23ರವರೆಗೆ ರಾಜ್ಯವ್ಯಾಪಿಯಾಗಿ ಎಲ್ಲಾ ಲೇಬರ್ ಇಲಾಖೆ ಕಛೇರಿಗಳೆದುರು ಪಿಕೆಟಿಂಗ್ ನಡೆಸಲಾಗುವುದು ಹಾಗೂ ಎರಡನೆಯ ಹಂತದಲ್ಲಿ ಡಿಸೆಂಬರ್ 26ರಿಂದ ಅಸಂಘಟಿತ ಕಾರ್ಮಿಕರು ಅನಿರ್ದಿಷ್ಟಕಾಲದ ಮುಷ್ಕರ ನಡೆಸುವರು ಎಂದು ಸಿಐಟಿಯು ಹೇಳಿಕೆ ತಿಳಿಸಿದೆ.

ಈಗಿರುವ ಕಾರ್ಮಿಕ ಕಾನೂನುಗಳು ಜಾರಿಯಾಗದಿರುವುದರಿಂದ ಅಸಂಘಟಿತ ವಲಯದ ಕಾರ್ಮಿಕರಿಗೆ ಯಾವುದೇ ರಕ್ಷಣೆ ಸಿಗುತ್ತಿಲ್ಲ. ಕೊಡುವ ವೇತನ ಎಷ್ಟೆಂದು ಕೂಲಿಯ ಚೀಟಿ ಕೊಡತಕ್ಕದ್ದೆಂದು ಕನಿಷ್ಠ ವೇತನ ಕಾಯಿದೆ ಹೇಳುತ್ತದೆ. ಎಷ್ಟು ರೂಪಾಯಿ ಭವಿಷ್ಯ ನಿಧಿಗೆ ಮುರಿದಿದೆ ಎಂದು ಇದರಿಂದ ಮಾತ್ರ ಗುರುತಿಸುವುದು ಸಾಧ್ಯ. ಇದಿಲ್ಲದೆ ಲಕ್ಷಗಟ್ಟಲೆ ಕಾರ್ಮಿಕರಿಗೆ ಸೇರಬೇಕಾದ ಭವಿಷ್ಯ ನಿಧಿ, ಇ.ಎಸ್.ಐ., ಬೋನಸ್, ಗ್ರಾಚುಯಿಟಿ, ಪೆನ್ಶನ್ ಇತ್ಯಾದಿಗಳಿಂದ ಬೀಡಿ, ತೋಟ, ವಿದ್ಯುಚ್ಛಾಲಿತ ಮಗ್ಗ, ಹೋಟೆಲ್ ಮತ್ತು ಗಾರ್ಮೆಂಟ್ ಇತ್ಯಾದಿ ಕಾರ್ಮಿಕರು ವಂಚಿತರಾಗಿದ್ದಾರೆ. ಕಾನೂನು ಜಾರಿಯ ಬದಲಾಗಿ ಕಾನೂನು ಮುರಿಯುವುದು ಹೇಗೆಂದು ಸಲಹೆ ನೀಡುವುದೇ ರಾಜ್ಯದ ಭ್ರಷ್ಟ ಕಾರ್ಮಿಕ ನಿರೀಕ್ಷಕರ ಕೆಲಸ, ಇವರ ಉಸ್ತುವಾರಿ ನಡೆಸಬೇಕಾದ ಕಾರ್ಮಿಕ ಅಧಿಕಾರಿಗಳ ವರ್ತನೆಯೂ ಬೇರೆಯಾಗಿಲ್ಲ, ಕಾರ್ಮಿಕ ಸಚಿವಾಲಯ ಇಂದು ಮಾಲೀಕರ ಸಚಿವಾಲಯ ಆಗಿದೆ. ಹಿಂದೆಂದೂ ಕಾಣದ ರೀತಿಯಲ್ಲಿ ಮಾಲೀಕರು ಹಣದ ಮೂಟೆಯನ್ನು ಇಟ್ಟುಕೊಂಡು ಬೆಂಗಳೂರಿನ ಸಂಬಂಧಪಟ್ಟ ಕಛೇರಿಗಳಲ್ಲಿ ತಿರುಗುತ್ತಿರುವ ದೃಶ್ಯ ಕಾಣಬಹುದು ಎಂದು ಸಿಐಟಿಯು ರಾಜ್ಯ ಮಂಡಳಿ ಪ್ರಸ್ತುತ ಪರಿಸ್ಥಿತಿಯನ್ನು ವರ್ಣಿಸಿದೆ. 9.5.95ರಂದು ಹೊರಡಿಸಿದ ಕರಡು ನಿರ್ಣಯದ ಪ್ರಕಾರ ರಾಜ್ಯದ ಬೀಡಿ ಕಾರ್ಮಿಕರಿಗೆ ರೂಪಾಯಿ 36.85 ಸಾವಿರ ಬೀಡಿ ಸುತ್ತಲು ನೀಡಬೇಕು ಎಂದು ನಿರ್ಧರಿಸಲಾಗಿತ್ತು. 2 ತಿಂಗಳೊಳಗೆ ಅಂತಿಮ ಅಧಿಸೂಚನೆ ಹೊರಡಿಸಬೇಕಾಗಿತ್ತು ಆದರೆ 6 ತಿಂಗಳಾದರೂ ಅಧಿಸೂಚನೆಯನ್ನು ಹೊರಡಿಸಿಲ್ಲ-ಇದು ಕಾರ್ಮಿಕ ಇಲಾಖೆಯ, ಕಾರ್ಮಿಕ ಮಂತ್ರಿಗಳ ಕಾರ್ಯನಿರ್ವಹಣೆಯ ವೈಖರಿಯ ಒಂದು ಉದಾಹರಣೆ.

ಪುಟ 3 ನೋಡಿ

"ಸಮುದಾಯ"ಕ್ಕೆ ಇಪ್ಪತ್ತು ವರ್ಷ

ನವಂಬರ್ 28ರಿಂದ ಒಂದು ವಾರದ ಜನಸಂಸ್ಕೃತಿ ಉತ್ಸವ

ರಾಜ್ಯದ ದುಡಿಯುವ ಜನರ ಆಂದೋಲನದ ಪ್ರೀತಿಗೆ ಪಾತ್ರವಾಗಿರುವ ಸಂಘಟನೆ "ಸಮುದಾಯ"ಕ್ಕೆ ಈಗ ಇಪ್ಪತ್ತು ವರ್ಷ. 1975ರಲ್ಲಿ ತುರ್ತು ಪರಿಸ್ಥಿತಿಯ ಕಾರ್ಗತ್ತಲೆಯ ನಡುವೆ ಮೂಡಿ ಬಂದ ಈ ರಾಜ್ಯ ಮಟ್ಟದ ಸಾಂಸ್ಕೃತಿಕ ಸಂಘಟನೆ ಜನಪರ ಸಂಸ್ಕೃತಿ ಹಾಗೂ ಜನಜಾಗೃತಿಗಾಗಿ ಕಂಕಣಬದ್ಧವಾದ ಚಳುವಳಿ. ಆದ್ದರಿಂದಲೇ ಕೆಲವೇ ವೃತ್ತಿ ರಂಗಕರ್ಮಿಗಳಿಗೇ ಸೀಮಿತವಾಗದೆ ಟ್ರೇಡ್ ಯೂನಿಯನ್ ಕಾರ್ಯಕರ್ತರನ್ನು, ಇತರ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರನ್ನು ಆಕರ್ಷಿಸಿ ರಂಗ ಚಟುವಟಿಕೆಗಳ ಹರಹನ್ನು ವಿಸ್ತರಿಸಿದ ಸಂಘಟನೆ. ತನ್ನ ಎರಡು ದಶಕಗಳ ಅಸ್ತಿತ್ವದಲ್ಲಿ ಹಲವಾರು ನಾಟಕ ಪ್ರಯೋಗಗಳು, ಸಾಂಸ್ಕೃತಿಕ ಜಾಥಾಗಳು, ಕಲಾ ಮೇಳಗಳು ಹಾಗೂ ವಿಚಾರ ಸಂಕಿರಣಗಳು, ಎಲ್ಲಕ್ಕೂ ಮಿಗಿಲಾಗಿ ವ್ಯವಸ್ಥೆಯ ಕ್ರೌರ್ಯದ ವಿರುದ್ಧ ಜನಪರ ಆಂದೋಲನಗಳಲ್ಲಿ ಅದು ವಹಿಸಿದ ಸಾಂಸ್ಕೃತಿಕ ಪಾತ್ರದ ಮೂಲಕ ಆಧುನಿಕ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಗೆ ಅತ್ಯಂತ ಮೌಲಿಕವಾದ ಕೊಡುಗೆ ನೀಡಿದೆ.

ರಾಜ್ಯಾದ್ಯಂತ ಕ್ರಿಯಾಶೀಲವಾಗಿರುವ 25ಕ್ಕೂ ಹೆಚ್ಚು ಘಟಕಗಳನ್ನು ಹೊಂದಿರುವ 'ಸಮುದಾಯ' ಇಪ್ಪತ್ತು ವರ್ಷಗಳನ್ನು ಪೂರೈಸಿರುವ ಸಂದರ್ಭದಲ್ಲಿ ಎರಡು ದಶಕಗಳ ಸತ್ವಪೂರ್ಣ ಕೆಲಸಗಳನ್ನು ವಿಶಿಷ್ಟ ರೀತಿಯಲ್ಲಿ ನೆನಪು ಮಾಡಿಕೊಳ್ಳುವ ಸಲುವಾಗಿ ಒಂದು ಬೃಹತ್ ಸಾಂಸ್ಕೃತಿಕ ಉತ್ಸವನ್ನು ಏರ್ಪಡಿಸಲು ನಿರ್ಧರಿಸಿದೆ. ಇದನ್ನು 'ಜನಸಂಸ್ಕೃತಿ ಉತ್ಸವ' ಎಂದು ಹೆಸರಿಸಿದ್ದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನವಂಬರ್ 28ರಿಂದ ಡಿಸೆಂಬರ್ 3ರವರೆಗೆ ನಡೆಯುತ್ತದೆ. ಉತ್ಸವದ ಅಂಗವಾಗಿ 'ಸಮುದಾಯ' ಘಟಕಗಳು ಪ್ರದರ್ಶಿಸುವ ಹೊಸ ರಂಗನಾಟಕಗಳು ಮತ್ತು ಬೀದಿ ನಾಟಕಗಳು ಅಲ್ಲದೆ ನೆರೆ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಮಹಾರಾಷ್ಟ್ರ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳ ಪ್ರತಿಷ್ಠಿತ ನಾಟಕ ತಂಡಗಳು ತೆಲುಗು, ತಮಿಳು, ಮಲೆಯಾಳಂ, ಹಿಂದಿ ಮತ್ತು ಬಂಗಾಲಿ ಭಾಷೆಯ ನಾಟಕಗಳನ್ನು ಪ್ರದರ್ಶಿಸುತ್ತಾರೆ. ಇದೇ ಸಂದರ್ಭದಲ್ಲಿ ರಂಗಭೂಮಿ ಮತ್ತು ರಂಗ ಚಳುವಳಿಗೆ ಗಣನೀಯ ಸೇವೆ ಸಲ್ಲಿಸಿದ ವ್ಯಕ್ತಿಗಳನ್ನು ಸನ್ಮಾನಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಈ ಉತ್ಸವದ ಸಂಘಟಕರು ತಿಳಿಸಿದ್ದಾರೆ.

ಈ ಉತ್ಸವದ ಕೆಲವು ಪ್ರಮುಖ ಕಾರ್ಯಕ್ರಮಗಳು ಇಂತಿವೆ- ನವಂಬರ್ 30ರಂದು ಸಂಜೆ, ಕರ್ನಾಟಕ, ಗುಜರಾತ್ ಮತ್ತು ಪ. ಬಂಗಾಳದ ಪ್ರಸಿದ್ಧ ಜಾನಪದ ಗಾಯಕರಿಂದ ಜನಪರ ಹಾಡುಗಳ ಕಾರ್ಯಕ್ರಮ, ಡಿಸೆಂಬರ್ 3ರಂದು ರಂಗಭೂಮಿಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ, ನಾಡಿನ ಖ್ಯಾತ ಹಾಗೂ ತರುಣ ಕಲಾವಿದರ ಕಲಾಕೃತಿಗಳ ವಿಶಿಷ್ಟ ಕಲಾಮೇಳ, ಉತ್ಸವದ ಅಂಗವಾಗಿ ಭಾರತೀಯ ರಂಗಭೂಮಿಯ ಇಂದಿನ ಸ್ವರೂಪವನ್ನು ಪರಿಚಯಿಸುವ, ಉಪಯುಕ್ತ ಸ್ಮರಣ ಸಂಚಿಕೆ ಪ್ರಕಟಣೆ, ಇವುಗಳೊಂದಿಗೆ ಸಮುದಾಯದ ಹಾಡುಗಳ ಧ್ವನಿಸುರಳಿ, ಎರಡು ದಶಕಗಳ ಸಮುದಾಯ ಚಳುವಳಿಯನ್ನು ಪರಿಚಯಿಸುವ ಕಿರುಹೊತ್ತಿಗೆಗಳ ಬಿಡುಗಡೆ ಇನ್ನು ಮುಂತಾದವುಗಳು ನಡೆಯಲಿವೆ.

ಈ ಉತ್ಸವದಲ್ಲಿ ಸ್ಥಳೀಯ ಕಲಾವಿದರು, ಆಸಕ್ತರಲ್ಲದೆ, ದೇಶ ಹಾಗೂ ನಾಡಿನ ವಿವಿಧ ಭಾಗಗಳಿಂದ ಸುಮಾರು 400ಕ್ಕೂ ಮಿಗಿಲಾಗಿ ಕಲಾವಿದರು ಭಾಗವಹಿಸುವ ನಿರೀಕ್ಷೆಯಿದೆ.

ನವಂಬರ್ 28ರಂದು ಖ್ಯಾತ ಸಿನಿಮಾ ಹಾಗೂ ರಂಗ ನಿರ್ದೇಶಕ ಎಂ.ಎಸ್. ಸತ್ಯು ಈ ಉತ್ಸವದ ಉದ್ಘಾಟನೆ ನಡೆಸುವರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಡಾ.ಕೆ. ಮರುಳಸಿದ್ದಪ್ಪ ಹಾಗೂ ಖ್ಯಾತ ರಂಗ ನಿರ್ದೇಶಕ ಸಿ.ಜಿ.ಕೃಷ್ಣಸ್ವಾಮಿ ಮುಖ್ಯ ಅತಿಥಿಗಳಾಗಿರುವರು. ರಾಷ್ಟ್ರೀಯ ನಾಟಕ ಶಾಲೆಯ ಬೆಂಗಳೂರಿನ ಪ್ರಾದೇಶಿಕ ಸಂಪನ್ಮೂಲ ಕೇಂದ್ರದ ನಿರ್ದೇಶಕರಾದ ಬಿ.ಜಯಶ್ರೀ ಸ್ಮರಣ ಸಂಚಿಕೆ ಬಿಡುಗಡೆ ಮಾಡುತ್ತಾರೆ. ರಾಜ್ಯ ಸಮುದಾಯ ಸಮನ್ವಯ ಸಮಿತಿಯ ಅಧ್ಯಕ್ಷರಾದ ಸಿ. ಬಸವಲಿಂಗಯ್ಯ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸುತ್ತಾರೆ.

ನವಂಬರ್ 29ರಂದು ರಂಗ ನಿರ್ದೇಶಕ ಸಿ.ಜಿ.ಕೃಷ್ಣಸ್ವಾಮಿ ಬೀದಿ. ನಾಟಕೋತ್ಸವದ ಉದ್ಘಾಟನೆ ನಡೆಸುತ್ತಾರೆ.

ನವಂಬರ್ 30ರಂದು ಎ.ಡಿ.ಎ. ರಂಗಮಂದಿರದಲ್ಲಿ ವಿವಿಧ ಪ್ರಾಕಾರಗಳಲ್ಲಿನ ಎಂಟು ಪ್ರಖ್ಯಾತ ಕಲಾವಿದರ ಸನ್ಮಾನ ಸಮಾರಂಭ ಹಾಗೂ ನೀಲಾ ಮತ್ತು ಕೋದಂಡರಾಮ್‌ರವರ ಕವನ ಸಂಕಲನ ಬಿಡುಗಡೆ ನಡೆಯುವುದು.

ಡಿಸೆಂಬರ್ 3ರಂದು ನಡೆಯುವ ವಿಚಾರ ಸಂಕಿರಣದಲ್ಲಿ ಖ್ಯಾತ ನಾಟಕಕಾರ ಹಾಗೂ ನಿರ್ದೇಶಕ ಪ್ರಸನ್ನ, ಕಲಾ ವಿಮರ್ಶಕ ಸುನೀತ್ ಚೋಪ್ರಾ, ರವೀಂದ್ರಭಾರತಿ ವಿಶ್ವವಿದ್ಯಾಲಯದ ಪ್ರೊ. ಅಶೋಕ್ ಮುಖರ್ಜಿ, ರಂಗ ನಿರ್ದೇಶಕ ಸಿ.ಬಸವಲಿಂಗಯ್ಯ, ಕತೆಗಾರ ಫಕೀರ್ ಮಹಮ್ಮದ್ ಕಟ್ಪಾಡಿ, ನಾಟಕಕಾರ ಲಿಂಗದೇವರು ಹಳೆಮನೆ, ನಾಟಕಕಾರ, ಕವಿ ಹೆಚ್.ಎಸ್.ಶಿವಪ್ರಕಾಶ್ ಹಾಗೂ ಪತ್ರಿಕಾ ಸಂಪಾದಕ ಬಿ.ವಿ. ವೈಕುಂಠರಾಜು ಭಾಗವಹಿಸುತ್ತಾರೆ.

ಉತ್ಸವದ ಸಮಾರೋಪ ಸಮಾರಂಭ ಡಿಸೆಂಬರ್ 4ರಂದು ನಡೆಯಲಿದೆ. ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ಮಾಜಿ ನಿರ್ದೇಶಕರಾದ ಶ್ರೀಮತಿ ಕೀರ್ತಿಜೈನ್, ನಾಟಕಕಾರ ಪ್ರಸನ್ನ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ವೈ.ಕೆ. ಮುದ್ದುಕೃಷ್ಣ ಭಾಗವಹಿಸುತ್ತಾರೆ.

ಪ್ರತಿದಿನ ಸಂಜೆ 4.30ಕ್ಕೆ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ತಮಿಳುನಾಡಿನ ಚೈನ್ನೈಕಲೈ ಕುಳು ಹಾಗೂ ಆಂಧ್ರಪ್ರದೇಶದ ಆಂಧ್ರ ಪ್ರಜಾ ನಾಟ್ಯ ಮಂಡಲಿ ಹಾಗೂ ಸಮುದಾಯ ಘಟಕಗಳಿಂದ ಬೀದಿ ನಾಟಕಗಳಿರುತ್ತವೆ.

ಪ್ರದರ್ಶನಗೊಳ್ಳುವ ನಾಟಕಗಳು

ನವಂಬರ್ 28

ಹೆಚ್.ಎಸ್. ಶಿವಪ್ರಕಾಶ್‌ರವರ 'ಮಹಾಚೈತ್ರ' ಇಕ್ಬಾಲ್ ಹುಸೇನ್ ನಿರ್ದೇಶನದಲ್ಲಿ, ಬೆಂಗಳೂರಿನ 'ಸಮುದಾಯ' ತಂಡದಿಂದ

ನವಂಬರ್ 29

ಮಲೆಯಾಳಿ ನಾಟಕ "ಸ್ವಾತಂತ್ರ್ಯತ್ತಿಂಡೆ ಮುರುವುಗಳ್" ಕೇರಳದ ಕಣ್ಣೂರಿನ 'ಸಂಘ ಚೇತನ' ತಂಡದಿಂದ

ಡಿಸೆಂಬರ್ 1

ಬಾದಲ್ ಸರ್ಕಾರ್‌ರವರ "ಸ್ಪಾರ್ಟಕಸ್" ವಾಲ್ಟರ್ ಡಿಸೋಜ ನಿರ್ದೇಶನದಲ್ಲಿ ಧಾರವಾಡ "ಸಮುದಾಯ" ತಂಡದಿಂದ ಹಾಗೂ "ದಫನ್", ಎಸ್.ಮಾಲತಿಯವರ ನಿರ್ದೇಶನದಲ್ಲಿ, ಸಿಂಧನೂರು 'ಸಮುದಾಯ'ದಿಂದ

ಡಿಸೆಂಬರ್ 2

ಎಸ್.ಆರ್. ರಮೇಶ್ ನಿರ್ದೇಶನದಲ್ಲಿ 'ರಾವಿ ನದಿಯ ದಂಡೆಯಲ್ಲಿ', ಮೈಸೂರು 'ಸಮುದಾಯ' ತಂಡದವರಿಂದ ಹಾಗೂ ಭೀಷ್ಮ ಸಹಾನಿಯವರ 'ಕಬೀರ್', ಸುರೇಶ್ ಅನಗಳ್ಳಿಯವರ ನಿರ್ದೇಶನದಲ್ಲಿ, ಕುಂದಾಪುರದ 'ಸಮುದಾಯ' ತಂಡದಿಂದ

ಡಿಸೆಂಬರ್ 3

ಮುಂಬೈಯ 'ಇಪ್ಟಾ' ತಂಡದಿಂದ "ಆಖ್ರಿ ಪೇಶ್", ಜಸ್‌ಪಾಲ್ ಸಂಧು ನಿರ್ದೇಶನದಲ್ಲಿ ಹಾಗೂ ದೇವೇಂದ್ರರಾಜ್ ಅಂಕುರ್‌ರವರ ನಿರ್ದೇಶನದಲ್ಲಿ 'ಖಾನ್ ಬದೋಶ್', ನವದೆಹಲಿಯ 'ಸಂಭವ್' ತಂಡದಿಂದ

ಡಿಸೆಂಬರ್ 4

ಪಶ್ಚಿಮ ಬಂಗ ನಾಟಕ ಅಕಾಡೆಮಿಯಿಂದ, ಅಶೋಕ ಮುಖರ್ಜಿ ನಿರ್ದೇಶನದಲ್ಲಿ, ಟ್ಯಾಗೋರರ "ಚಿರಕುಮಾರ ಸಭಾ" ಹಾಗೂ ಗುಲ್ಬರ್ಗಾ 'ಸಮುದಾಯ' ತಂಡದಿಂದ, ಸಿ.ಬಸವಲಿಂಗಯ್ಯನವರ ನಿರ್ದೇಶನದಲ್ಲಿ "ಉಚಲ್ಯಾ" ಆತ್ಮಕಥಾ ಪ್ರಯೋಗ

ನಾಟಕಗಳು ಎ.ಡಿ.ಎ. ರಂಗಮಂದಿರ ದಲ್ಲಿ (ನವಂಬರ್ 30 ಹಾಗೂ 1ರಂದು) ಹಾಗೂ ರವೀಂದ್ರ ಕಲಾಕ್ಷೇತ್ರದಲ್ಲಿ (ಉಳಿದ ದಿನಗಳಂದು) ಪ್ರಯೋಗಗೊಳ್ಳುತ್ತವೆ.

ಇದು ಹೊಸ ಆರ್ಥಿಕ ವ್ಯವಸ್ಥೆ

ನೀವು ಕೊಚ್ಚಿಕೊಳ್ಳಬಹುದು,
ಪ್ರಾಚೀನ ನಾಗರೀಕತೆ ನಿಮದೆಂದು.
ಆದರೆ ನಿಮಗೆ ನಾಚಿಕೆಯಾಗಬೇಕು...!
ನಿಮ್ಮ ದುರ್ವಾಸನೆಯ ದೇಹ, ಉಸಿರುಗಳಿಗೆ
ನಾವು ಕೊಡುತ್ತೇವೆ
ಪರಿಮಳದ ಸೋಪು ಮೌತ್‌ವಾಷ್‌ಗಳು

ನಾಚಿಕೆಯಾಗಬೇಕು ನಿಮಗೆ........!
ನಿಮ್ಮ ಬಟ್ಟೆಗಳು ಕೊಳಕು.
ಕೊಡುತ್ತೇವೆ ನಾವು ಡಿಟರ್ಜೆಂಟ್‌ಗಳು
ನಾಚಿಕೆಯಾಗಬೇಕು ನಿಮಗೆ.....!
ನೀವೆಂತಹ ಕೆಟ್ಟ ಆಹಾರ ಕಬಳಿಸುತ್ತೀರಿ,
ನಮ್ಮ ಫಾಸ್ಟ್ ಫುಡ್ ರುಚಿ ಸವಿಯಿರಿ

ನಾಚಿಕೆಯಾಗಬೇಕು ನಿಮಗೆ......!
ನಿಮಗೊಳ್ಳೆ ಇಂಗ್ಲಿಷ್ ಬಾರದು
ಸ್ಟಾರ್ ಪ್ಲಸ್, ಬಿಬಿಸಿಗಳು ಮತ್ತೆ
ನಿಮಗಲ್ಲವೆ ಇರುವುದು

ನಾಚಿಕೆಯಾಗಬೇಕು ನಿಮಗೆ.....!
ಎಂಥ ಮೂರ್ಖ ಸಿನಿಮಾ ನೀವು ನೋಡುವುದು!
ಇಗೊಳ್ಳಿ ನಿಮ್ಮ ಭಾಷೆಗೆ ನಮ್ಮ ಸಿನಿಮಾದ ಡಬ್

ನಾಚಿಕೆಯಾಗಬೇಕು ನಿಮಗೆ.....!
ಬಾರದು ನಾಡು ನಿಮ್ಮ ಗಗನಸಖಿಗೆ
ಕೊಡಲಿದ್ದೇವೆ ನಮ್ಮ ವಿಮಾನವನ್ನೇ ನಿಮಗೆ

ನಾಚಿಕೆಯಾಗಬೇಕು ನಿಮಗೆ.....!
ಕೆಲಸಕ್ಕೆ ಬಾರವು ನಿಮ್ಮ ಕೈಗಾರಿಕೆಗಳು
ನಿಮಗಾಗಿ ಕಾದಿವೆ ನಮ್ಮ ಉತ್ಪನ್ನಗಳು
ನಾಚಿಕೆಯಾಗಬೇಕು ನಿಮಗೆ......!
ಕೊಡುವೆವು ನಾವು ನಿಮಗೆ
ಅಯ್ಡ್ಸ್, ಪ್ಲಾಸ್ಟಿಕ್
ನಿಮ್ಮನ್ನು ಕೊಲ್ಲಲಾರರಲ್ಲಾ!
ಜೊತೆಗೆ ಸಾಲ ಮತ್ತು ಅವಮಾನ
ಮತ್ತು
ಒಂದು ಆಯ್ಕೆಯನ್ನು ನಿಮಗೆ ನೀಡುತ್ತೇವೆ!
ಸಾಲದಿಂದ ಸಾಯುತ್ತೀರೋ ಕುಪೋಷಣೆಯಿಂದಲೋ ಅಥವಾ ಹಸಿವಿನಿಂದಲೋ
ಅಮ್ಮ ನಿಮಗೆ ಇಷ್ಟೇ ಅಲ್ಲ
ನಿಮಗಿಲ್ಲಾ ಇದೆ
ಆಯ್ಕೆಯ ಪ್ರಜಾಸತ್ತಾತ್ಮಕ ಮಾನವ ಹಕ್ಕು

(ಇಂಗ್ಲಿಷ್ ಮೂಲ: ಕೆ. ಅಶೋಕ್ ರಾವ್
People's Science ಪತ್ರಿಕೆಯಲ್ಲಿ ಪ್ರಕಟವಾದ ಈ ಕವನವನ್ನು ಹಾಸನದ ರವಿಕುಮಾರ್ ಕೆ.ಎಸ್. ಅನುವಾದಿಸಿ ನಮಗೆ ಕಳಿಸಿಕೊಟ್ಟಿದ್ದಾರೆ)

ಜನತೆಯೆಡೆಗೆ ಮಾರ್ಕ್ಸ್‌ವಾದೀ ಸಾಹಿತ್ಯ ಕೇರಳದಲ್ಲಿ "ಚಿಂತಾ" ಪ್ರಕಾಶನದ ಮಾದರಿ

ಕೇರಳದಲ್ಲಿ ನಾಲ್ಕು ಆವೃತ್ತಿಗಳಲ್ಲಿ ಬಂದ 'ದೇಶಾಭಿಮಾನಿ' ದೈನಿಕ, ದೇಶಾಭಿಮಾನಿಯ ವಾರಿಕ ಹಾಗೂ 'ಚಿಂತಾ' ವಾರಪತ್ರಿಕೆಯೊಂದಿಗೆ 'ಚಿಂತಾ ಪ್ರಕಾಶನ' ಜನ-ಪರ ವಿಚಾರಧಾರೆಯನ್ನು ಜನಗಳ ನಡುವೆ ಪ್ರಚಾರ ಮಾಡುತ್ತಿದೆ. ಇದು ಸಾಮಾನ್ಯವಾಗಿ ಪ್ರಸ್ತುತ ವಿದ್ಯಮಾನಗಳು, ವಿಷಯಗಳ ಬಗ್ಗೆ ಕಿರುಹೊತ್ತಿಗೆಗಳನ್ನಲ್ಲದೆ ಹಲವು ವಿಷಯಗಳ ಮೇಲೆ ದೊಡ್ಡ ಪುಸ್ತಕಗಳನ್ನು ಪ್ರಕಟಿಸುತ್ತಿದೆ. ಆದರೆ ಇದು ಇತರ ಪ್ರಕಾಶನಗಳಂತೆ ಕೇವಲ ಪುಸ್ತಕಗಳನ್ನು ಪ್ರಕಟಿಸುವುದಕ್ಕೆ ಸೀಮಿತಗೊಂಡಿಲ್ಲ. ಸಾಹಿತ್ಯ ಮಾರಾಟದ ಒಂದು ವ್ಯವಸ್ಥೆಯನ್ನೇ ಸೃಷ್ಟಿಸಿ ಜನಗಳ ಸಂಪರ್ಕವೂ ಆಗಿದೆ.

ಪುಸ್ತದ ಸಾಹಿತ್ಯವನ್ನು ಜನಪ್ರಿಯಗೊಳಿಸಲು ಕೇರಳದಲ್ಲಿ ಅನುಸರಿಸುವ ಒಂದು ವಿಧಾನವೆಂದರೆ ಇ.ಎಂ.ಎಸ್., ಇ.ಕೆ.ನಾಯನಾರ್‌ರಂತಹ ಮುಖಂಡರ ಸಾರ್ವಜನಿಕ ಭಾಷಣಗಳನ್ನು ಏರ್ಪಡಿಸುವುದು. ಆ ಸಂದರ್ಭದಲ್ಲಿ ಒಂದು ವಿಶಿಷ್ಟ ಪುಸ್ತಕ ಸಭಿಕರಿಗೆ ಖರೀದಿಗೆ ದೊರೆಯುವಂತೆ ಮಾಡುವುದು. ಈ ಪುಸ್ತಕದ ಬಿಡುಗಡೆ ಮಾಡುವ ಭಾಷಣಕಾರರು ಅದರ ಬಗ್ಗೆ ಮಾತನಾಡುತ್ತಾರೆ. ಈ ಕಾರ್ಯಕ್ರಮದ ಬಗ್ಗೆ ಮೊದಲೇ ಸಾಕಷ್ಟು ಪ್ರಚಾರ ನಡೆಸುವುದರಿಂದ ಸಭೆಯಲ್ಲಿ ಸಾವಿರಾರು ಜನ ಭಾಗವಹಿಸುತ್ತಾರೆ ಹಾಗೂ ಸ್ಥಳದಲ್ಲೇ ಪುಸ್ತಕದ ಹಲವಾರು ಪ್ರತಿಗಳು ಮಾರಾಟವಾಗುತ್ತವೆ.

ಸಾಹಿತ್ಯ ಮಾರಾಟ ಮಾಡಲು ಅನುಸರಿಸುವ ಇನ್ನೊಂದು ವಿಧಾನವೆಂದರೆ 'ಪುಸ್ತಕ ಮೇಳ'ಗಳನ್ನು ಏರ್ಪಡಿಸುವುದು. ಇಲ್ಲಿ ಸಂಘಟಿತ ರೀತಿಯಲ್ಲಿ ಪುಸ್ತಕ ಮಾರಾಟ ನಡೆಯುತ್ತದೆ.

ಈ ಎರಡು ವಿಧಾನಗಳಿಂದ ಫೆಬ್ರವರಿ 1994ರಿಂದ ಸೆಪ್ಟೆಂಬರ್ 1995ರ ನಡುವೆ 2184006 ರೂ. ಮುಖಬೆಲೆಯ ಪುಸ್ತಕಗಳ ಮಾರಾಟ ನಡೆಯಿತು. ಈ ಅವಧಿಯಲ್ಲಿ 'ಚಿಂತಾ ಪ್ರಕಾಶನ' 30 ವಿವಿಧ ಪ್ರಕಟಣೆಗಳನ್ನು ತಂದಿತು. ಕೆಲವು ಒಂದಕ್ಕಿಂತ ಹೆಚ್ಚು ಆವೃತ್ತಿಗಳನ್ನೂ ಕಂಡವು.

ಚಿಂತಾ ಪ್ರಕಾಶನದ ಒಂದು ಪ್ರಮುಖ ಮಾಲಿಕೆಯೆಂದರೆ ಮಾರ್ಕ್ಸ್‌ವಾದಿ ಸಾಹಿತ್ಯದ ಮೂಲಗ್ರಂಥಗಳನ್ನು ಅರ್ಥ ಮಾಡಿಕೊಳ್ಳಲು ರಚಿಸಿದ ಮಾರ್ಗದರ್ಶಕಗಳು ಅಥವಾ ಗೈಡ್ ಪುಸ್ತಕಗಳು 'ಕಮ್ಯುನಿಸ್ಟ್ ಮ್ಯಾನಿಫೆಸ್ಟೋ' ಮಾರ್ಕ್ಸ್‌ರ "ಕ್ಯಾಪಿಟಲ್" ಹಾಗೂ ಮತ್ತಿತರ ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಕೃತಿಗಳ ಮೇಲೆ ಈಗಾಗಲೇ ಇಂತಹ ಗೈಡ್‌ಗಳು ಬಂದಿದ್ದು ಲೆನಿನ್‌ರ "ಪ್ರಭುತ್ವ ಮತ್ತು ಕ್ರಾಂತಿ, ಎಡಪಂಥೀಯ ಕಮ್ಯುನಿಸಂ" ಇತ್ಯಾದಿಗಳಲ್ಲಿ ಬಂದಿರುವ ವಿಷಯಗಳ ಬಗ್ಗೆ ನಾಲ್ಕು ಪ್ರಮುಖ ಪುಸ್ತಕಗಳು ಹಾಗೂ ಗ್ರಾಮ್ಸ್ಕಿಯವರ "ಸೆರೆಮನೆ ಟಿಪ್ಪಣಿಗಳು" ಕುರಿತ ...

ಬಳ್ಳಾರಿಯಲ್ಲಿ ಭಯೋತ್ಪಾದಕ ಕೃತ್ಯ - ಸಿಐಟಿಯು ಖಂಡನೆ

1947ರ ಕೈಗಾರಿಕಾ ವಿವಾದ ಕಾಯ್ದೆಯ ಪ್ರಕಾರ ಕಾನೂನುರೀತಿ ರಚನೆಗೊಂಡ ಕಾರ್ಮಿಕ ಸಂಘದ ಜತೆಗೆ ಚರ್ಚಿಸಲು ನಿರಾಕರಿಸುವ ಮಾಲೀಕರಿಗೆ 6 ತಿಂಗಳ ಜೈಲುವಾಸದ ಶಿಕ್ಷೆ ವಿಧಿಸಬೇಕು. ಆದರೆ ಕರ್ನಾಟಕ ಸರಕಾರ ಈ ಕಾನೂನುಕ್ರಮ ಕೈಗೊಳ್ಳಲು ಹಿಂದೇಟು ಹಾಕುತ್ತಿದೆ. ಬಳ್ಳಾರಿ ಸ್ಟೀಲ್ಸ್ ಅಂಡ್ ಅಲಾಯ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಮಾಧವ ಎಂಬಾತ ಈ ಮೂಲಭೂತ ಪ್ರಜಾಪ್ರಭುತ್ವ ಹಕ್ಕನ್ನು ಮನ್ನಿಸಲು ನಿರಾಕರಿಸಿ ಕಾನೂನು ಬಾಹಿರ ಕೃತ್ಯ ನಡೆಸಿರುವುದಷ್ಟೇ ಅಲ್ಲ ಕಾರ್ಖಾನೆಯ ಕಾರ್ಮಿಕರ ಮೇಲೆ ಗೂಂಡಾ ಶಕ್ತಿಗಳ ಮೂಲಕ ದಬ್ಬಾಳಿಕೆ ನಡೆಸುತ್ತಿದ್ದಾರೆ. ಬಳ್ಳಾರಿಯಲ್ಲಿ ಕಾರ್ಮಿಕ ಚಳುವಳಿಯನ್ನು ಬಗ್ಗು ಬಡೆಯಲು ಸ್ಥಳೀಯ ಶಾಸಕ ಹಾಗೂ ಆತನ ಬೆಂಬಲಿಗರು ಭಯೋತ್ಪಾದಕ ವಾತಾವರಣ ಸೃಷ್ಟಿಸಿದ್ದಾರೆ. ಬಳ್ಳಾರಿಯ ಸಿಐಟಿಯು ಸಂಗಾತಿಗಳ ಪ್ರಾಣಕ್ಕೆ ಬೆದರಿಕೆ ಒಡ್ಡಲಾಗಿದೆ. ಆದ್ದರಿಂದ ರಾಜಕಾರಣಿಗಳ ವೇಷದಲ್ಲಿ ಗೂಂಡಾ ಪಡೆಗಳು ಮಾಡುವ ದುಷ್ಕೃತ್ಯಗಳನ್ನು ತಡೆಗಟ್ಟಲು ರಾಜ್ಯ ಸರಕಾರ ತುರ್ತುಕ್ರಮ ಕೈಗೊಳ್ಳಬೇಕೆಂದು ಸಿಐಟಿಯು ಆಗ್ರಹಪಡಿಸಿದೆ. ಇಂತಹ ಕಾರ್ಮಿಕ ವಿರೋಧಿ ಪ್ರವೃತ್ತಿಗಳನ್ನು ತಡೆಗಟ್ಟಲು, ಅಂತಹ ಪ್ರವೃತ್ತಿಯ ಮಾಲೀಕರ ಮೇಲೆ ಮೊಕದ್ದಮೆ ಹಾಕಲು ರಾಜ್ಯ ಸರಕಾರ ತನ್ನ ಆಡಳಿತೆಯನ್ನು ಸರಿಪಡಿಸಬೇಕೆಂದು ಸಿಐಟಿಯು ಒತ್ತಾಯಿಸಿದೆ. ಕಾರ್ಮಿಕ ವಿರೋಧಿ ಪ್ರವೃತ್ತಿಯನ್ನು ಸಾಬೀತು ಮಾಡಿದರೂ ಅಂತಹ ಮಾಲೀಕರ ಮೇಲೆ ಕ್ರಮ ಜರುಗಿಸಲು ಕಾರ್ಮಿಕ ಆಯುಕ್ತರ ಕಛೇರಿ, ಕಾರ್ಮಿಕ ಸಚಿವಾಲಯಕ್ಕೆ ಎಷ್ಟೇ ಪತ್ರ ಬರೆದರೂ ಕಾರ್ಮಿಕ ಸಚಿವಾಲಯ ಮತ್ತು ಸಚಿವರು ಅದನ್ನು ಬಚ್ಚಿಡುತ್ತಿದ್ದಾರೆ. ಕಾರ್ಮಿಕರ ಬೆಂಬಲ ಪಡೆದು ಆಡಳಿತಕ್ಕೆ ಬಂದ ಜನತಾದಳ ಸರಕಾರವನ್ನು ಮಾಲೀಕರ ಪರವಾಗಿ ತಿರುಗಿಸಲು ಯಶಸ್ವಿಯಾಗಿರುವ ಕಾರ್ಮಿಕ ಸಚಿವರನ್ನು ವಜಾ ಮಾಡಬೇಕೆಂದು ಸಿಐಟಿಯು ಕರೆ ನೀಡಿದೆ.

ಅಸಂಘಟಿತ ಕಾರ್ಮಿಕರ ಹೋರಾಟ ತೀವ್ರ ಮಟ್ಟಕ್ಕೆ

ಪುಟ 1ರಿಂದ

ರಾಜ್ಯದ ಕನಿಷ್ಠ ವೇತನ ಸಲಹಾ ಸಮಿತಿಯು ಯಾವುದೇ ಕೈಗಾರಿಕೆಯಲ್ಲಿ ದಿನ ಒಂದಕ್ಕೆ ರೂ. 37.55ರಿಂದ ಕಡಿಮೆ ಕನಿಷ್ಠ ಕೂಲಿ ನಿಗದಿ ಮಾಡಬಾರದೆಂದು ಮತ್ತು 1309 ಸೂಚ್ಯಂಕದ ಮೇಲೆ ಪ್ರತಿ ಸೂಚ್ಯಂಕಕ್ಕೆ ಮೂರೂವರೆ ಪೈಸೆ ತುಟ್ಟಿಭತ್ಯೆ ನೀಡಬೇಕೆಂದು ಸರ್ವಾನುಮತದಿಂದ ಸರಕಾರಕ್ಕೆ ಶಿಫಾರಸ್ಸು ಮಾಡಿತ್ತು. ಆದರೆ ಸರಕಾರ ಇದನ್ನು ಕಡೆಗಣಿಸುತ್ತಾ ಬಂದಿದೆ. ಪ್ಲಾಂಟೇಶನ್, ಬೀಡಿ ಮತ್ತು ವಿದ್ಯುಚ್ಚಾಲಿತ ಮಗ್ಗಗಳ(ಸಿಲ್ಕ್) ಕಾರ್ಮಿಕರ ಕನಿಷ್ಠ ಕೂಲಿಯ ಅಂತಿಮ ಪ್ರಕಟಣೆ ಹೊರಡಿಸಬೇಕೆಂಬುದು ಈಗ ಸಿಐಟಿಯುನ ಒಂದು ಪ್ರಮುಖ ಬೇಡಿಕೆ.

ಡಿ. 18-19 - ಪ್ಲಾಂಟೇಶನ್ ಕಾರ್ಮಿಕರ ಮುಷ್ಕರಕ್ಕೆ ಬೆಂಬಲ

ಐಎನ್‌ಟಿಯುಸಿ, ಎಐಟಿಯುಸಿ ಮತ್ತು ಸಿಐಟಿಯು ಒಟ್ಟು ಸೇರಿ ರಾಜ್ಯದ ತೋಟ ಕಾರ್ಮಿಕರ 2 ದಿನದ ಸಾಂಕೇತಿಕ ಮುಷ್ಕರ ಡಿಸೆಂಬರ್ 18 ಮತ್ತು 19ರಂದು ನಡೆಸಲು ಕರೆ ನೀಡಿದೆ. ತೋಟ ಕಾರ್ಮಿಕರ ಕನಿಷ್ಠ ಕೂಲಿಯ ಅಂತಿಮ ಅಧಿಸೂಚನೆಗೆ 16.12.95ರ ಒಳಗೆ ಬಡತನ ರೇಖೆಯಿಂದ ಕಡಿಮೆ ಆಗದ ಕೂಲಿ ನಿಗದಿ ಆಗದೇಹೋದಲ್ಲಿ ಈ ಮುಷ್ಕರ ನಡೆಯುವುದಲ್ಲದೆ ಮುಂದುವರೆದು 26.12.95ರಿಂದ ಅನಿರ್ದಿಷ್ಟ ಕಾಲದ ಮುಷ್ಕರ ನಡೆಸಬೇಕೆಂದು ಈ ಕೇಂದ್ರ ಕಾರ್ಮಿಕ ಸಂಘಟನೆಗಳು ಕರೆನೀಡಿರುವುದನ್ನು ಸಿಐಟಿಯು ಬೆಂಬಲಿಸಿದೆ.

"ಪೆನ್ಶನ್ ಯೋಜನೆಯನ್ನು ಸರಿಪಡಿಸಿ"

ಕೇಂದ್ರ ಸರಕಾರ 16.11.95ರಿಂದ ಜಾರಿಯಲ್ಲಿ ತಂದಿರುವ ಪೆನ್ಶನ್ ಸ್ಕೀಮ್ ಪ್ರಕಾರ 2015 ಇಸ್ವಿಯವರೆಗೆ 58 ವಯಸ್ಸು ಆಗಿ ನಿವೃತ್ತಿಯಾದವರ ಪೆನ್ಶನ್ ಆಗಲಿ 2005ನೇ ಇಸ್ವಿಯವರೆಗೆ ಮೊದಲೇ ನಿವೃತ್ತಿಯಾಗುವವರ ಪೆನ್ಶನ್ ಆಗಲಿ ಜಾರಿಯಾಗುವುದಿಲ್ಲ. 1971ರ ಕುಟುಂಬ ಪೆನ್ಶನ್ ಯೋಜನೆಯಲ್ಲಿ 24 ವರ್ಷ ಸೇವೆ ಸಲ್ಲಿಸಿದವರಿಗೆ ಮಾತ್ರ ಅಂದರೆ ಈಗ 53 ವರ್ಷ ವಯಸ್ಸಿನ ಮೇಲೆ ಆಗಿರುವವರಿಗೆ ಮಾತ್ರ ಅಂದಾಜು ರೂ. 450 ಮಾಸಿಕ ಸದಸ್ಯರ ಪೆನ್ಶನ್ ಆಗಿ ಅವರಿಗೆ 58 ವಯಸ್ಸಾದ ನಂತರ ಸಿಗುತ್ತದೆ. ಕಾರ್ಮಿಕ ಸಂಘದವರೊಟ್ಟಿಗಾಗಲೀ ಇತರ ಸಂಬಂಧಪಟ್ಟವರನ್ನಾಗಲೀ ಸಮಾಲೋಚಿಸದೆ ಏಕಾಏಕಿಯಾಗಿ ಸರಕಾರ ಈ ಯೋಜನೆಯನ್ನು ಜಾರಿಗೊಳಿಸಿದೆ.

ಈಗಿರುವ ಭವಿಷ್ಯ ನಿಧಿಯ ಒಂದು ಪಾಲು ಶೇ. 8.33 ಭವಿಷ್ಯನಿಧಿ ಸಂಸ್ಥೆಗೆ ನೀಡಲಾಗುತ್ತಿದೆ. ಈ ಅಸಲಿನ ಬಡ್ಡಿಯಾದರೂ ಪೆನ್ಶನ್ ಆಗಿ ಬರುವುದಿಲ್ಲ, ಕುಟುಂಬ ಪೆನ್ಶನ್ ಯೋಜನೆಯು ಕಳೆದ 25 ವರ್ಷದಲ್ಲಿ ಉಳಿತಾಯ ಮಾಡಿದ 7000 ಕೋಟಿ ರೂಪಾಯಿಗಳನ್ನು ಈಗ ಸರಕಾರ ವಹಿಸಿಕೊಂಡಿದೆ. ಅಲ್ಲದೆ ಈಗಿನ ಭವಿಷ್ಯ ನಿಧಿಯ ದರದಲ್ಲಿ ವರ್ಷಕ್ಕೆ 2000ಕೋಟಿ ರೂನ ಮೇಲೆ ಸರಕಾರ ಗಳಿಸುತ್ತದೆ. ಲಂಚರುಷುವತ್ತಿನ ಬಿಡಾರವಾಗಿರುವ ಭವಿಷ್ಯನಿಧಿ ಸಂಸ್ಥೆಯೇ ಪೆನ್ಶನ್ ಗೆ ಅರ್ಹರಾದವರಿಗೆ ಅದನ್ನು ನೀಡದೆ ಸಾವಿರಾರು ಕೋಟಿ ರೂ.ಗಳು ಪಾವತಿಯಾಗದೆ ಉಳಿದಿರುವಂತೆ ಮಾಡಿದಾಗ ಈ ಸಂಸ್ಥೆಯೇ ಈ ಪೆನ್ಶನ್ ಯೋಜನೆಯನ್ನು ನಿರ್ವಹಿಸುತ್ತದೆ ಎಂದಿರುವ ಸಿಐಟಿಯು ಪೆನ್ಶನ್ 3ನೇ ನಿವೃತ್ತಿ ಸೌಲಭ್ಯವಾಗಿ ನೀಡಬೇಕೆಂದು ಒತ್ತಾಯಿಸುತ್ತಿದೆ. ಅಸಲು ಹಿಂದಿರುಗಿಸುವುದಲ್ಲದೆ ಭವಿಷ್ಯನಿಧಿಯಲ್ಲಿ ಅಸಲು ಇರುವಷ್ಟು ಕಾಲ ಚಾಲ್ತಿ ಬಡ್ಡಿಯ ದರದಿಂದ ಕಡಿಮೆಯಾಗದ ಪೆನ್ಶನ್ ಸಿಗುವುದು ಕಾರ್ಮಿಕರ ಹಕ್ಕಾಗಿರುತ್ತದೆ ಎಂದು ಅದು ಹೇಳಿದೆ.

ಡಿಸೆಂಬರ್ 15ರ ಮತಪ್ರದರ್ಶನಕ್ಕೆ ಕರ್ನಾಟಕದಿಂದ ಒಂದು ತಂಡ

ಹೊಸ ಆರ್ಥಿಕ ನೀತಿಯನ್ನು ವಿರೋಧಿಸಿ ನವದೆಹಲಿಯಲ್ಲಿ ಸಂಸತ್ ಭವನದ ಎದುರು ಡಿಸೆಂಬರ್ 15, 95ರಂದು ಬೃಹತ್ ಮತಪ್ರದರ್ಶನ ನಡೆಸಲು ಅಖಿಲ ಭಾರತ ಸಾಮೂಹಿಕ ಸಂಘಟನೆಗಳ ವೇದಿಕೆ ಕರೆ ನೀಡಿದೆ. ದೆಹಲಿಯ ಮತಪ್ರದರ್ಶನಕ್ಕೆ ಕರ್ನಾಟಕ ಸಿಐಟಿಯು ಸಾವಿರ ಕಾರ್ಮಿಕರ ಒಂದು ತಂಡವನ್ನು ಕಳುಹಿಸಲು ನಿರ್ಧರಿಸಿದೆ. ಅಲ್ಲದೆ ರಾಜ್ಯದ ರಾಜಧಾನಿ ಮತ್ತು ಜಿಲ್ಲಾ ಕೈಗಾರಿಕಾ ಕೇಂದ್ರಗಳಲ್ಲಿ ಅಂದು ರಾಜ್ಯವ್ಯಾಪಿ ಮತಪ್ರದರ್ಶನ ನಡೆಸಲು ಸಿಐಟಿಯು ಕರೆ ನೀಡಿದೆ.

ಅಂಗನವಾಡಿ ಖಾಸಗೀಕರಣದ ವಿರೋಧ ಪ್ರತಿಭಟನೆ

ರಾಜ್ಯದ ರಾಜ್ಯ ಸರಕಾರ ನಡೆಸುತ್ತಿರುವ ಅಂಗನವಾಡಿ ಕೇಂದ್ರಗಳನ್ನು ಮಹಿಳಾ ಮಂಡಳಿಗಳಿಗೆ ನೀಡಿ ಖಾಸಗೀಕರಣ ಮಾಡುವುದಾಗಿ ರಾಜ್ಯದ ಮಹಿಳಾ ಮತ್ತು ಮಕ್ಕಳ ಇಲಾಖೆಯ ಮಂತ್ರಿ ಹೇಳಿರುವುದನ್ನು ಖಂಡಿಸಿರುವ ಸಿಐಟಿಯು ಮಂತ್ರಿಗಳು ಹಿಂದೆ ಹೆಚ್‌ಎಂಕೆಪಿಗೆ ಸೇರಿದ ಅಂಗನವಾಡಿ ಕಾರ್ಯಕರ್ತೆಯರ ಅಧ್ಯಕ್ಷರಾಗಿ ಜೂನ್ 17, 94ರಂದು ನಡೆಸಿದ ಖಾಸಗೀಕರಣ ವಿರೋಧದ ಚಳುವಳಿಯನ್ನು ಮರೆತು ತಮ್ಮದೇ ಸದಸ್ಯರಿಗೆ ವಂಚನೆ ಮಾಡುವ ಈ ಹೇಳಿಕೆ ನೀಡಿರುವುದು ಖಂಡನೀಯ ಎಂದಿದೆ.

ಅಖಿಲ ಭಾರತ ಜವಳಿ ಕಾರ್ಮಿಕರ ಡಿ. 12ರ ರ್‍ಯಾಲಿಗೆ ಬೆಂಬಲ

ರಾಷ್ಟ್ರೀಯ ಜವಳಿ ನಿಗಮಕ್ಕೆ ಸೇರಿದ ಗಿರಣಿಗಳನ್ನು ಮುಚ್ಚುವುದು ಕಾರ್ಮಿಕರನ್ನು ಹೊರಗೆ ಹಾಕುವುದನ್ನು ವಿರೋಧಿಸಿ ಅಖಿಲ ಭಾರತ ಕೇಂದ್ರ ಕಾರ್ಮಿಕ ಸಂಘಟನೆಗಳು ಒಂದುಗೂಡಿ ವಿರೋಧಿಸಿದ್ದಲ್ಲದೆ ಸರಕಾರದ ಈ ಧೋರಣೆಯನ್ನು ಬದಲಾಯಿಸುವುದಾಗಿ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳ ಜೊತೆಯಲ್ಲಿ ಒಪ್ಪಂದ ಮಾಡಿತ್ತು. ಈ ಒಪ್ಪಂದವನ್ನು ಜಾರಿ ಮಾಡಿಸುವ ಬದಲಾಗಿ ಬಿಐಎಫ್ಆರ್ ಮುಂದೆ ವಿವಾದವನ್ನು ಕಳುಹಿಸಿ ಸಮಸ್ಯೆಗಳನ್ನು ಹೆಚ್ಚಿಸಿರುವುದರ ವಿರುದ್ಧ ಅಖಿಲ ಭಾರತ ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ಸಮಿತಿ ಜವಳಿ ಕಾರ್ಮಿಕರ ಬೃಹತ್ ರ್‍ಯಾಲಿಯನ್ನು 1995ನೇ ಡಿಸೆಂಬರ್ 12ರಂದು ದೆಹಲಿಯಲ್ಲಿ ನಡೆಸಲು ಕರೆಕೊಟ್ಟಿದೆ. ಸಿಐಟಿಯು ಕರ್ನಾಟಕದ ಘಟಕವು ಈ ಜವಳಿ ಕಾರ್ಮಿಕರ ರ್‍ಯಾಲಿಗೆ 500 ಕಾರ್ಮಿಕರನ್ನು ಕಳುಹಿಸಲು ನಿರ್ಧರಿಸಿದೆ.

ಬೋನಸ್‌ನಲ್ಲಿ ವಂಚನೆ

ಬೋನಸ್ ಕಾಯಿದೆಯಲ್ಲಿರುವ ಮಿತಿಯನ್ನು ತೆಗೆದುಹಾಕುವುದಾಗಲೀ ಬೆಲೆಯೇರಿಕೆಗೆ ಅನುಗುಣವಾಗಿ ಬೋನಸ್ ಗೆ ಸಂಬಂಧಪಟ್ಟ ಮಿತಿಯನ್ನು ಹೆಚ್ಚಿಸಲು ಬಿಡದೆ ಲಕ್ಷಗಟ್ಟಲೆ ಕಾರ್ಮಿಕರಿಗೆ ಕೇಂದ್ರ ಸರಕಾರ ದ್ರೋಹ ಮಾಡಿದೆ. 1960ರ ಬೋನಸ್ ಕಾಯಿದೆ ಬೋನಸ್‌ಗೆಸಂಬಂಧಿಸಿದಸಂಬಳದಮಿತಿಯನ್ನು ರೂ. 750 ಮತ್ತು ರೂ. 1600ಕ್ಕೆ ನಿರ್ಧರಿಸಿದಾಗ ಗ್ರಾಹಕರ ಬೆಲೆ ಸೂಚ್ಯಂಕ 130 ಮಾತ್ರ ಆಗಿತ್ತು. ಈಗ ಇದೇ ಸೂಚ್ಯಂಕ 1600 ಪಾಯಿಂಟಿಗೆ ಅಂದರೆ 1965ರ 12 ಪಟ್ಟು ಹೆಚ್ಚಾಗಿರುತ್ತದೆ. ಆದುದರಿಂದ 1965ರ ಸಂಬಳದ ಮಿತಿ ರೂ. 750 ಈಗ ರೂ. 9000 ಮತ್ತು ಅಂದಿನ ಮಿತಿ ರೂ. 1600 ಇಂದು ರೂ. 18,200 ಆಗಬೇಕಿತ್ತು. ಇದರ ಬದಲಾಗಿ ಮಾಲೀಕರಿಗೆ ಸಹಾಯ ಮಾಡಲು ಕೇಂದ್ರ ಸರಕಾರ ಬೋನಸ್‌ನ ಮಿತಿಯನ್ನು ರೂ. 2500 ಮತ್ತು 3500ಕ್ಕೆ ಮಾತ್ರ ಮಾಡುವ ಮೂಲಕ ಸಂಘಟಿತ ವಲಯದ ಕಾರ್ಮಿಕರಿಗೆ ಬೋನಸ್ ಕಾಯಿದೆ ಅನ್ವಯವಾಗದಂತಾಗಿದೆಯೆಂದು ಸಿಐಟಿಯು ತನ್ನ ವಿರೋಧವನ್ನು ವ್ಯಕ್ತಪಡಿಸುತ್ತಾ ಬೋನಸ್ ಕಾಯಿದೆಯಲ್ಲಿ ವೇತನ ಮಿತಿಯನ್ನು ತೆಗೆದು ಹಾಕಲು ಒತ್ತಾಯಿಸಿದೆ.

ಪಾಲಿಟೆಕ್ನಿಕ್ ವಿದ್ಯಾರ್ಥಿಗಳ ಯಶಸ್ವಿ ಹೋರಾಟ

ಭಟ್ಕಳ: ಇಲ್ಲಿನ ಮುರ್ಡೇಶ್ವರದ ಆರ್.ಎನ್. ಶೆಟ್ಟಿ ರೂರಲ್ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಕಳೆದ 20 ದಿನಗಳಿಂದ ಹಂತ ಹಂತವಾಗಿ ಚಳುವಳಿ ನಡೆಸುತ್ತಾ ಬಂದು ಉಪವಾಸ ಸತ್ಯಾಗ್ರಹ ನಡೆಸುವ ಸಂದರ್ಭದಲ್ಲಿ ಆಡಳಿತ ಮಂಡಳಿಯು ಸತೀಶ ಶೆಟ್ಟಿ, ಎಸ್.ಎಫ್.ಐ. ವಿದ್ಯಾರ್ಥಿ ನಾಯಕರ ಜೊತೆ ಸಂಧಾನ ಮಾತುಕತೆ ನಡೆಸಿ 1 ತಿಂಗಳೊಳಗೆ ಎಲ್ಲಾ ಬೇಡಿಕೆಗಳನ್ನು ಈಡೇರಿಸುವುದಾಗಿ ಆಶ್ವಾಸನೆ ನೀಡಿದ್ದಾರೆ. ಪ್ರಾರಂಭದಲ್ಲಿ ತರಗತಿ ಬಹಿಷ್ಕಾರದೊಂದಿಗೆ ಪ್ರಾರಂಭವಾದ ಮುಷ್ಕರ ಭೂತ ದಹನ ಕಾರ್ಯಕ್ರಮ, ಬೃಹತ್ ಪ್ರತಿಭಟನಾ ಮೆರವಣಿಗೆ, ಧರಣಿ ಸತ್ಯಾಗ್ರಹವಾಗಿ ಮಾರ್ಪಾಟಾಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಎಸ್.ಎಫ್.ಐ. ಕಾರ್ಯದರ್ಶಿ ಯುವ ರಾಜ, ಭಟ್ಕಳ ಎಸ್.ಎಫ್.ಐ ಅಧ್ಯಕ್ಷ ಎಸ್.ವಿ. ಶೆಟ್ಟಿ ಮತ್ತು ಕಾರ್ಮಿಕ ಧುರೀಣರಾದ ಸುಭಾಶ್ ಕೊಪ್ಪಿಕರ ಭಾಗವಹಿಸಿದ್ದರು.

ತಾತಗುಣಿ ಎಸ್ಟೇಟ್ ಕಾರ್ಮಿಕರ ಪ್ರತಿಭಟನೆ

ಬೆಂಗಳೂರು: ನವಂಬರ್ 13, 95ರಂದು ಬೆಂಗಳೂರು ದಕ್ಷಿಣ ತಾಲೂಕು ಎಸ್ಟೇಟ್ ಮತ್ತು ಕಾರ್ಮಿಕರ ಸಂಘದ ಆಶ್ರಯದಲ್ಲಿ ತಾತಗುಣಿ ಎಸ್ಟೇಟ್ ಹರಿಜನ ಕಾರ್ಮಿಕರು ಮೆರವಣಿಗೆಯಲ್ಲಿ ವಿಧಾನಸೌಧಕ್ಕೆ ಹೋಗಿ ಮಾನ್ಯ ಕಂದಾಯ ಸಚಿವರಿಗೆ ಮತ್ತು ಕಾರ್ಮಿಕ ಮಂತ್ರಿಗಳಿಗೆ ತಮ್ಮ ಬೇಡಿಕೆಗಳ ಬಗ್ಗೆ ಮನವಿ ಅರ್ಪಿಸಿದರು.

ಕರ್ನಾಟಕ ರಾಜ್ಯ ಸರಕಾರ ದೇವಿಕಾರಾಣಿಗೆ ಸೇರಿದ ತಾತಗುಣಿ ಎಸ್ಟೇಟಿನ ಎಲ್ಲಾ ಜಮೀನನ್ನು ವಶಪಡಿಸಿಕೊಂಡು ಅಂತರ್‍ರಾಷ್ಟ್ರೀಯ ಟ್ರಸ್ಟ್ ಸ್ಥಾಪಿಸಲು ಹೊರಟಿರುವುದನ್ನು ನಾವು ಸ್ವಾಗತಿಸುತ್ತೇವೆ. ಮಾತ್ರವಲ್ಲ, ಆಸ್ತಿಯನ್ನು ಯಾರೇ ಖಾಸಗಿಯವರು ಸ್ವಾಧೀನಪಡಿಸಿಕೊಳ್ಳಲು ಬಿಡಬಾರದೆಂದು ಸರಕಾರವನ್ನು ಒತ್ತಾಯಿಸಿದೆ.

ವಿಶಿಷ್ಟ ರೀತಿಯ ಮಕ್ಕಳ ದಿನಾಚರಣೆ

ಸಿಐಟಿಯು-ಐ.ಎಲ್.ಓ. ಬಾಲ ಕಾರ್ಮಿಕರ ಯೋಜನೆಯ ಕರೆಯ ಮೇರೆಗೆ ನವಂಬರ್ 14ರಂದು ಬೆಂಗಳೂರು ಜಿಲ್ಲಾ ಮಟ್ಟದಲ್ಲಿ ಶಾಲಾ ವಿದ್ಯಾರ್ಥಿಗಳಿಗಾಗಿ ಪ್ರಬಂಧ, ಚಿತ್ರ ಬಿಡಿಸುವುದು ಮತ್ತು ಚರ್ಚಾ ಸ್ಪರ್ಧೆಗಳನ್ನು ನಗರದ ಶ್ರೀರಾಮಪುರ ಪ್ರದೇಶದ ಸೇವಾಶ್ರಮ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಶಾಲಾ ವಿದ್ಯಾರ್ಥಿಗಳಲ್ಲಿ ಬಾಲ ಕಾರ್ಮಿಕರ ಪರಿಸ್ಥಿತಿಯ ಬಗ್ಗೆ ಅರಿವು ಮೂಡಿಸಿ ಅವರ ಚಿಂತನೆಯನ್ನು ಕೇಂದ್ರೀಕರಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸುಮಾರು 300ಕ್ಕೂ ಹೆಚ್ಚು ಶಾಲಾ ವಿದ್ಯಾರ್ಥಿಗಳು ಜಿಲ್ಲೆಯ ವಿವಿಧ ಭಾಗಗಳಿಂದ ಭಾಗವಹಿಸಿದ್ದರು. ಸ್ಪರ್ಧೆಯ ಉದ್ಘಾಟನೆಯನ್ನು ಬೆಂಗಳೂರು ಜಿಲ್ಲಾ ಕಾರ್ಮಿಕ ಮುಖಂಡರಾದ ಕಾಂ.ಆರ್. ಶ್ರೀನಿವಾಸ್ ನೆರವೇರಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಂ.ಆರ್. ಕೋದಂಡರಾಮ್‌ರವರು ವಹಿಸಿದ್ದರು.

ಸಂಜೆ 4.00 ಗಂಟೆಗೆ ನಡೆದ ಬಹುಮಾನ ವಿತರಣಾ ಸಮಾರಂಭದಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿಗಳಾದ ಶ್ರೀ ಇ.ವೆಂಕಟಯ್ಯರವರು, ರಾಜ್ಯ ಸಿಐಟಿಯು ಅಧ್ಯಕ್ಷರಾದ ಕಾಂ.ಎಸ್.ಸೂರ್ಯನಾರಾಯಣರಾವ್ ರವರು ಭಾಗವಹಿಸಿದ್ದರು. ಸಿಐಟಿಯು-ಐಎಲ್ಓ ಬಾಲ ಕಾರ್ಮಿಕರ ಯೋಜನೆಯ ರಾಜ್ಯ ಸಂಯೋಜಕರಾದ ಕಾಂ.ವಿ.ಜೆ.ಕೆ.ನಾಯರ್ ರವರು ಅಧ್ಯಕ್ಷತೆ ವಹಿಸಿದ್ದರು. ಬಹುಮಾನ ವಿತರಣೆಯ ನಂತರ ಮಾತನಾಡಿದ ಜಿಲ್ಲಾಧಿಕಾರಿಗಳು ಬಾಲ ಕಾರ್ಮಿಕರ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಶ್ರಮಪಡುವ ಸಿಐಟಿಯುನಂತಹ ಸಂಘಟನೆಗಳಿಗೆ ಸಹಾಯ ಮಾಡುವುದಾಗಿ ಭರವಸೆ ನೀಡಿದ್ದಾರೆ.

ಈ ಕಾರ್ಯಕ್ರಮದ ಯಶಸ್ಸಿಗೆ ಹಲವು ಸೇವಾ ಸಂಸ್ಥೆಗಳೂ, ಸಂಘಟನೆಗಳೂ ನೆರವು ನೀಡಿದವು.



ಕರ್ನಾಟಕ ಸುದ್ದಿ

ಕರ್ನಾಟಕ ಪ್ರಾಂತ ರೈತ ಸಂಘದ ಸಮ್ಮೇಳನ ಪ್ರತಿನಿಧಿಗಳ ವಿವರ

ಹಿಂದಿನ ವಾರ ಬಿಜಾಪುರದಲ್ಲಿ ನಡೆದ ಕರ್ನಾಟಕ ಪ್ರಾಂತ ರೈತ ಸಂಘದ 11ನೇ ಸಮ್ಮೇಳನದ ವರದಿಗಳನ್ನು ಓದಿರುವಿರಿ. ಈ ಸಮ್ಮೇಳನದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳ ವಿವರವನ್ನು ಸ್ಥಳಾಭಾವದಿಂದ ಪ್ರಕಟಿಸಲಾಗಲಿಲ್ಲ. ಅದನ್ನಿಲ್ಲಿ ಪ್ರಕಟಿಸುತ್ತಿದ್ದೇವೆ.

ಅರ್ಹತಾ ಪತ್ರದ ವಿವರಗಳು

188 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ವರ್ಗ ಮೂಲ

ಕೃಷಿ ಕೂಲಿಕಾರರು 41, ಬಡರೈತರು 25, ಮಧ್ಯಮ ರೈತರು 68, ಶ್ರೀಮಂತ ರೈತರು 2, ವ್ಯಾಪಾರಿ 1, ಮಾಹಿತಿ ನೀಡದವರು 41.

ರೈತ ಸಂಘದಲ್ಲಿ ಕೆಲಸ ಮಾಡಿದ ಅವಧಿ

1ರಿಂದ 5 ವರ್ಷ	64
5ರಿಂದ 10 ವರ್ಷ	56
10ರಿಂದ 15 ವರ್ಷ	28
15ರಿಂದ 20 ವರ್ಷ	12
20ಕ್ಕಿಂತಲೂ ಮೇಲ್ಪಟ್ಟು.	19

ರೈತಸಂಘದಲ್ಲಿ ಸ್ಥಾನಮಾನ

ಗ್ರಾಮಘಟಕದಿಂದ ಬಂದವರು	73
ತಾಲೂಕು ಸಮಿತಿಯಿಂದ	61
ಜಿಲ್ಲಾ ಸಮಿತಿಯಿಂದ	25
ರಾಜ್ಯ ಕೇಂದ್ರದಿಂದ	15

ಚುನಾಯಿತ ಸದಸ್ಯರು

ಗ್ರಾಮ ಪಂಚಾಯತಿ ಸದಸ್ಯರು-17
ತಾಲೂಕು ಪಂಚಾಯತಿ ಸದಸ್ಯರು-3
ಸಹಕಾರಿ ಸದಸ್ಯರು-7
ಗ್ರಾಮ ಪಂಚಾಯತಿ ಅಧ್ಯಕ್ಷರು-3

ಪೂರ್ಣ ಕಾಲದ ಕಾರ್ಯಕರ್ತರು

ಪೂರ್ಣ ಕಾಲ ಕಾರ್ಯಕರ್ತರಾಗಬಯಸಿದವರು-103, ಆಗದವರು-65

ಪತ್ರಿಕೆ ಅಭ್ಯಾಸ

ಐಕ್ಯರಂಗ ಪತ್ರಿಕೆ ಓದುವವರು-83, ದಿನಪತ್ರಿಕೆ-29, ವಾರಪತ್ರಿಕೆ-67

ಸಚಿವರಿಗೆ ಘೇರಾವ್

ಬಳ್ಳಾರಿ: ತಾಲೂಕಿನ ಕುರುಗೋಡು ಗ್ರಾಮದಲ್ಲಿ 11.10.1995ರಂದು ಜಿಲ್ಲಾ ಮಟ್ಟದ "ನಿರ್ಮಲ ಗ್ರಾಮ ಯೋಜನೆ" ಉದ್ಘಾಟನಾ ಸಮಾರಂಭಕ್ಕೆಂದು ಬಂದಿದ್ದ ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವರಾದ ಎಂ.ಪಿ. ಪ್ರಕಾಶ್ ರವರನ್ನು ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಹಾಗೂ ಡಿವೈಎಫ್ಐ, ಸಿಐಟಿಯು, ಎಸ್.ಎಫ್.ಐ. ಮುಖಂಡರು ಕುರುಗೋಡುವಿನಲ್ಲಿ ತಡೆದು ಘೇರಾವ್ ಮಾಡಿದರು. ಸುಮಾರು 150ಕ್ಕೂ ಹೆಚ್ಚು ಜನರು ರಸ್ತೆಯುದ್ದಕ್ಕೂ ಕುಳಿತು ಮಂತ್ರಿಗಳು ಬಂದ ತಕ್ಷಣವೇ ರಾಜ್ಯ ಸರಕಾರದ ಜನವಿರೋಧಿ ನೀತಿಗಳನ್ನು ಪ್ರತಿಭಟಿಸಿ ಘೇರಾವ್ ಮಾಡಿದಾಗ ಪೋಲೀಸರು ರೈತರನ್ನು ಹಾಗೂ ವಿವಿಧ ಸಂಘಟನೆಗಳ ಮುಖಂಡರನ್ನು ಬಂಧಿಸಿ ನಂತರ ಬಿಡುಗಡೆ ಮಾಡಿದರು.

3/12/1

ಬಿಜೆಪಿಯ ಮುಂಬೈ "ಮಹಾಧಿವೇಶನ"

ಭಾರತದ ಹಣಕಾಸು ರಾಜಧಾನಿಯೆನಿಸಿಕೊಂಡ ಮುಂಬೈಯ ಕುದುರೆ ಜೂಜುಕಟ್ಟೆಯಿಂದ ಬಿಜೆಪಿ ತನ್ನ 'ಅಶ್ವಮೇಧಯಾಗ' ಆರಂಭಿಸಿದೆ. ಅಶ್ವಮೇಧದ ಕುದುರೆ ದಿಲ್ಲಿಯ ಕೆಂಪು ಕೋಟೆಯನ್ನು ಕಟ್ಟಿಸುತ್ತದೆ ಎಂದು ಪುಂಖಾನುಪುಂಖವಾಗಿ ಉದುರಿದ ಮಾತುಗಳ, ಹಿಂದೆ ನೀರಿನಂತೆ ಸುರಿದ ಹಣದ ಹಿಂದೆ ನಿಜವಾಗಿಯೂ ಏನಿದೆ, ಈ ಬಿಜೆಪಿ 'ಮಹಾಧಿವೇಶನ' ಸಾಧಿಸಿದ್ದೇನು? - ಕಾಂ. ಪ್ರಕಾಶ್ ಕಾರಟ್ ವಿಶ್ಲೇಷಿಸಿದ್ದಾರೆ. ಜತೆಗೆ ದೇಶದ .ಕೆಲವು ಪ್ರಮುಖ ಪತ್ರಿಕೆಗಳ ಅಭಿಪ್ರಾಯ.

ಅಧಿಕಾರದ ನಿರರ್ಥಕ ತಡಕಾಟದಲ್ಲಿ

-ಪ್ರಕಾಶ್ ಕಾರಟ್

ಬಿಜೆಪಿಯ ಮುಂಬೈ 'ಮಹಾಧಿವೇಶನ' ನಡೆದಿರುವುದು ಇನ್ನಾರು ತಿಂಗಳಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಗಳಿಗೆ ತಮ್ಮ ಸಿದ್ಧತೆ ಆರಂಭವಾಗಿದೆ ಎಂದು ತೋರಿಸಲಿಕ್ಕಾಗಿ. ಬಿಜೆಪಿ ಮುಖಂಡರ ಉದ್ದೇಶ ಕೇಂದ್ರದಲ್ಲಿ ಅಧಿಕಾರ ಗಿಟ್ಟಿಸುವ ಪ್ರಯತ್ನದಲ್ಲಿ ಇದೊಂದು ದೊಡ್ಡ ಒತ್ತು ನೀಡಬೇಕು ಎಂದಿದ್ದರೆ ಈ 'ಮಹಾಧಿವೇಶನ' ಆ ನಿರೀಕ್ಷೆಯನ್ನು ಈಡೇರಿಸಿಲ್ಲ ಎಂದೇ ಹೇಳಬೇಕು. ಬಿಜೆಪಿ ದೇಶದ ಹಣಕಾಸು ರಾಜಧಾನಿಯಲ್ಲಿ ಭಾರೀ ಹಣ ಸುರಿದು ನೀಡಿದ ಪ್ರದರ್ಶನ, ಅಲ್ಲಿ ಪುಂಖಾನುಪುಂಖವಾಗಿ ಬಂದ ನುಡಿಮುತ್ತಗಳೇನೇ ಇದ್ದರೂ ಅದೀಗ ಒಂದು ಅಸ್ತವ್ಯಸ್ತಗೊಂಡಿರುವ ಪಕ್ಷ ಎಂಬ ಸಂಗತಿ ಅಲ್ಲಿ ಕೇಳಿಬಂದ ಭಾಷಣಗಳು, ನಿರ್ಣಯಗಳು ಹಾಗೂ ಕಲಾಪಗಳಿಂದ ಸ್ಪಷ್ಟವಾಗುತ್ತವೆ.

ಮೊದಲನೆಯದಾಗಿ, ಚುನಾವಣಾ ಪ್ರಚಾರ ಆರಂಭಿಸಬೇಕಾಗಿದ್ದ ಈ 'ಮಹಾಧಿವೇಶನ'ದ ಮೇಲೆ ಗುಜರಾತಿನ ದೊಂಬರಾಟದ ಕರಿ ನೆರಳು ಬಿದ್ದಿತ್ತು. ಗುಜರಾತ್‌ನ ನಗೆಪಾಟಲಿನ ಬೆನ್ನ ಹಿಂದೆಯೇ ಉತ್ತರಪ್ರದೇಶದ ಚದುರಂಗದಲ್ಲಿ ತನ್ನದು ದಲಿತ-ಪರ ನಿಲುವು ಎಂಬ ದಾಳವನ್ನು ಆಡುವ ಅದರ ಪ್ರಯತ್ನ ಮಾಯಾವತಿ ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ವಾಪಾಸು ಪಡೆದಾಗ ಕುಸಿದು ಬಿತ್ತು. ಈ ಎರಡೂ ಮುಜುಗರದ ಘಟನೆಗಳ ಬಗ್ಗೆ ಈ 'ಮಹಾಧಿವೇಶನ'ದಲ್ಲಿ ಆತ್ಮವಿಮರ್ಶೆಯಾಗಲೀ ಅಥವಾ ಇನ್ಯಾವುದೇ ಸಮರ್ಥನೀಯ ವಿವರಣೆಯಾಗಲಿ ಬಹಳವೇನೂ ಕೇಳಿಬರಲಿಲ್ಲ.

ಕೈಗೆ ದಕ್ಕದೇ ಹೋದ ಕಾಶ್ಮೀರ ಸಮಸ್ಯೆ

ಈ 'ಮಹಾಧಿವೇಶನ'ದ ಮೊದಲು ಪುಣೆಯಲ್ಲಿ ನಡೆದ ಅದರ ಕಾರ್ಯಕಾರಿ ಸಮಿತಿಯ ಸಭೆಯಲ್ಲಾಗಲೀ, ಈ 'ಮಹಾಧಿವೇಶನ'ದಲ್ಲಾಗಲೀ ಎತ್ತಿಕೊಂಡ ಹಾಗೂ ಮಾತನಾಡಿದ ವಿಷಯಗಳ ವ್ಯಾಪ್ತಿಯನ್ನು ನೋಡಿದರೇನೇ ಈ ಪಕ್ಷ ವೋಟು ಗಿಟ್ಟಿಸಲು ತನಗೆ ನೆರವಾಗಬಹುದಾದ ಒಂದು ಪ್ರಶ್ನೆಯ ತಡಕಾಟದಲ್ಲಿದೆ ಎಂಬುದು ಬಯಲಿಗೆ ಬಂತು. ಅಡ್ವಾಣಿಯವರ ಅಧ್ಯಕ್ಷ ಭಾಷಣದಲ್ಲಿ 'ಹಿಂದುತ್ವ' ಕುರಿತ ಪಕ್ಷದ ಮೂಲಭೂತ ನಿಲುವನ್ನು ಮತ್ತೆ ಒತ್ತಿ ಹೇಳುವ ಪ್ರಯತ್ನವಿದ್ದರೂ ಜತೆಗೇ ಇನ್ನೂ ಹಲವಾರು ಪ್ರಶ್ನೆಗಳ ಗೊಂಚಲಿನಲ್ಲಿ ಒಟ್ಟಾರೆ ಒಂದು ಚುನಾವಣಾ ವೇದಿಕೆ ಕೈಗೆ ದಕ್ಕಬಹುದು ಎಂಬ ಆಸೆ ಎದ್ದು ಕಾಣುತ್ತಿತ್ತು. ಕಾಶ್ಮೀರ ಪ್ರಶ್ನೆ ಕುರಿತಂತೆ ರಾವ್ ಸರಕಾರ ಸ್ವಾಯತ್ತತೆ ಬಗ್ಗೆ ಮಾತನಾಡಿದಾಗ ಅದೊಂದು ತನಗೆ ಸ್ಫೋಟಕ ವಸ್ತುವಾಗಿ ಸಿಗಬಹುದೆಂದು ಆಸೆಯಾದರೂ ಅದಕ್ಕೆ ಇತ್ತು. ಚುನಾವಣಾ ಆಯೋಗ ಕಾಶ್ಮೀರದಲ್ಲಿ ಚುನಾವಣೆ ನಡೆಸದಿರಲು ನಿರ್ಧರಿಸಿದ್ದರಿಂದ ಅದೂ ದಕ್ಕದೇ ಹೋಯಿತು. ಕಾಶ್ಮೀರದ ಬಗ್ಗೆ ಈ 'ಮಹಾಧಿವೇಶನ' ಅಂಗೀಕರಿಸಿದ ನಿರ್ಣಯ ಅದರ ಹಿಂದೂ ಬಹುಸಂಖ್ಯಾತ ದೃಷ್ಟಿಕೋಣವನ್ನು ಸಾರುತ್ತದಷ್ಟೇ. ಕಾಶ್ಮೀರಿ ಜನತೆಯ ಬಗ್ಗೆ ವಿಪರೀತ ಸಂಶಯ, ಕಾಶ್ಮೀರಿ ಜನಗಳ ಮಿಶ್ರ ಸಂಸ್ಕೃತಿಯ ಹಾಗೂ ನೈಜ ಸ್ವಾಯತ್ತತೆಯ ಮೂಲಕ ಮಾತ್ರವೇ ಅದರ ರಕ್ಷಣೆ ಸಾಧ್ಯ ಎಂಬುದರ ನಿರಾಕರಣೆ ಈ ನಿರ್ಣಯದ ಮುಖ್ಯ ಅಂಶಗಳು. ಬಿಜೆಪಿಗೆ ಕಾಶ್ಮೀರವೆಂಬುದು ಭಾರತದ ಬಗ್ಗೆ ವಿಧೇಯತೆ ಸಂಶಯಾಸ್ಪದವಾಗಿರುವ ಕಾಶ್ಮೀರ ಕಣಿವೆಯ ಮುಸಲ್ಮಾನರು ಸೃಷ್ಟಿಸಿದ ಸಮಸ್ಯೆ ಮಾತ್ರವಾಗಿ ಕಾಣುತ್ತದೆ. ಈ ದೃಷ್ಟಿಕೋಣ ಅದರ ಕೋಮುವಾದಿ ಚಿಂತನಾ ಚೌಕಟ್ಟಿಗೆ ಅನುಗುಣವಾದಂತದ್ದು.

ಕೇಂದ್ರೀಕೃತ ವ್ಯವಸ್ಥೆಯತ್ತ ಒಲವು ಪ್ರದರ್ಶನ

ಅಡ್ವಾಣಿ ಮತ್ತೊಮ್ಮೆ ಗೊಂದಲಮಯ ರೀತಿಯಲ್ಲಿ ಸಂವಿಧಾನವನ್ನು ಪರಿಷ್ಕರಿಸುವ ಪ್ರಶ್ನೆಯನ್ನೆತ್ತಿದರು. ಆದರೆ ಬಿಜೆಪಿಗೆ ಬಹುಪ್ರಿಯವಾದ ಅಧ್ಯಕ್ಷ ಮಾದರಿಯನ್ನು ನೇರವಾಗಿ ಅನುಮೋದಿಸಲಿಲ್ಲ. ಸಂವಿಧಾನದ ನಿರ್ವಹಣೆಯ ಒಂದು ಸಮಗ್ರ ವಿಮರ್ಶೆ ನಡೆಸಲು ಒಂದು ಆಯೋಗ ನೇಮಿಸಬೇಕೆಂದು ಆಗ್ರಹಪಡಿಸಿದರು. ಈ ಆಯೋಗಕ್ಕೆ ಒಪ್ಪಿಸುವ ಇನ್ನೊಂದು ಪ್ರಶ್ನೆಯೆಂದರೆ ಸ್ವಾತಂತ್ರ್ಯಾನಂತರ ಅಷ್ಟೊಂದು ಹೋರಾಟಗಳ ನಂತರ ರಚಿಸಿದ ಭಾಷಾವಾರು ಪ್ರಾಂತ್ಯಗಳನ್ನು ಕಳಚಿಹಾಕುವುದು. ಬಲಪ್ರತಿಗಾಮಿಗಳ ಪಕ್ಷವಾದ ಬಿಜೆಪಿ ಸಹಜವಾಗಿಯೇ ಒಂದು ಹೆಚ್ಚು ಸರ್ವಾಧಿಕಾರಿಯಾದ ಕೇಂದ್ರೀಕೃತವಾದ ಮಾದರಿಯನ್ನೇ ಬಯಸುತ್ತದೆ. ಅಧ್ಯಕ್ಷರಿಗೆ ಹೆಚ್ಚು ಅಧಿಕಾರ, ಜತೆಗೇ ಕೇವಲ ಆಡಳಿತ ಸೌಲಭ್ಯದ ದೃಷ್ಟಿಯಿಂದ ರಚಿಸಿದ ಹಾಗೂ ಸದಾ ಒಂದು ಬಲಶಾಲಿ ಕೇಂದ್ರದ ಮರ್ಜಿಗೆ ಒಳಪಟ್ಟ ಸಣ್ಣ ರಾಜ್ಯಗಳನ್ನು ರಚಿಸಿ ಒಕ್ಕೂಟ ತತ್ವಗಳನ್ನು ಮತ್ತಷ್ಟು ಬುಡಮೇಲು ಮಾಡುವ ಒಂದು ಕೇಂದ್ರೀಕೃತ ವ್ಯವಸ್ಥೆ ಅದಕ್ಕೆ ಹೆಚ್ಚು ಪ್ರಿಯವಾದ ವ್ಯವಸ್ಥೆ.

ಸಂವಿಧಾನದ ಪರಿಷ್ಕರಣೆಯ ಈ ಒತ್ತಾಯದ ಹಿಂದಿರುವ ಇನ್ನೊಂದು ಅಂಶವೆಂದರೆ ಪ್ರಸ್ತುತ ಸಂಸದೀಯ ವ್ಯವಸ್ಥೆಯಲ್ಲಿ ಅಧಿಕಾರ ಗಿಟ್ಟಿಸುವುದು ಸದ್ಯ ಭವಿಷ್ಯದಲ್ಲಿ ಸಾಧ್ಯವಿಲ್ಲವೆಂಬ ಅರಿವು ಅದಕ್ಕೆ ಮೂಡಿರುವುದು. ಆದ್ದರಿಂದಲೇ ಮಧ್ಯಂತರ ಚುನಾವಣೆ ತಪ್ಪಿಸುವ ಬಹುಪಕ್ಷಗಳ ಸರಕಾರದ ರಚನೆ ಸಂವಿಧಾನದಲ್ಲಿ ಅಡಕವಾಗಿರಬೇಕೆಂಬ ಮಾಜಿ ರಾಷ್ಟ್ರಪತಿ ಆರ್.ವೆಂಕಟರಾಮನ್ ಮತ್ತು ಲೋಕ
ಸಭಾಧ್ಯಕ್ಷ ಶಿವರಾಜ್ ಪಾಟೀಲ್ ಪ್ರಸ್ತಾವ
ದಲ್ಲಿ ಬಿಜೆಪಿ ಬಹಳ ಆಸಕ್ತಿ ತೋರಿಸುತ್ತದೆ.
ಏಕೆಂದರೆ ಈ ಮೂಲಕವಾದರೂ ಕೇಂದ್ರದ
ಒಂದು ಸಮಿಶ್ರ ಸರಕಾರದಲ್ಲಿ ಅಧಿಕಾರ ಹಂಚಿ
ಕೊಳ್ಳುವ ಆಸೆ ಅದರದು.

ಅಮೇರಿಕನ್ ಕುತಂತ್ರಗಳ ಬಗ್ಗೆ ಬಾಯಿ ಮುಚ್ಚಿಕೊಂಡ "ರಾಷ್ಟ್ರಪ್ರೇಮಿ"ಗಳು!

ಅಡ್ವಾಣಿಯವರು ಮತ್ತು 'ಮಹಾಧಿವೇ
ಶನ' ಒತ್ತಿ ಹೇಳಿದ ಇನ್ನೊಂದು ಪ್ರಶ್ನೆಯೆಂದರೆ
ರಕ್ಷಣಾ ವೆಚ್ಚ ಹೆಚ್ಚಿಸಬೇಕು, ರಕ್ಷಣಾ ಸಿದ್ಧತೆ
ಯನ್ನು ಹೆಚ್ಚಿಸಬೇಕು ಎಂಬ ಒತ್ತಾಯ -
ವಿಶೇಷವಾಗಿ ಅಮೇರಿಕಾದ ಸಂಸತ್ತು ಬ್ರೌನ್
ತಿದ್ದುಪಡಿ ಅಂಗೀಕರಿಸಿದ ಹಿನ್ನೆಲೆಯಲ್ಲಿ ಈ
ಹೊಸ ಸವಾಲು ಎದುರಿಸಲು ನಮ್ಮ ಸಶಸ್ತ್ರ
ಪಡೆಗಳ ಎಲ್ಲಾ ಅಂಶಗಳ ರಕ್ಷಣಾ ಸಾಮರ್ಥ್ಯ
ವನ್ನು ಹೆಚ್ಚಿಸಬೇಕು ಎಂಬುದು ಅದರ ವಾದ.
ಆದರೆ ಗಮನಾರ್ಹ ಸಂಗತಿಯೆಂದರೆ ಈ
ಯಾವ ವಾದದಲ್ಲೂ ಭಾರತ-ಅಮೇರಿಕಾ
ಮಿಲಿಟರಿ ಸಹಕಾರ ಒಪ್ಪಂದವನ್ನು ರದ್ದುಪಡಿ
ಸಬೇಕೆಂಬ ಒತ್ತಾಯ ಮಾತ್ರ ಇಲ್ಲವೇ ಇಲ್ಲ.
ಈ ಪ್ರಮುಖ ಪ್ರಶ್ನೆಯ ಮೇಲೆ ಅದರ ಮೌನ
ಗಮನಾರ್ಹ. ಏಕೆಂದರೆ ಅಮೇರಿಕಾದೊಂ

ವ್ಯಂಗ್ಯ ಚಿತ್ರಕಾರರು ಕಂಡಂತೆ .....



ಕೃಪೆ: ತೆಲುಗು ದೈನಿಕ 'ಪ್ರಜಾಶಕ್ತಿ'



ನಿಜವಾಗಿಯೂ! ಸಮಗೊಯಿ ಏದೇಶಾಂಗ ಧೋರಣೆಯೂ ಇದೆಯೆಂದು ನನಗೆ ತಿಳಿದೇ ಇರಲಿಲ್ಲ.!

ಬಿಸಿನೆಸ್ ಲೈನ್‌ನಲ್ಲಿ ರವಿಕಾಂತ್



'ಇಕನಾಮಿಕ್ ಟೈಮ್ಸ್'ನಲ್ಲಿ ಉನ್ನಿ



ಸ್ವದೇಶದೊಂದಿಗೆ ನಾವು ಮತ್ತೆ ಆರ್ಥಿಕವನ್ನು ಸರಿದಾರಿಗೆ ತರಬಹುದು - ಮೊದಲ ಹೆಜ್ಜೆಯಾಗಿ ಎನ್ರೋನನ್ನು ಮತ್ತೆ ಸರಿದಾರಿಗೆ ತರೋಣ..........

'ಹಿಂದೂ'ನಲ್ಲಿ ಕೇಶವ್

ಪತ್ರಿಕೆ

"ಅಶ್ವಮೇಧ"ದ ಕನಸು.....

ಬಯಕೆಗಳೇ ಕುದುರೆಗಳಾಗಬಹುದಾದರೆ ಭಾರತೀಯ ಜನತಾ ಪಾರ್ಟಿಯ 'ಅಶ್ವಮೇಧ'ದ ಕುದುರೆ ನವದೆಹಲಿಗೆ ಸುಲಭವಾಗಿ ಪ್ರಯಾಣ ಬೆಳೆಸಬಹುದು. ಆದರೆ ಈಗ ಸಿಗುತ್ತಿರುವ ಸಂಕೇತಗಳನ್ನೆಲ್ಲಾ ನೋಡಿದರೆ ಈ ಪ್ರಯಾಣ ದುರ್ಗಮವಾಗಿದೆ......... ದುರದೃಷ್ಟವಶಾತ್ ಬಯಕೆಗಳು ಕುದುರೆಗಳಲ್ಲ. ಶ್ರೀರಾಮ ಅಯೋಧ್ಯೆಯಿಂದ ಬಿಟ್ಟ 'ಅಶ್ವಮೇಧ'ದ ಕುದುರೆಯನ್ನು ಕೂಡಾ ತಾಯಿ ಸೀತೆಯೊಂದಿಗೆ ವನವಾಸದಲ್ಲಿದ್ದ ಆತನ ಮಕ್ಕಳಾದ ಲವ-ಕುಶರೇ ತಡೆದು ನಿಲ್ಲಿಸಿದರು. ಈಗಿನ 'ಕಲಿಯುಗ'ದಲ್ಲಂತೂ ಹುಲು ಮಾನವರಾದ ವಿ.ಪಿ.ಸಿಂಗ್, ಮುಲಾಯಂ ಸಿಂಗ್ ಯಾದವ್, ಲಲ್ಲೂ ಪ್ರಸಾದ್ ಯಾದವ್, ಶರದ್ ಪವಾರ್, ನರಸಿಂಹರಾವ್ ಅಷ್ಟೇಕೆ ಒಬ್ಬ ವಾಘೇಲಾ ಕೂಡಾ ಅದನ್ನೇ ಮಾಡಲು ಸಾಧ್ಯ.

- "ಹಿಂದೂ" ಪತ್ರಿಕೆಯಲ್ಲಿ
ಶೀನಾವಾಸ್ ಟಿಪ್ಪಣಿ



ಆರ್.ಕೆ. ಲಕ್ಷ್ಮಣ್‌ರವರ ವ್ಯಂಗ್ಯ, 'ಟೈಮ್ಸ್ ಆಫ್ ಇಂಡಿಯಾ'ದಲ್ಲಿ

...ಮರಿಕ ಮಿಲಿಟರಿ ಸಹಕಾರವನ್ನು ... ಕೂಡಾ ಬಯಸುತ್ತದೆ. ಆದರೆ ...ು ಬಹಿರಂಗವಾಗಿ ಹೇಳಲು ಈಗಿನ ...ದಲ್ಲಿ ಅದಕ್ಕೆ ಮುಜುಗರವಾಗುತ್ತಿದೆ. ...ಕಾ ಪಾಕಿಸ್ತಾನದಿಂದ ದೂರ ನಿಂತರೆ ...ಂದಿಗೆ 'ಸಾಮರಿಕ ಸಹಕಾರ'ಕ್ಕೆ ...ಗಬೇಕು ಎಂದು ಇತ್ತೀಚಿಗೆ ಒಂದು ...ಂಗ ವ್ಯವಹಾರ ಕುರಿತ ತನ್ನ ಪ್ರಬಂಧ ...ಜೆಪಿ ಪ್ರತಿಪಾದಿಸಿದೆ. ಮೂರು ವರ್ಷ ...ಂದೆ ಎಲ್.ಕೆ.ಅಡ್ವಾಣಿಯವರು ...ಅಮೇರಿಕಾ ಜಂಟಿ ನೌಕಾ ಕವಾಯ ...ನ್ನ ಸ್ವಾಗತಿಸಿದ್ದರು. ಅಮೇರಿಕಾದೊಂ... ಸಹಕಾರವನ್ನು ರದ್ದುಪಡಿಸದೆ ...ವೆಚ್ಚ ಹೆಚ್ಚಿಸುವ ಬಗ್ಗೆ, ರಕ್ಷಣಾ ಸಮ...ನ್ನು ಹೆಚ್ಚಿಸುವ ಬಗ್ಗೆ ಮಾತನಾಡುವು... ನಮ್ಮ ಉಪ ಖಂಡದಲ್ಲಿ ಶಸ್ತಾಸ್ತ್ರ ...ಟಿಯ ಬೆಂಕಿಗೆ ತುಪ್ಪ ಸುರುವಿದಂ...ಸರಿ. ಭಾರತದ ಪ್ರಮುಖ ಭದ್ರತಾ ...ತ್ತಿಗಳನ್ನು ಸರಿಯಾಗಿ ಪ್ರತಿಫಲಿಸುವ ... ರಕ್ಷಣಾ ಯೋಜನೆ ರೂಪಿಸಬೇಕಾ... ...ಮೇರಿಕಾದೊಂದಿಗೆ ಗಂಡಾಂತರಕಾರೀ ...ವನ್ನು ರದ್ದು ಮಾಡಬೇಕಾದ್ದು ಅನಿ...ಆಗ ಮಾತ್ರವೇ ಭಾರತದ ಭದ್ರತೆ ...ಸಾರ್ವಭೌಮತೆಯನ್ನು ರಕ್ಷಿಸುವ ಒಂದು ... ಸಾಧ್ಯ.

...ಷ್ಟ್ರೀಯ ಕಂಪೆನಿಗಳೆದುರು ...ರ್ಯತೆಯ ಪ್ರದರ್ಶನ

...ಜೆಪಿಯ ಈ 'ಮಹಾಧಿವೇಶನ' ನಡೆ... ಬಾಳಠಾಕ್ರೆಯ 'ರಿವೋಲ್ಟ್ ...ಲ್'ನಲ್ಲಿ ಶಿವಸೇನೆ-ಬಿಜೆಪಿಯ ಸರ...ಡೆಯುತ್ತಿರುವ ಮಹಾರಾಷ್ಟ್ರದ ರಾಜಧಾನಿ ಮುಂಬೈಯಲ್ಲಿ. ಈ ಮೂರು ದಿನಗಳ ಮೇಳದಲ್ಲಿ ಈ ಶಿವಸೇನಾ ಮುಖ್ಯಸ್ಥ ಬಿಜೆಪಿ ಬಗ್ಗೆ ತನ್ನ ಉಪೇಕ್ಷೆ ಸ್ಪಷ್ಟವಾಗಿ ಕಾಣುವಂತೆ ವರ್ತಿಸಿದರು. ಸಮ್ಮೇಳನದ ಸ್ಥಳಕ್ಕೆ ಬರಬೇಕೆಂಬ ಆಹ್ವಾನವನ್ನೂ ಮನ್ನಿಸಲಿಲ್ಲ. ಬಿಜೆಪಿಯ ಧೋರಣೆಗಳ ಬಗ್ಗೆ ಮುಖ್ಯವಾಗಿ ಅದರ 'ಸ್ವದೇಶಿ' ಬಗ್ಗೆ ಚುಚ್ಚು ಮಾತುಗಳನ್ನು ನಿಲ್ಲಿಸಲೂ ಇಲ್ಲ. ಎನ್ರೋನ್ ಕಂಪೆನಿಯೊಂದಿಗೆ ಮರು ಮಾತುಕತೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಬಿಜೆಪಿಗೆ ಇದೊಂದು ಬಹಳ ಕಿರಿಕಿರಿಯುಂಟು ಮಾಡಿದ ಸಂಗತಿ. ಎನ್ರೋನ್ ಕಾರ್ಪೋರೇಶನನ್ನು ಅರಬ್ಬೀ ಸಮುದ್ರಕ್ಕೆ ಎಸೆಯುತ್ತೇವೆ ಎಂದು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿಕೊಂಡ ಬಿಜೆಪಿಗೆ ಈಗ ರಾಜ್ಯ ಸರಕಾರವನ್ನು ಬದಿಗೊತ್ತಿ ಶಿವಸೇನೆ ಮುಖ್ಯಸ್ಥ ಈ ಯೋಜನೆಯನ್ನು ಪುನರುಜ್ಜೀವನಗೊಳಿಸಬೇಕು ಎಂದು ಆಜ್ಞಾಪಿಸಿದರು. ಮರು ಮಾತುಕತೆಯ ನಾಟಕ ನಡೆಸಲು ಅಣತಿಯಿತ್ತಿರುವುದು ನಿಜಕ್ಕೂ ಬಿಜೆಪಿಗೆ ಮನೋವೇದಕ ಸಂಗತಿ. ಬಿಜೆಪಿ ಮುಖಂಡರು ಈ ಪ್ರಶ್ನೆ ಕುರಿತಂತೆ ತಾವಾಗಿಯೇ ತಮ್ಮನ್ನು ಸಿಗಿಸಿಕೊಂಡಿದ್ದಾರೆ. ಪುಣೆಯಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಈ 'ಮರು ಮಾತುಕತೆ' ಒಂದು ತರ್ಕ ಬದ್ಧ ದಾರಿ ಎಂದು ಸದಸ್ಯರಿಗೆ ಮನವರಿಕೆ ಮಾಡುವುದು ಅಡ್ವಾಣಿಯವರಿಗೆ ಸಾಧ್ಯವಾಗಲಿಲ್ಲ. ಅಮೇರಿಕಾದ ಬಹುರಾಷ್ಟ್ರೀಯ ಕಂಪನಿಯ ನಗ್ನ ಒತ್ತಡದೆದುರು ಬಿಜೆಪಿಯ ನಿರ್ವೀರ್ಯತೆ ಬಯಲಾಗಿರುವುದು ಅದರ 'ಸ್ವದೇಶೀ' ಮಂತ್ರದ ವಿಶ್ವಾಸಾರ್ಹತೆಯ ಮೇಲೆ ಎರಗಿರುವ ಇನ್ನೊಂದು ತೀವ್ರ ಹೊಡೆತ. ಹೊಸದಾಗಿ ಟೆಂಡರ್ ಕರೆದು,

ಪುಟ 8 ನೋಡಿ

...ಳು ಕಂಡಂತೆ

ಲಾಭದ ಅರಿವು?

...ಂಬರ್ 1992ರಂದು ಅವರು(ವಾಜ...) ಅಯೋಧ್ಯೆಯಲ್ಲಿರಲಿಲ್ಲ. ಅಷ್ಟೇ ...ಬಿಜೆಪಿಯ ಉತ್ತರಪ್ರದೇಶ ಘಟ...ಬ್ಬ ಪ್ರಮುಖ ಪದಾಧಿಕಾರಿ ಅವ... ಉಚ್ಚಾಟನೆ ಮಾಡಬೇಕೆಂದು ಕರೆ...ರು. ಸಾಧ್ವಿ ರಿತಂಬರಾ ಅವರನ್ನು ...ಂಗ್ರೆಸ್ಸಿಗ ಎಂದೂ ಕರೆದರು...... ...ುತ್ತೆ ವಾಜಪೇಯಿ ಕಡೆ ತಿರುಗಿದ್ದಾ... ಮುಸ್ಲಿಂ-ವಿರೋಧಿ ಪಕ್ಷಪಾತ ...ಕೂಡಿದ 'ಹಿಂದುತ್ವ'ವನ್ನು ಆಕ್ರಾ...ಗಿ ಪ್ರತಿಪಾದಿಸಿದ್ದರಿಂದ ಪಡೆದ ...ನನೆಗಳು(1989 ಹಾಗೂ 1991ರ ...ಚುನಾವಣಾ ಸಾಧನೆಗಳು) ಕೇವಲ ...ಂಬುದು ಅವರ ಅರಿವಿಗೆ ಬಂದಿ...ದೇ ಅರ್ಥ.

– 'ಇಂಡಿಯನ್ ಎಕ್ಸ್‌ಪ್ರೆಸ್' ಸಂಪಾದಕೀಯದಲ್ಲಿ

ಸತ್ವಹೀನತೆಯನ್ನು ಮರೆಮಾಚಲು..

"ಅಶ್ವಮೇಧ ಅಂದರೆ ಬಿಜೆಪಿ ದಿಲ್ಲಿಯನ್ನು ಗೆದ್ದುಕೊಳ್ಳಲು ಹೊರಟಿದೆ" ಎಂದರು ವಾಜಪೇಯಿ ತನ್ನ ಸಮಾರೋಪ ಭಾಷಣದಲ್ಲಿ. ಆದರೆ ಬಿಜೆಪಿಯ ಅಶ್ವಮೇಧ ತನ್ನ ಓಟವನ್ನು ಪೂರ್ಣಗೊಳಿಸಬಲ್ಲದೇ? ಮುಂಬೈಯಲ್ಲಿ ಬೆಳಕಿಗೆ ಬಂದ ವೈರುಧ್ಯವನ್ನು ನೋಡಿದರೆ ಒಂದು ಸುಗಮ ಓಟದ ಬದಲು ಹಲವಾರು ಅಡ್ಡಿ-ಆತಂಕಗಳು ಈ ದುರದೃಷ್ಟಕರ ಕುದುರೆಯ ಪಾಲಿಗೆ ಬಂದಂತಿದೆ. ಸಾರ್ವಜನಿಕ ಪ್ರದರ್ಶನದ ಕಸರತ್ತು ಈ 'ಮಹಾಧಿವೇಶನ'ದ ಉದ್ದೇಶವಾಗಿದ್ದರೆ ಆಗಿರುವುದು ಮಾತ್ರ ತದ್ವಿರುದ್ಧ. ಸತ್ವಹೀನತೆಯನ್ನು ಮರೆಮಾಚಲು ಈ ಪಕ್ಷ ಹಾವ-ಭಾವಗಳ ಪ್ರದರ್ಶನ ನಡೆಸುತ್ತಿದೆ ಎಂಬುದೇ ಒಟ್ಟಾರೆಯಾಗಿ ಅನಿಸಿರುವುದು.

– 'ಟೈಮ್ಸ್ ಆಫ್ ಇಂಡಿಯಾ'ದಲ್ಲಿ ವಿದ್ಯಾ ಸುಬ್ರಹ್ಮಣ್ಯಂ

ಶ್ರೀಮಂತರ ಕಳ್ಳತನ ಹೆಚ್ಚುತ್ತಿದೆ

ಹೀಗೆ ಹೇಳಿದ್ದು ನಮ್ಮ ಕೇಂದ್ರ ಅರ್ಥ ಸಚಿವ ಡಾ. ಮನಮೋಹನ ಸಿಂಗರು. ಅವರ ಪ್ರಕಾರ ದೇಶದಲ್ಲಿ ಉದಾರೀಕರಣ ಬಂದ ಮೇಲೆ ಎಷ್ಟು ಪ್ರಮಾಣದಲ್ಲಿ ತೆರಿಗ ವಸೂಲಿ ಆಗಬೇಕಿತ್ತೋ ಅಷ್ಟು ಪ್ರಮಾಣದಲ್ಲಿ ಆಗುತ್ತಿಲ್ಲ. ಇದಕ್ಕೆ ಕಾರಣ ಹಲವು ಶ್ರೀಮಂತರು. ಕಂಪನಿಗಳು ವ್ಯಾಪಾರೀ, ಉದ್ಯಮಿಗಳು ತೆರಿಗೆ ತಪ್ಪಿಸುತ್ತಿರುವುದು. ಇಂತಹ ಅಪ್ರಮಾಣಿಕತೆ ದೇಶಕ್ಕೆ ಅಪಾಯಕಾರಿ ಎಂದು ಅವರು ಒಪ್ಪಿಕೊಂಡಿದ್ದಾರೆ.

ಹಿಂದಿನ ಹೆಚ್ಚಿನ ತೆರಿಗೆ ವಿಧಿಸುವ ಪದ್ಧತಿಗಿಂತ ಉದಾರೀಕರಣ ಸರಳ ತೆರಿಗೆ ಪಾವತಿ ವಿಧಾನಗಳನ್ನು ಜಾರಿಗೆ ತಂದಿದೆ. ಆದರೆ ಅಪ್ರಮಾಣಿಕತೆಯಿಂದಾಗಿ ನಿರೀಕ್ಷಿತ ಪ್ರಮಾಣದಲ್ಲಿ ತೆರಿಗೆ ವಸೂಲಿ ಆಗುತ್ತಿಲ್ಲ.

ಇದರ ಅರ್ಥ ದೇಶದಲ್ಲಿ ಕಪ್ಪು ಹಣ ಹೆಚ್ಚುತ್ತಿದೆ ಎಂದು. ಉದಾರೀಕರಣ ನಿಜಕ್ಕೂ ತೆರಿಗೆ ವಸೂಲಿಯ ಪ್ರಮಾಣದಲ್ಲಿ ಹೆಚ್ಚಳ ತರುವಂತಿದ್ದರೆ ಆಗಲೇ ತರಬೇಕಾಗಿತ್ತು. ಆದರೆ ಆದು ಆಗಿಲ್ಲ. ಬದಲಿಗೆ ತೆರಿಗೆ ವಸೂಲಿ ಪ್ರಮಾಣ ಕಡಿಮೆ ಆಗಿದೆ. ಹಿಂದೆ ತೆರಿಗೆ ಕದಿಯುತ್ತಿದ್ದವರು ಈಗ ತೆರಿಗೆ ಕದಿಯದೆ ಪೂರ್ಣ ಪ್ರಮಾಣದಲ್ಲಿ ತೆರಿಗೆ ಕಟ್ಟಬೇಕಾಗಿತ್ತು. ಅದರ ಬದಲಿಗೆ ಹಿಂದಿನ ತೆರಿಗೆ ಕದಿಯುವವರ ಜೊತೆಗೆ ಇನ್ನಷ್ಟು ಜನ ತೆರಿಗೆ ಕಳ್ಳರು ಸೇರಿಕೊಂಡಿದ್ದಾರೆ. ಇದು ಉದಾರೀಕರಣದ ಪರಿಣಾಮ. ಸ್ವತಃ ಮನಮೋಹನ ಸಿಂಗರಿಗೇ ಈಗ ಮೈಪರಚಿಕೊಳ್ಳುವಂತಾಗಿದೆ. ಆದ್ದರಿಂದಲೇ ಅವರು 'ತೆರಿಗೆಗಳ್ಳರ' ಮೇಲೆ ತೀವ್ರ ಕ್ರಮ ಕೈಗೊಳ್ಳುತ್ತೇವೆ ಎಂಬಿತ್ಯಾದಿ(ಹುಸಿ?) ಬೆದರಿಕೆ ಹಾಕುತ್ತಿರುವುದು ತೆರಿಗೆಗಳ್ಳರಂತೂ ಹೆದರಲಿಕ್ಕಿಲ್ಲ ಅಲ್ಲವೇ?


ಕಂಪನಿಗಳಿಗೂ ಕಂಪನ

ಉದಾರೀಕರಣದ ಪರಿಣಾಮವಾಗಿ ಕಳೆದ ವರ್ಷ ಕಂಪನಿಗಳು ಅಪಾರ ಲಾಭಗಳಿಸಿದ್ದವು. ಈ ಅಪಾರ ಪ್ರಮಾಣದ ಲಾಭದಿಂದ ದೇಶದೊಳಗೆ ಹೂಡಿಕೆ ಪ್ರಮಾಣ ಹೆಚ್ಚಾಗಿರಲಿಲ್ಲವೆಂಬುದು ಬೇರೆ ಮಾತು.

ಈ ಸಾರಿ ಈ ಕಂಪನಿಗಳ ಲಾಭಕ್ಕೆ ಹೊಡೆತ ಬೀಳುತ್ತದೆಂಬ ಭಯ ಆಗಲೇ ಕಂಪನಿಗಳಿಗೆ ಶುರುವಾಗಿದೆ. ಇದಕ್ಕೆ ಕಾರಣ ಬ್ಯಾಂಕುಗಳು ಸಾಲದ ಮೇಲಿನ ಬಡ್ಡಿದರವನ್ನು ಏರಿಸಿರುವುದು. ಡಾಲರ್ ರೂಪಾಯಿ ಬೆಲೆಯಲ್ಲಿ ವ್ಯತ್ಯಯ ಉಂಟಾಗಿ ಭಾರತೀಯ ರಿಸರ್ವ್ ಬ್ಯಾಂಕ್ ದೊಡ್ಡ ಪ್ರಮಾಣದಲ್ಲಿ ಮಧ್ಯಪ್ರವೇಶಿಸಿ ಡಾಲರ್ ಮಾರಿತು. ಇದರಿಂದ ಹಣಕಾಸು ಮಾರುಕಟ್ಟೆಯಲ್ಲಿ ರೂಪಾಯಿ ಅಭಾವ ಉಂಟಾಗಿ ಬಡ್ಡಿದರ ತೀವ್ರವಾಗಿ ಏರಿತು. ಈ ಏರಿಕೆ ಇನ್ನೂ ಹಾಗೇ ಉಳಿದಿದೆ.

ಬಡ್ಡಿ ದರದ ಈ ಏರಿಕೆ ಭಾರತೀಯ ರಿಸರ್ವ್ ಬ್ಯಾಂಕ್ ಎರಡು ವರ್ಷಕ್ಕೂ ಮೀರಿದ ಅವಧಿಯ ಠೇವಣಿಯ ಮೇಲಿನ ಬಡ್ಡಿ ದರವನ್ನು ಅನಿರ್ಬಂಧಗೊಳಿಸಿದ್ದರಿಂದ ಹಣಕಾಸಿನ ಬೆಲೆ ಹೆಚ್ಚಾಗಿ ಬ್ಯಾಂಕುಗಳು ಬಡ್ಡಿ ದರವನ್ನು ಏರಿಸಿದವು. ಬಡ್ಡಿ ದರ ಏರಿಕೆ ಕಂಪನಿಗಳ ಲಾಭವನ್ನು ಮಾತ್ರ ಕಡಿತಗೊಳಿಸುವುದಿಲ್ಲ. ಬದಲಿಗೆ ಎಲ್ಲ ಸರಕುಗಳ ಬೆಲೆಯನ್ನು ಅದು ಹೆಚ್ಚಿಸುತ್ತದೆ. ಹಣದುಬ್ಬರ ತೀವ್ರವಾಗಿ ಏರುತ್ತದೆ. ಮತ್ತೆ ಈ ಬೆಲೆಯೇರಿಕೆಯ ನೋವನ್ನು ದೊಡ್ಡ ಪ್ರಮಾಣದಲ್ಲಿ ನಮ್ಮ ದೇಶದ ಜನ ಸಾಮಾನ್ಯರು ಅನುಭವಿಸಬೇಕಾಗುತ್ತದೆ.

ಸರಕಾರ ಹೇಳುವುದು ಉದಾರೀಕರಣ



ನರಸಿಂಹರಾವ್ ಸರಕಾರದ 54ನೇ ತಿಂಗಳಲ್ಲಿ

ದಿಂದ ದೇಶದ ಅರ್ಥ ವ್ಯವಸ್ಥೆ ಹೊಸ ಲವಲವಿಕೆ ಪಡೆದಿದೆ ಎಂದು. ಇದೇ ಇರಬಹುದೇ ಆ ಹೊಸ ಲವಲವಿಕೆ?

'ಪೇಟೆಂಟ್ ಕಾಯಿದೆ ದೇಶಕ್ಕೆ ಮಾರಕ'

ಇದನ್ನು ದೇಶದ ಮುಖ್ಯ ವಿಜ್ಞಾನ ಸಂಶೋಧನಾ ಕೇಂದ್ರವಾದ ಭಾರತೀಯ ವಿಜ್ಞಾನ ಮಂದಿರದ ನಿರ್ದೇಶಕರಾದ ವಿಜ್ಞಾನಿ ಜಿ.ಪದ್ಮನಾಭನ್ ಅವರೇ ಹೇಳಿದ್ದಾರೆ. ವಿಶ್ವ ವ್ಯಾಪಾರ ಸಂಸ್ಥೆ ಒಪ್ಪಂದದ ಪರಿಣಾಮಗಳ ಮಾತನಾಡುತ್ತಿದ್ದ ಅವರು 2000 ಇಸವಿಯ ವೇಳೆಗೆ ನಾವು ಸೂಕ್ತ ಪೇಟೆಂಟ್ ಕಾಯಿದೆ ತರದಿದ್ದರೆ ನಮ್ಮ ಕೃಷಿ, ಮತ್ತು ಔಷಧ ಕ್ಷೇತ್ರಗಳ ಹತೋಟಿ ಕಳೆದುಕೊಳ್ಳುತ್ತೇವೆ ಎಂಬುದು ಅವರ ಅಭಿಪ್ರಾಯ.

ಅಮೇರಿಕ ಮತ್ತು ಇತರ ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಜೈವಿಕ ತಂತ್ರಜ್ಞಾನ ಮತ್ತು ತತ್ಸಂಬಂಧಿತ ಉದ್ಯಮಗಳನ್ನು 'ಸಂರಕ್ಷಿಸಿಕೊಂಡು' ಅಭಿವೃದ್ಧಿಶೀಲ ಮತ್ತು ಹಿಂದುಳಿದ ದೇಶಗಳಲ್ಲಿನ ತಂತ್ರಜ್ಞಾನಗಳು ಮತ್ತು ಅಲ್ಲಿನ ಜೈವಿಕ ಸಂಪನ್ಮೂಲಗಳ ಕೊಳ್ಳೆ ಹೊಡೆಯಲು ಈ ಗ್ಯಾಟ್ ಒಪ್ಪಂದವನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಜಪಾನಿನಂಥ ದೇಶ ತನ್ನ ಸಂಪನ್ಮೂಲ ಮತ್ತು ಆಸ್ತಿಗಳನ್ನು ರಕ್ಷಿಸಿಕೊಳ್ಳಲು ಎಂತಹ ಕ್ರಮಗಳನ್ನು ಕೈಗೊಂಡಿತೋ ಅಂಥ ಕ್ರಮಗಳನ್ನು ಭಾರತವೂ ಕೈಗೊಳ್ಳಬೇಕು. ಆ ಮೂಲಕ ಜನಸಾಮಾನ್ಯರನ್ನು ಗಮನದಲ್ಲಿಟ್ಟುಕೊಂಡು ಕಾಯಿದೆ ಕಾನೂನುಗಳನ್ನು ತರಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಬಹುರಾಷ್ಟ್ರೀಯ ಕಂಪನಿಗಳು ಔಷಧ ಉತ್ಪಾದನಾ ಕ್ಷೇತ್ರವನ್ನು ದೊಡ್ಡ ಪ್ರಮಾಣದಲ್ಲಿ ಆಕ್ರಮಿಸುತ್ತಾ ಮುಂದೆ ಅಂತರ್ರಾಷ್ಟ್ರೀಯ ಬೆಲೆ(ಅಂದರೆ ಅತಿ ಹೆಚ್ಚಿನ ಬೆಲೆ) ತೆರಬೇಕಾಗುತ್ತದೆ. ಆದರೆ ಭಾರತದ ಜನ ಸಾಮಾನ್ಯನಿಗೆ ಈ ಬೆಲೆ ತರುವ ಸಾಮರ್ಥ್ಯವಿರುವುದಿಲ್ಲ. ಈ ಒಪ್ಪಂದದಿಂದ ಇಂತಹ ಪರಿಣಾಮಗಳಿದ್ದರೂ ಭಾರತ ಇದನ್ನು ಮನಗಂಡಿಲ್ಲ ಎಂದು ಅವರು ಹೇಳಿದ್ದಾರೆ.

ಇದೇ 27ರಿಂದ ಪ್ರಾರಂಭವಾಗಿರುವ ಸಂಸತ್ತಿನ ಚಳಿಗಾಲದ ಅಧಿವೇಶನದ ಮುಂದೆಯೂ ಪೇಟೆಂಟ್ ಕಾಯಿದೆ ಬರುವ ನಿರೀಕ್ಷೆ ಇದೆ. ಆದರೆ ದೇಶವನ್ನೇ ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರಿರುವ ಸರಕಾರ ದೇಶದ ಜನಸಾಮಾನ್ಯರ ಹಿತಾಸಕ್ತಿ ಕಾಯಲಾರದು. ಜನ ಸರಕಾರದ ಇಂತಹ ದೇಶ ವಿರೋಧಿ ಕ್ರಮಗಳ ವಿರುದ್ಧ ಹೋರಾಡಬೇಕಾಗುತ್ತದೆ.

ಬಡತನ ನಿರ್ಮೂಲನಾ ಕಾರ್ಯಕ್ರಮ ಹೊಸ ಕಸರತ್ತು

ಪ್ರಧಾನಿ ನರಸಿಂಹರಾಯರು ದೇಶದ ನಗರ ಪ್ರದೇಶಗಳಲ್ಲಿನ ಬಡತನ ನಿರ್ಮೂಲನೆ ಮಾಡಲು 6400 ಕೋಟಿ ರೂಪಾಯಿಗಳ ಕಾರ್ಯಕ್ರಮವೊಂದನ್ನು ಘೋಷಿಸಿದ್ದಾರೆ. ಉದಾರೀಕರಣದಿಂದ ಬಡತನ ಹೆಚ್ಚುತ್ತಿದೆ ಎಂದು ಸಮೀಕ್ಷೆಗಳೇ ಹೇಳುತ್ತಿರುವಾಗ, ದೇಶದಲ್ಲಿ ನಿರುದ್ಯೋಗ ತೀವ್ರ ಹೆಚ್ಚಿದೆ ಎಂದು ಯೋಜನಾ ಆಯೋಗವೇ ಹೇಳುವಾಗ ಈ ವರದಿಗಳನ್ನೇ ಹತ್ತಿಕ್ಕಲು ಪ್ರಯತ್ನಿಸಿದ ನರಸಿಂಹರಾಯರ ಸರಕಾರ ಈಗ ಸಾರ್ವತ್ರಿಕ ಚುನಾವಣೆಗಳು ಬರುತ್ತಿರುವಾಗ ಬಡತನ ನಿರ್ಮೂಲನೆ ತಮ್ಮ ಆದ್ಯತೆಯ ಕೆಲಸ ಎಂಬಂತೆ ಪೋಸು ಕೊಡುತ್ತಿದ್ದಾರೆ. ಕಳೆದ ಬಜೆಟ್ಟಿನಲ್ಲಿ ಗ್ರಾಮೀಣ ಅಭಿವೃದ್ಧಿ, ಬಡತನ ನಿರ್ಮೂಲನಾ ಕಾರ್ಯಕ್ರಮ ಇತ್ಯಾದಿಗಳಿಗೆ ಹೆಚ್ಚು ಹಣ ನೀಡುತ್ತಿದ್ದೇವೆ ಎಂದು ಬೆನ್ನು ತಟ್ಟಿಕೊಂಡ ಸರಕಾರಕ್ಕೆ ದೇಶದಲ್ಲಿ ಬೆಲೆಗಳು ಗಗನಕ್ಕೇ ಏರುತ್ತಿರುವುದು ಈ ಏರಿಕೆಯಿಂದಾಗಿ ರೂಪಾಯಿಯ ಬೆಲೆಯೂ ತೀವ್ರವಾಗಿ ಕಡಿಮೆ ಆಗಿರುವುದು ಇವೆಲ್ಲಾ ಗಮನದಲ್ಲಿರುವುದಿಲ್ಲ ಅಥವಾ ಅವರು ಹಾಗೇ ವರ್ತಿಸುತ್ತಿದ್ದಾರೆ.

ಉದ್ಯೋಗ ಸೃಷ್ಟಿ, ಸಾರ್ವಜನಿಕ ವಿತರಣಾ ವ್ಯವಸ್ಥೆ ಗಟ್ಟಿಗೊಳಿಸುವುದು ಇತ್ಯಾದಿ ಹಲವು ನಿಜಕ್ಕೂ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಿದ್ದರೂ ಅದನ್ನೂ ಮಾಡದೆ ಪ್ರಚಾರಕ್ಕಾಗಿ ಇಂತಹ ಕಾರ್ಯಕ್ರಮದ ಘೋಷಣೆ ಮಾಡಿದ್ದಾರೆ ನರಸಿಂಹರಾಯರು.

ಸಣ್ಣ ಪಟ್ಟಣಗಳಿಂದ ಜನ ದೊಡ್ಡ ಪಟ್ಟಣಗಳಿಗೆ ವಲಸೆ ಹೋಗುವುದನ್ನು ತಡೆಗಟ್ಟುವುದರ ಜೊತೆಗೆ ಈ ಕಾರ್ಯಕ್ರಮ ಔದ್ಯಮೀಕರಣಕ್ಕೆ ಹೆಚ್ಚು ಆಸರೆ ನೀಡುತ್ತದೆ ಎಂಬುದು ಸರಕಾರದ ಹೇಳಿಕೆ.

ಆದರೆ ಇದು ಸರಕಾರ ಹೇಳುವಂತೆ ಹೊಸ ಕಾರ್ಯಕ್ರಮವೇನೂ ಅಲ್ಲ. ಪಟ್ಟಣ ಪ್ರದೇಶಗಳ ಕುಶಲ ಕರ್ಮಿಗಳು, ಸಣ್ಣ ಪುಟ್ಟ ತಾಂತ್ರಿಕರಿಗೆ ಉದ್ಯೋಗ ಒದಗಿಸುವ ಯೋಜನೆಗಳು ವಿವಿಧ ಹೆಸರಿನಲ್ಲಿ ಆಗಲೇ ಇವೆ. ನಗರ ಪ್ರದೇಶಗಳ ಬಡವರಿಗೆ ಉದ್ಯೋಗ ಯೋಜನೆ(SEPUP), ನಗರದ ಪುಟ್ಟ ಉದ್ಯಮಿಗಳಿಗೆ ನೆರವಿನ ಯೋಜನೆ(SUME) ಆದರೆ ಇವುಗಳಿಗೆ ಸಾಕಷ್ಟು ಹಣ ನೀಡದೆ ಒತ್ತು ನೀಡದೆ ವಿಫಲಗೊಳಿಸಿದ ಶ್ರೇಯಸ್ಸು ನರಸಿಂಹರಾಯರ ಸರಕಾರಕ್ಕೆ ಸಲ್ಲುತ್ತದೆ.

ಈಗ ಅವೇ ಯೋಜನೆಗಳನ್ನು ಮತ್ತೆ ಪರಿಣಾಮಕಾರಿಗೊಳಿಸಹೊರಟರೆ ಅದರಿಂದ ತಮಗೆ ಲಾಭವಿಲ್ಲವೆಂದು ಈ ಸರಕಾರ ಹೊಸ ಯೋಜನೆ ತಂದಿದೆ.

...ಸಗಿಯವರ ಮೇಲೂ ಅವಲಂಬಿಸುವ ಈ ಯೋಜನೆ ಅದೆಷ್ಟು ಪರಿಣಾಮಕಾರಿಯಾ... ...ದು ನೋಡಬೇಕು.



ದೇಶದೊಳಗೆ

ಗುಜರಾತ್: ಪ್ರತಿ ಮೂವರು ಎಂ.ಎಲ್.ಎ.ಗಳಲ್ಲಿ ಒಬ್ಬ ಮಂತ್ರಿ

ಮುಂಬೈಯಲ್ಲಿ ಬಿಜೆಪಿ ಮುಖಂಡರು ತಮ್ಮ ಪಕ್ಷ ಕೇಂದ್ರದಲ್ಲಿ ಒಂದು ಶುದ್ಧ, ಸ್ಥಿರ ಹಾಗೂ ಬಲಿಷ್ಠ ಸರಕಾರ ಕೊಡುತ್ತೇವೆಂದು ಹೇಳುತ್ತಿರುವಾಗಲೇ ಗುಜರಾತಿನ ಭಿನ್ನಮತೀಯ ವಾಘೇಲಾ ಗುಂಪಿನವರ, ಕೇಶುಭಾಯ್ ಪಟೇಲ್ ಮಂತ್ರಿಮಂಡಲದ "ಅಶುದ್ಧ" ಕಾರುಬಾರುಗಳನ್ನೊಂಡ ಕಿರು ಹೊತ್ತಿಗೆಯ 40 ಸಾವಿರ ಪ್ರತಿಗಳನ್ನು ಅದೇ ಅಧಿವೇಶನದಲ್ಲಿ ಮಾರಾಟವಾಗುತ್ತಿತ್ತಂತೆ. ಅದೇ ಗುಜರಾತ್ ಈಗ 43 ಸದಸ್ಯರಿರುವ ಒಂದು ಬೃಹತ್ ಬಿಜೆಪಿ ಮಂತ್ರಿಮಂಡಳವನ್ನು ಹೊಂದಿದೆ. ಕೆಲವು ವರ್ಷಗಳ ಹಿಂದೆ ಕಾಂಗ್ರೆಸ್‌ನ ಛಬಿಲ್‌ದಾಸ್ ಮಂತ್ರಿಮಂಡಲವನ್ನು ಇದೇ ಬಿಜೆಪಿ "ಜಂಬೋ ಮಂತ್ರಿಮಂಡಲ" ಎಂದಿತ್ತು. ಈಗ ಸುರೇಶ್ ಚಂದ್ರ ಮೆಹ್ತಾರ ಬಿಜೆಪಿ ಮಂತ್ರಿಮಂಡಲ ಈ 'ಜಂಬೋ'ತನವನ್ನು ಮೀರಿಸಿ ನಿಂತಿದೆ. ಆ ಬಗ್ಗೆ ಗುಜರಾತಿನ ಬಿಜೆಪಿ ಮುಖಂಡರಿಗಾಗಲೀ ಅಡ್ವಾಣಿ, ವಾಜಪೇಯಿವರಿಗಾಗಲೀ ಏನೂ ನಾಚಿಕೆ ಇದ್ದಂತಿಲ್ಲ.

ಹೇಗೋ ಸರಕಾರ ಉಳಿಸಿಕೊಳ್ಳುವ ತವಕದಲ್ಲಿ ಮುಖ್ಯಮಂತ್ರಿಗಳೆಂದು ಪ್ರಮಾಣ ವಚನ ಸ್ವೀಕರಿಸಿದ ಸುರೇಶ್ ಚಂದ್ರ ಮೆಹ್ತಾ ಇತ್ತ ಹಿಂದಿನ ಮುಖ್ಯಮಂತ್ರಿ ಕೇಶೂಭಾಯಿ ಪಟೇಲ್ ಗುಂಪಿನ ಅತ್ತ ಭಿನ್ನಮತೀಯ ವಾಘೇಲಾ ಗುಂಪಿನ ಒತ್ತಡಗಳ ನಡುವೆ ಬಹಳ ಕಸರತ್ತು ನಡೆಸಬೇಕಾದ ಫಲವೇ ಈ 'ಸೂಪರ್ ಜಂಬೋ' ಬಿಜೆಪಿ ಮಂತ್ರಿ ಮಂಡಳ. ವಾಘೇಲಾ ಗುಂಪು ತಮ್ಮವರ ಮೇಲೆ ಹಲ್ಲೆ ಮಾಡಿ ಬಿಜೆಪಿಯ 'ಪ್ರತಿಷ್ಠೆ'ಗೆ ಕುಂದು ತಂದ ಕೇಶೂಭಾಯಿ ಮಂತ್ರಿಮಂಡಲದ ನಾಲ್ವರಿಗೆ ಮಂತ್ರಿ ಪದವಿ ಕೊಡಬಾರದು ಎಂದು ಬೆದರಿಸಿದರೆ, ಕೇಶೂಭಾಯಿ ಪಟೇಲ್ ಗುಂಪು "ಖಜುರಾಹೋ ಗುಂಪಿನ" ಎಂ.ಎಲ್.ಎ.ಗಳಿಗೆ ಮಂತ್ರಿ ಪದವಿ ಕೊಡಬಾರದೆಂದು ಒತ್ತಡ ಹಾಕಿದರು. ಒಬ್ಬ ಕ್ರಿಮಿನಲ್ ನನ್ನು ತನ್ನ ಮನೆಯಲ್ಲಿಟ್ಟುಕೊಂಡ ಎಂ.ಎಲ್.ಎ. ಹಂಸ್ ರಾಜ್ ರಡಾಡಿಯಾಗೆ ಮಂತ್ರಿಪದವಿ ಕೊಡಲೇಬಾರದು ಎಂದು ಒತ್ತಡ ಹಾಕಿದರು. ಆದರೆ ಹೊಸ ಮುಖ್ಯಮಂತ್ರಿ ಈ ಯಾವ ಒತ್ತಡವನ್ನೂ ಒಪ್ಪುವ ಸ್ಥಿತಿಯಲ್ಲಿರಲಿಲ್ಲ. ಅಂತಿಮವಾಗಿ ಗುಜರಾತಿನ ಜನ ಆರಿಸಿದ 'ಭಾರೀ' ಸಂಖ್ಯೆಯ ಬಿಜೆಪಿ ಎಂ.ಎಲ್.ಎ.ಗಳಲ್ಲಿ ಪ್ರತಿ ಮೂವರಲ್ಲಿ ಒಬ್ಬ ಈಗ ಮಂತ್ರಿ. ಉಳಿದವರಿಗೆ ಕಾರ್ಪೊರೇಶನ್‌ಗಳ ಛೇರ್ಮನ್‌ಗಿರಿ ಇತ್ಯಾದಿ. ಬಿಜೆಪಿಯ ಆಡಳಿತ ಎಷ್ಟು ಶುದ್ಧವಾಗಿರುತ್ತದೆ ಎಂಬುದನ್ನು ಅವರೇ ಪರಸ್ಪರರ ಬಗ್ಗೆ 'ಸತ್ಯ' ಹೇಳಿ ಹೊರಹಾಕಿಕೊಂಡಿದ್ದಾರೆ.

ರಾಜಾಸ್ತಾನದಲ್ಲೂ......

ಬಿಜೆಪಿಯಲ್ಲಿ ಭಿನ್ನಮತೀಯ ಪಿಡುಗು ಕೇವಲ ಅದರ ಮಾದರಿ ರಾಜ್ಯ ಗುಜರಾತಿಗೆ ಮಾತ್ರ ಸೀಮಿತವಾಗಿಲ್ಲ. ಮಹಾರಾಷ್ಟ್ರ, ರಾಜಾಸ್ತಾನದ ಅದರ ಸರಕಾರಗಳಿದ್ದಲ್ಲಿಯೂ ಇದೆ, ಇಲ್ಲದಿದ್ದಲ್ಲಿಯೂ ಇದೆ. ಪಕ್ಷೇತರರನ್ನು ಸೇರಿಸಿಕೊಂಡು ಹೇಗಾದರೂ ಸರಕಾರ ಮಾಡಲೇಬೇಕೆಂದು ಸರಕಾರ ರಚಿಸಿದ ರಾಜಾಸ್ತಾನದಲ್ಲಿ ಇತ್ತೀಚಿಗೆ ಗುಜರಾತಿನ ದೊಂಬರಾಟದ ನಂತರ ಅದು ತೀವ್ರವಾಗುವಂತೆ ಕಂಡಿತು. ಆದರೆ ಮುಖ್ಯಮಂತ್ರಿ ಶೇಖಾವತ್ ಹೇಗೋ ಅದನ್ನು ಸದ್ಯಕ್ಕೆ ಸಂಭಾಳಿಸಿಕೊಂಡಿದ್ದಾರೆ. ರಾಜ್ಯ ಬಿಜೆಪಿಯ ಉಪಾಧ್ಯಕ್ಷ ಘನಶ್ಯಾಂ ತಿವಾರಿ ಮತ್ತು ಇನ್ನೊಬ್ಬ ಎಂಎಲ್‌ಎ ಗೋಪಿಚಂದ್ ಗುಜ್ಜರ್ 'ಭಿನ್ನ'ಧ್ವನಿಯೆತ್ತಿದರೂ ಶೇಖಾವತ್ ರ ಜಾಣಾಕ್ಷತನದಿಂದ ಅದು ಹರಡಿಲ್ಲ ಎನ್ನಲಾಗುತ್ತದೆ.

ಆಡಳಿತದಲ್ಲಿ ಅಧಿಕಾರಶಾಹಿಗಳ ಪ್ರಭಾವ ಹೆಚ್ಚುತ್ತಿದೆ ಹಾಗೂ ಮುಖ್ಯಮಂತ್ರಿ ಮತ್ತು ಇತರ ಕೆಲವು ಮಂತ್ರಿಗಳು ಕುಡಿತದ ಚಟಕ್ಕೆ ಬಿದ್ದಿದ್ದಾರೆ ಎಂಬುದು ಈ ಬಾರಿ ಕೇಳಿಬಂದ ದೂಷಣೆ. ಈ ಮಂತ್ರಿಗಳು ತಮ್ಮ ಕುಡಿತದ ಚಟ ಬಿಡಬೇಕು ಇಲ್ಲವೇ ಅಧಿಕಾರ ಬಿಡಬೇಕು ಎಂದು ಒತ್ತಾಯಿಸಿದ ಗುಜ್ಜರ್ ಅವರನ್ನು ಮುಖ್ಯಮಂತ್ರಿಗಳು ಪಕ್ಷದಿಂದ ಅಮಾನತು ಮಾಡಿರುವುದಾಗಿ ಸಾರಿದರು. ಆದರೆ ಗುಜ್ಜರ್ ಅವರಿಗೆ ಶೋಕಾಸ್ ನೋಟೀಸಾಗಲಿ, ಅಮಾನತು ಆದೇಶವಾಗಲಿ ತಲುಪಿಲ್ಲವಂತೆ. ಇದೀಗ ಈ 'ಶಿಸ್ತಿ'ನ ಪಕ್ಷದಲ್ಲಿನ ನವೀನ ಪ್ರವೃತ್ತಿ ಎನ್ನಲಾಗುತ್ತಿದೆ. ಆದರೆ ಗುಜರಾತಿನಲ್ಲಾದದ್ದು ರಾಜಾಸ್ತಾನದಲ್ಲಿ ಆಗುವುದಿಲ್ಲ ಎಂದು ಮುಖ್ಯಮಂತ್ರಿ ಶೇಖಾವತ್ ಹೇಳುತ್ತಿದ್ದಾರೆ.

'ದೇಶೇರ್ ಕಥಾ' ದೈನಿಕ ಈಗ ಆಫ್‌ಸೆಟ್ ಮುದ್ರಣದಲ್ಲಿ

ತ್ರಿಪುರಾದ ಶ್ರಮಜೀವಿಗಳ ನೈಜ ದನಿಯಾದ, ಇತರ ಪತ್ರಿಕೆಗಳಂತೆ ಲಾಭದಾಸೆಯಿಲ್ಲದೆ ದಲಿತ ಮತ್ತು ಹೋರಾಟ ಜೀವಗಳ ಮುಖವಾಣಿಯಾಗಿ ಕಳೆದ 17 ವರ್ಷಗಳಿಂದ ದುಡಿಯುತ್ತಿರುವ ತ್ರಿಪುರಾದ 'ಡೈಲಿ ದೇಶೇರ್ ಕಥಾ' ಇನ್ನೊಂದು ಮೈಲಿಗಲ್ಲು ದಾಟಿದೆ. ಅದರ ಮುದ್ರಣ ವ್ಯವಸ್ಥೆಯನ್ನು ಆಧುನಿಕಗೊಳಿಸಲಾಗಿದೆ. ನವಂಬರ್ 2ರಂದು ಒಂದು ಸರಳ ಸಮಾರಂಭದಲ್ಲಿ ಇದನ್ನು ಉದ್ಘಾಟಿಸಲಾಯಿತು. ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ಉದ್ಘಾಟನೆ ನಡೆಸಿದರು.

1979ರಲ್ಲಿ ಪ್ರಕಟಣೆ ಆರಂಭಿಸಿದ 'ದೇಶೇರ್ ಕಥಾ' ಸಿಪಿಐ(ಎಂ)ನ ಐದು ದೈನಿಕಗಳಲ್ಲಿ ಒಂದು. ಕಳೆದ 17 ವರ್ಷಗಳ ಕಾಲ ತ್ರಿಪುರಾದ ಬಡಜನರ ನೋವು-ನಲಿವುಗಳನ್ನು ಪ್ರತಿಬಿಂಬಿಸಿಕೊಂಡು ಬಂದ ಈ ದೈನಿಕ ಸಹಜವಾಗಿಯೇ ಆಳುವ ಮಂದಿಯ ಕೆಂಗಣ್ಣಿಗೆ ಸದಾ ಗುರಿಯಾಗುತ್ತಿತ್ತು.

ಪತ್ರಿಕೆಯ ಮುದ್ರಣ ವ್ಯವಸ್ಥೆಯನ್ನು ಆಧುನೀಕರಿಸಲು ಪಕ್ಷದ ಸದಸ್ಯರು ತಮ್ಮ ಒಂದು ದಿನದ ಸಂಬಳವನ್ನು ನೀಡಿದರೆ, ಹಿತೈಷಿಗಳು ಹಾಗೂ ಇತರರು ವೈಯಕ್ತಿಕ ನೆಲೆಯಲ್ಲಿ ಹಣ ಸಹಾಯ ಮಾಡಿದರು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಾಣಿಕ್ ಸರ್ಕಾರ್ ಪತ್ರಿಕೆ ಬೆಳೆದು ಬಂದ ಚರಿತ್ರೆಯನ್ನು ವಿವರಿಸುತ್ತಾ ಹೇಳಿದರು.

ಪಶ್ಚಿಮ ಬಂಗಾಳದ ದೈನಿಕ 'ಗಣಶಕ್ತಿ' ಸಂಪಾದಕ ಅನಿಲ್ ಬಿಸ್ವಾಸ್ ಪತ್ರಿಕೆಯ ಗುಣಮಟ್ಟ ಹೆಚ್ಚಿಸಲು ಆಧುನೀಕರಣದ ಅಗತ್ಯವನ್ನು ಒತ್ತಿ ಹೇಳುತ್ತಾ "ಬೂರ್ಜ್ವಾ ಪತ್ರಿಕೆಗಳು ಲಾಭ ಮಾಡಲು ಉದ್ರೇಕಕಾರಿ ಸುದ್ದಿಗಳನ್ನು ಸೃಷ್ಟಿಸುತ್ತಾರೆ ಹಾಗೂ ಜನಗಳನ್ನು ತಪ್ಪುದಾರಿಗೆಳೆಯುತ್ತಾರೆ. ಅವರಿಗೆ ಊಹಾಪೋಹಗಳಲ್ಲೇ ಆಸಕ್ತಿ. ಈ ಮೂಲಕ ನಿಜವಾದ ಪ್ರಶ್ನೆಗಳಿಂದ ಜನರ ಗಮನ ಬೇರೆಡೆ ಸೆಳೆಯುವುದು ಅವರ ಉದ್ದೇಶ. ಆದರೆ ನಮ್ಮ ಪತ್ರಿಕೆಗಳ ಉದ್ದೇಶ ಅದಲ್ಲ. ನಾವು ನಮ್ಮ ಮುದ್ರಣ ತಂತ್ರಜ್ಞಾನವನ್ನು ಆಧುನೀಕರಿಸುವುದು ನಮ್ಮ ಪತ್ರಿಕೆಗಳು ಬೂರ್ಜ್ವಾ ಮಾಧ್ಯಮದೊಂದಿಗೆ ಸ್ಪರ್ಧಿಸುವಂತಾಗಲು ಹಾಗೂ ಅವರ ಸುಳ್ಳುಗಳನ್ನು, ವಿಕೃತಿಗಳನ್ನು ಎದುರಿಸಲು" ಎಂದರು.

ಪಕ್ಷದ ಪತ್ರಿಕೆಗಳ ಇತಿಹಾಸವನ್ನು ಸಂಕ್ಷಿಪ್ತವಾಗಿ ನೀಡುತ್ತಾ ಆರಂಭದಿಂದಲೂ ಅವು ತೀವ್ರ ದಮನ ಎದುರಿಸಬೇಕಾಗಿ ಬಂತು. ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಹಲವಾರು ನಮ್ಮ ಪತ್ರಿಕೆಗಳನ್ನು ಬಲಪ್ರಯೋಗ ನಡೆಸಿ ಮುಚ್ಚಿಸಲಾಯಿತು. ಸ್ವತಂತ್ರ ಭಾರತದಲ್ಲೂ 'ದೇಶೇರ್ ಕಥಾ' ಕಾಂಗ್ರೆಸ್(ಐ) ಆಳ್ವಿಕೆಯಲ್ಲಿ ಇಂತಹ ಧಾಳಿ ಎದುರಿಸಬೇಕಾಗಿ ಬಂತು. ಮುಂಬರುವ ದಿನಗಳಲ್ಲಿ ನಮ್ಮ ಪತ್ರಿಕೆಗಳು ಎಡ, ಪ್ರಜಾಪ್ರಭುತ್ವ ಹಾಗೂ ಜಾತ್ಯಾತೀತ ಶಕ್ತಿಗಳನ್ನು ಬಲಗೊಳಿಸುವಲ್ಲಿ ಸಕ್ರಿಯ ಪಾತ್ರ ವಹಿಸುತ್ತವೆ ಎಂದು ಅವರು ಹೇಳಿದರು.

ನವಂಬರ್ 2ರ ಬೆಳಿಗ್ಗೆ 'ದೇಶೇರ್ ಕಥಾ'ದ ಪ್ರಥಮ ಆಫ್ ಸೆಟ್ ಸಂಚಿಕೆಯನ್ನು ಎಲ್ಲಾ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಸ್ವತಃ ಮಾರಾಟ ಮಾಡಿದರು. ಪ್ರಕಾಶ್ ಕಾರಟ್ ರವರೂ ಈ ಮಾರಾಟ ಕಾರ್ಯಕ್ರಮದಲ್ಲಿ ಸೇರಿಕೊಂಡು ಕೆಲವು ಪ್ರತಿಗಳನ್ನು ಮಾರಿದರು.

(ಐ.ಎನ್.ಎಸ್.)

ಬಾಂಬೆ ಮುಂಬೈ ಆಯಿತು!

ಅಂತರ್ರಾಷ್ಟ್ರೀಯವಾಗಿ ಬಾಂಬೆ ಎಂದು ಕರೆಸಿಕೊಳ್ಳುತ್ತಿರುವ ಭಾರತದ ಹಣಕಾಸು ರಾಜಧಾನಿ ಇನ್ನು ಮುಂದೆ 'ಮುಂಬೈ' ಕರೆಸಿಕೊಳ್ಳಲಿದೆ. ಕೇಂದ್ರ ಮಂತ್ರಿಮಂಡಳಿಯು ಇದೀಗ ಈ ಹೆಸರು ಬದಲಾವಣೆಗೆ ಅನುಮತಿ ನೀಡಿದೆ.

1950ರ ದಶಕದಲ್ಲಿ ಭಾಷಾವಾರು ರಾಜ್ಯಗಳ ರಚನೆಗೆ ದೇಶಾದ್ಯಂತ ಚಳುವಳಿ ನಡೆಯುತ್ತಿದ್ದಾಗ ಅದರ ಭಾಗವಾಗಿ ಮಹಾರಾಷ್ಟ್ರದಲ್ಲೂ 'ಸಂಯುಕ್ತ ಮಹಾರಾಷ್ಟ್ರ' ಆಂದೋಲನ ನಡೆಯಿತು. ಈ ಆಂದೋಲನ 'ಬಾಂಬೆ' ಎಂಬ ಹೆಸರನ್ನು ಬದಲಿಸಿ 'ಮುಂಬೈ' ಎಂದಿಡಲು ಒತ್ತಾಯಿಸಿತ್ತು. ಆದರೆ ಮೇ1, 1960 ಮಹಾರಾಷ್ಟ್ರ ರಾಜ್ಯ ಸ್ಥಾಪನೆಯಾದರೂ 'ಬಾಂಬೆ' ಮುಂದುವರೆಯಿತು. ಇದು ಅಂತರ್ರಾಷ್ಟ್ರೀಯವಾಗಿ ಪ್ರಸಿದ್ಧವಾದ ಹೆಸರು, ಇದನ್ನು ಬದಲಿಸಿದರೆ ವಿದೇಶೀ ವ್ಯಾಪಾರದ ಮೇಲೆ ಪ್ರತಿಕೂಲ ಪರಿಣಾಮ ಬೀಳುತ್ತದೆಂಬ ವಾದ ಹೂಡಿ ಈ ಹೆಸರು ಬದಲಾವಣೆಯ ಒತ್ತಾಯವನ್ನು ತಿರಸ್ಕರಿಸಲಾಗಿತ್ತು. ಇತ್ತೀಚೆಗೆ 1992ರಲ್ಲಿ ಸುಧಾಕರ ನಾಯಕ್ ನೇತೃತ್ವದ ಕಾಂಗ್ರೆಸ್ ಸರಕಾರವೂ ಹೆಸರು ಬದಲಾವಣೆಯ ಶಿಫಾರಸು ಮಾಡಿತ್ತು. ಈಗಿರುವ ಬಿಜೆಪಿ-ಶಿವಸೇನೆ ಸರಕಾರವೂ ಈ ಒತ್ತಾಯ ಮುಂದಿಟ್ಟಿತ್ತು. ಜನಸಾಮಾನ್ಯರನ್ನು ವಿದೇಶೀ ಕಂಪನಿಗಳ, ಆರ್ಥಿಕ ಸಾಂಸ್ಕೃತಿಕ ಧಾಳಿಯಿಂದ ರಕ್ಷಿಸಲಾರದ, ರಕ್ಷಿಸುವ ಯೋಜನೆಯೂ ಇರದ ಶಿವಸೇನೆ-ಬಿಜೆಪಿ ಸರಕಾರಕ್ಕೆ ತೋರಿಸಲು ಒಂದಾದರೂ 'ಸಾಧನೆ'ಯನ್ನು ಕೇಂದ್ರ ಈಗ ಒದಗಿಸಿದೆ-ವಿದೇಶೀ ಹೆಸರನ್ನಾದರೂ ತೆಗೆದಿದ್ದಾರಲ್ಲ ಎಂದು.

ಸೆನ್ಸಾರಿನವರು ಏನು ಮಾಡುತ್ತಿದ್ದಾರೆ?

ತಮಿಳುನಾಡು ಮಹಿಳೆಯರ ಪ್ರಶ್ನೆ

ಮದ್ರಾಸ್ ನಗರದ ಹನ್ನೊಂದು ಮಹಿಳಾ ಸಂಘಟನೆಗಳು ಸಿನಿಮಾ ಉದ್ದಿಮೆ ಮತ್ತು ಮಹಿಳಾ ಗುಂಪುಗಳ ನಡುವೆ ಮಾತುಕತೆ ಏರ್ಪಡಿಸಬೇಕೆಂದು ಚಲನಚಿತ್ರ ಸೆನ್ಸಾರ್ ಬೋರ್ಡನ್ನು ಒತ್ತಾಯಿಸಿದ್ದಾರೆ. ಇತ್ತೀಚೆಗೆ ತಮಿಳು ಚಲನಚಿತ್ರಗಳಲ್ಲಿ ಅತ್ಯಂತ ಹೊಲಸುತನ ಹಾಗೂ ಹಿಂಸಾಚಾರದ ಪ್ರದರ್ಶನಗಳು ತುಂಬಿವೆ. ಮಹಿಳೆಯರನ್ನು ಹೀನೈಸುವ, ಅವರನ್ನು ಕಾಮದ ಗೊಂಬೆಗಳಾಗಿ ಚಿತ್ರಿಸುವ, ಹೊಲಸು ಅರ್ಥ ಬರುವ ಸಂಭಾಷಣೆ ಹಾಗೂ ಹಾಡುಗಳು ಇತ್ತೀಚೆಗೆ ತಮಿಳು ಚಿತ್ರಗಳಲ್ಲಿ ಹೆಚ್ಚುತ್ತಿವೆ. ಇತ್ತೀಚಿನ ಕೆಲವು ಚಿತ್ರಗಳು ಬಹುಪತ್ನಿತ್ವ ಹಾಗೂ ಮಹಿಳೆಯರ ಕೊಲೆಯನ್ನು ಸಮರ್ಥಿಸುವ ಮಟ್ಟಕ್ಕೂ ಹೋಗಿವೆ ಎಂದು ಈ ಸಂಘಟನೆಗಳು ಆಪಾದಿಸಿವೆ.

ಹಂಚು ಕಾರ್ಮಿಕರ ಬೃಹತ್ ಮೆರವಣಿಗೆ

ಭಟ್ಕಳ: ಹಂಚಿನ ಕಾರ್ಮಿಕರಿಗೆ ಕನಿಷ್ಠ ವೇತನ ಪರಿಷ್ಕರಣೆ ನಡೆಸದ ಸರ್ಕಾರದ ದೋರಣೆಯನ್ನು ಪ್ರತಿಭಟಿಸಿ ಭಟ್ಕಳ ನಗರದಲ್ಲಿ ಸಿಐಟಿಯು ನೇತೃತ್ವದಲ್ಲಿ ಒಂದು ಸಾವಿರಕ್ಕೂ ಮಿಕ್ಕಿದ ವಿವಿಧ ಹಂಚಿನ ಕಾರ್ಖಾನೆ ಕಾರ್ಮಿಕರು ಭಟ್ಕಳ ನಗರದ ಪ್ರಮುಖ ಪ್ರದೇಶದಲ್ಲಿ ಘೋಷಣೆಗಳನ್ನು ಕೂಗುತ್ತಾ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ನಂತರ ಕಾರ್ಮಿಕ ನಿರೀಕ್ಷಕರ ಮುಖಾಂತರ ಕಾರ್ಮಿಕ ಮಂತ್ರಿಯವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಕಾರ್ಯಕ್ರಮದ ನೇತೃತ್ವವನ್ನು ಜಿಲ್ಲಾ ಹಂಚು ಕಾರ್ಮಿಕ ಸಂಘದ ಸಹಕಾರ್ಯದರ್ಶಿ ಸುಭಾಷ್ ಕೊಪ್ಪಿಕರ್, ಮುನ್ವೇಲರ್ ಡಿಕೋಸ್ತಾ, ವೆಂಕಟೇಶ ದೇವಾಡಿಗ,, ಮುಂತಾದವರು ವಹಿಸಿದ್ದರು.

ಕನಿಷ್ಠ ಕೂಲಿ ಜಾರಿಗೆ ಆಗ್ರಹ

ಕರ್ನಾಟಕ ರಾಜ್ಯದಲ್ಲಿ ಬೀಡಿ ಕಾರ್ಮಿಕರು ಹೋರಾಟ ನಡೆಸಿದ ಬಳಿಕ ಸರಕಾರ ಮೇ 9ರಂದು ಸಾವಿರ ಬೀಡಿಗೆ ರೂ 36.85 ನ್ನು ಕನಿಷ್ಠ ಕೂಲಿಯಾಗಿ ಕರಡು ಪ್ರಕಟಣೆ ಹೊರಡಿಸಿತು. ಅನಂತರದ 2 ತಿಂಗಳಲ್ಲಿ ಕನಿಷ್ಠ ಕೂಲಿಯ ಅಂತಿಮ ಪ್ರಕಟಣೆ ಸರಕಾರ ಹೊರಡಿಸಿ ಕಾರ್ಮಿಕರಿಗೆ ಕನಿಷ್ಠ ಕೂಲಿ ಜಾರಿಗೊಳಿಸುವ ಬದಲು ಮಾಲಕರಿಗೆ ಸಹಾಯ ಮಾಡುವ ಬಗ್ಗೆ ತಡ ಮಾಡಿರುವುದನ್ನು 25.10.95 ರಂದು ಸೇರಿದ ಕರ್ನಾಟಕ ರಾಜ್ಯ ಬೀಡಿ ವರ್ಕರ್ಸ್ ಫೆಡರೇಶನ್‌ನ ಸಭೆ ತೀವ್ರವಾಗಿ ಖಂಡಿಸಿದೆ.

ನವಂಬರ್ ತಿಂಗಳಲ್ಲಿ ತಾಲೂಕು ಪ್ರಾದೇಶಿಕ ಹಾಗೂ ಜಿಲ್ಲಾವಾರು ಬೀಡಿ ಕಾರ್ಮಿಕರ ಸಮಾವೇಶಗಳನ್ನು ನಡೆಸಿ, ಕರಪತ್ರಹಂಚಿ ಪ್ರಚಾರ ಮಾಡಬೇಕೆಂದು ನಿರ್ಧರಿಸಲಾಗಿದೆ. ಪ್ರತಿ ಕಾರ್ಮಿಕರಿಂದ ಮನವಿ ಪತ್ರ ಮುಖ್ಯಮಂತ್ರಿಯವರಿಗೆ ಕಳುಹಿಸುವುದರ ಮೂಲಕ ಸಂಘಟನೆಯನ್ನು ಬಲಪಡಿಸಿ ಡಿಸೆಂಬರ್ 18ರಿಂದ 23ರವರೆಗೆ ಬೇಡಿಕೆಗಳ ಪ್ರಚಾರಣೆಯನ್ನು ನಡೆಸಿದ ಬಳಿಕ ಸರಕಾರ ಕನಿಷ್ಠ ಕೂಲಿಯ ಅಂತಿಮ ಪ್ರಕಟಣೆ ಹೊರಡಿಸದಿದ್ದಲ್ಲಿ ಡಿಸೆಂಬರ್ 26 ರಿಂದ ರಾಜ್ಯದಾದ್ಯಂತ ಬೀಡಿ ಕಾರ್ಮಿಕರು ಅನಿರ್ದಿಷ್ಟಾವಧಿಯ ಮುಷ್ಕರ ನಡೆಸಲು ಸಭೆಯು ಕರೆ ನೀಡಿದೆ.

ಬೆಂಗಳೂರಿನಲ್ಲಿ ರೈತ ಸಮಾವೇಶ

ಅಕ್ಟೋಬರ್ 22ರಂದು ಕರ್ನಾಟಕ ಪ್ರಾಂತ ರೈತ ಸಂಘದ ಬೆಂಗಳೂರು ದಕ್ಷಿಣ ತಾಲೂಕು ಸಮಿತಿ ಆಶ್ರಯದಲ್ಲಿ ಬೆಂಗಳೂರು ದಕ್ಷಿಣ ತಾಲೂಕಿನ ಭೂ ಸಮಾವೇಶವನ್ನು ಮೈಸೂರು ರಸ್ತೆಯಲ್ಲಿರುವ ಬಸವ ಗಂಗೋತ್ರಿಯಲ್ಲಿ ಏರ್ಪಡಿಸಲಾಗಿತ್ತು. ಈ ಭೂ ಸಮಾವೇಶದಲ್ಲಿ 350 ಜನ ರೈತ ಪ್ರತಿನಿಧಿಗಳು ಭಾಗವಹಿಸಿದ್ದರು.

ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಚಂದ್ರಶೇಖರ ಬಾಳೆಯವರು ಈ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಕಾರ್ಯದರ್ಶಿ ಪಿ.ಜಗನ್ನಾಥ್ ಈ ಸಮಾವೇಶವನ್ನು ಉದ್ಘಾಟನೆ ಮಾಡಿದರು. ರೈತ ಸಂಘದ ವೆಂಕಟಾಚಲಯ್ಯ ವರದಿ ಮಂಡಿಸಿದರು. ರಾಜ್ಯ ಸರಕಾರವು ತಂದಿರುವ ಭೂ ಸುಧಾರಣಾ ತಿದ್ದುಪಡಿಯನ್ನು ಸಮಾವೇಶವು ಖಂಡಿಸಿ ಇದರ ಪ್ರತಿಯನ್ನು ಸುಡಲಾಯಿತು.

ಸಮಾವೇಶವು ಪೇಟೆ, ಪಟ್ಟಣದ ಶ್ರೀಮಂತರು ಬಗರ್ ಹುಕುಂ ಭೂಮಿಯನ್ನು ಅಕ್ರಮವಾಗಿ ರೈತರಿಂದ ಕಡಿಮೆ ಬೆಲೆಗೆ ಕೊಂಡು ಇದಕ್ಕೆ ಉಳಿಮೆ ಚೀಟಿ ಮಾಡಿಸುವ ಪ್ರಯತ್ನವನ್ನು ತಡೆಯಲು ಸರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿತು. ಇದಕ್ಕಾಗಿ ನವಂಬರ್ 13 ರಂದು ವಿಧಾನಸೌಧದ ಮುಂದೆ ಧರಣಿ ನಡೆಸಲು ತೀರ್ಮಾನವಾಯಿತು. ಇದಕ್ಕೆ ಪೂರಕವಾಗಿ ಎಲ್ಲಾ ಹಳ್ಳಿಗಳಿಂದಲೂ ಸಹಿ ಸಂಗ್ರಹ ಮಾಡಿ ಕಂದಾಯ ಸಚಿವರಿಗೆ ಮನವಿ ಕೊಡುವಂತೆ ತೀರ್ಮಾನವಾಯಿತು.

ಗ್ರಾಮ ಪಂಚಾಯಿತಿ ನೌಕರರ ಜಿಲ್ಲಾ ಸಮ್ಮೇಳನ

ಶಿವಮೊಗ್ಗ: ಗ್ರಾಮ ಪಂಚಾಯಿತಿ ನೌಕರರ ಶಿವಮೊಗ್ಗ ಜಿಲ್ಲಾ ಸಮ್ಮೇಳನವು ಅಕ್ಟೋಬರ್ 16ರಂದು ಶಿವಮೊಗ್ಗದ ಗಾಂಧಿಪಾರ್ಕಿನಲ್ಲಿ ನಡೆಯಿತು.

ಈ ಸಮ್ಮೇಳನವನ್ನು ಉದ್ಘಾಟಿಸಿಮಾತನಾಡಿದ ಸಿಐಟಿಯುನ ಜಿಲ್ಲಾ ಮುಖಂಡ ಎಸ್.ಬಿ.ಶಿವಶಂಕರ್ ರವರು ಸಂಘಟಿತ ಹೋರಾಟದ ಅವಶ್ಯಕತೆ ಯನ್ನು ವಿವರಿಸಿದರು. ರಾಜ್ಯ ಪಂಚಾಯಿತಿ ನೌಕರರ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಸಮ್ಮೇಳನದಲ್ಲಿ ಉಪಸ್ಥಿತರಿದ್ದು ಮಾತನಾಡಿದರು.

ನೂತನ ಜಿಲ್ಲಾ ಸಮಿತಿಗೆ ಬಿ.ಎಸ್.ಶೇಕರಪ್ಪ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಪಟೇಲ್, ಗಣಪತಿಯಪ್ಪ, ಗೌರಮ್ಮ ಶೇಖರಪ್ಪ, ಕಾರ್ಯದರ್ಶಿಯಾಗಿ ಡಿ.ಎಸ್.ಭೈರೇಶ್, ಸಹಕಾರ್ಯದರ್ಶಿಯಾಗಿ ದಿವಾಕರ, ಕೆ.ಎಂ.ಶಿವಯ್ಯ, ಖಜಾಂಚಿಯಾಗಿ ನಂಜಪ್ಪ ಆಯ್ಕೆಯಾದರು. 12 ಸದಸ್ಯರ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಈ ಸಮ್ಮೇಳನದ ಅಧ್ಯಕ್ಷತೆಯನ್ನು ಬಿ.ಎಸ್. ಶೇಖರಪ್ಪ ವಹಿಸಿದ್ದರು. ಡಿ.ಎಸ್.ಭೈರೇಶ ಸ್ವಾಗತಿಸಿ. ಕೊನೆಯಲ್ಲಿ ದಿವಾಕರ್ ವಂದಿಸಿದರು.

ಭೂ ಸುಧಾರಣಾ ತಿದ್ದುಪಡಿ ವಾಪಸಿಗೆ ಆಗ್ರಹ

ಬೆಂಗಳೂರು: 13 ನವಂಬರ್ 1995ರಂದು ವಿಧಾನಸೌಧದ ಮುಂದೆ ಬೆಂಗಳೂರು ದಕ್ಷಿಣ ತಾಲೂಕಿನ ರೈತರು ಮತ್ತು ಕೃಷಿ ಕೂಲಿಕಾರರು ಹಲವಾರು ವರ್ಷಗಳಿಂದ ಬಂಜರು ಭೂಮಿಯಲ್ಲಿ ಬೇಸಾಯ ಮಾಡುತ್ತಿರುವ ಬಡ ರೈತರಿಗೆ ಉಳುಮೆ ಚೀಟಿ ಕೊಡಬೇಕು ಮತ್ತು ಈಗಾಗಲೇ ಮಾರಾಟ ಮಾಡಿಕೊಂಡಿರುವ ಬಗರ್ ಹುಕುಂ ಸಾಗುವಳಿ ಜಮೀನನ್ನು ಪೇಟೆ ಪಟ್ಟಣದ ಶ್ರೀಮಂತರಿಂದ ಸರಕಾರ ತನ್ನ ವಶಕ್ಕೆ ತೆಗೆದುಕೊಂಡು ಅರ್ಹ ಬಡವರಿಗೆ ಹಂಚಬೇಕು, ಹಸಿರು ವಲಯ ಪ್ರದೇಶದಲ್ಲಿ ಈಗಾಗಲೇ ಅಧಿಕಾರಿಗಳಿಗೆ ಲಂಚ ಕೊಟ್ಟು ಉಳುಮೆ ಚೀಟಿ ಪಡೆದುಕೊಂಡಿರುವುದನ್ನು ತನಿಖೆ ಮಾಡಬೇಕು, ಜನತಾದಳ ಸರಕಾರ ತಂದಿರುವ ಹೊಸ ಭೂ ಸುಧಾರಣಾ ತಿದ್ದುಪಡಿಯನ್ನು ವಾಪಸ್ಸು ಪಡೆಯಬೇಕೆಂದು ಒತ್ತಾಯಿಸಿ ಬೆಳಿಗ್ಗೆ 11.30ಕ್ಕೆ ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕಿನಿಂದ ನೂರಾರು ಜನ ರೈತರು ಕೃಷಿ ಕೂಲಿಕಾರರು ಮೆರವಣಿಗೆ ಹೊರಟು ವಿಧಾನಸೌಧದ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು. ಈ ಧರಣಿ ಸತ್ಯಾಗ್ರಹದ ಸಭೆಯನ್ನುದ್ದೇಶಿಸಿ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಲಕ್ಕಣ್ಣ ಮತ್ತು ದಕ್ಷಿಣ ತಾಲೂಕು ರೈತ ಸಂಘದ ಪ್ರಧಾನ ಕಾರ್ಯದರ್ಶಿ ಎನ್. ವೆಂಕಟಾಚಲಯ್ಯ, ರಾಜ್ಯದ ಪ್ರಧಾನ ಕಾರ್ಯದರ್ಶಿ ಪಿ.ಜಗನ್ನಾಥ್ ಮಾತನಾಡಿದರು.

ಡಿವೈಎಫ್‌ಐ: ಕರ್ನಾಟಕ ರಾಜ್ಯೋತ್ಸವ

ಊರುಕೆರೆ: ಕ್ರೀಡೆಗಳಲ್ಲಿ ವಿದ್ಯಾರ್ಥಿಗಳು, ಯುವಜನರು, ಕ್ರೀಡಾಪಟುಗಳು ಭಾಗವಹಿಸುವುದರಿಂದ ಎಲ್ಲರಲ್ಲೂ ಗೆಳೆತನ ಬೆಳೆಸುವ ಮನೋಭಾವನೆ ಉಂಟಾಗುತ್ತದೆಂದು ಡಿವೈಎಫ್‌ಐ ರಾಜ್ಯ ಸಮಿತಿ ಅಧ್ಯಕ್ಷರಾದ ಎಸ್ ವೈ ಗುರುಶಾಂತ್ ರವರು ಅಭಿಪ್ರಾಯಪಟ್ಟರು. ಅವರು 26.10.95ರಂದು ಊರುಕೆರೆ ಡಿವೈಎಫ್‌ಐ ಘಟಕವು ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ 'ಕ್ರೀಡೋತ್ಸವ'ದ ಉದ್ಘಾಟನಾ ಸಮಾರಂಭದಲ್ಲಿ ಉದ್ಘಾಟಿಸಿ ಮಾತನಾಡುತ್ತಿದ್ದರು. ಎಲ್ಲರಿಗೂ ಉದ್ಯೋಗ, ನೆಲೆ ಇಲ್ಲದೆ ಇಂದು ಯುವಜನರಲ್ಲಿ ಅಭದ್ರತೆ ಭಾವನೆ ಉಂಟಾಗುತ್ತದೆ, ಆದರೆ ಕೆಲವು ಶಕ್ತಿಗಳು ಭಾಷೆಯ ಹೆಸರಿನಲ್ಲಿ ಸಾಮಾಜಿಕ ಅಪರಾಧವನ್ನು ಮಾಡುತ್ತಿದೆ ಎಂದು ಅವರು ಆಪಾದಿಸಿದರು.

ಮುಖ್ಯ ಅತಿಥಿಗಳಾಗಿ ಊರುಕೆರೆಯ ಹಿರಿಯ ಯುವ ಮುಖಂಡರಾದ ಎಂ.ಎಸ್. ಚೆಲುವರಾಜುರವರು ಮಾತನಾಡಿದರು. ಎಸ್ಎಫ್‌ಐನ ಜಿಲ್ಲಾ ಸಹಕಾರ್ಯದರ್ಶಿ ಎನ್.ಕೆ. ಸುಬ್ರಮಣ್ಯಂರವರು ಉಪಸ್ಥಿತರಿದ್ದರು.

ಈ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಊರುಕೆರೆ ಸರಕಾರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಗೋವಿಂದರಾಜುರವರು ವಹಿಸಿದ್ದರು. ಕ್ರೀಡೋತ್ಸವದ ನಿರೂಪಣೆಯನ್ನು ಡಿವೈಎಫ್‌ಐನ ಸ್ಥಳೀಯ ಘಟಕದ ಅಧ್ಯಕ್ಷರಾದ ಉಮಾಮಹೇಶ್ವರರವರು ವಹಿಸಿ, ಸ್ವಾಗತವನ್ನು ಆನಂದನಾಯಕ ಹಾಗೂ ಕೊನೆಯಲ್ಲಿ ವಂದನಾರ್ಪಣೆಯನ್ನು ಸ್ಥಳೀಯ ಘಟಕದ ಕಾರ್ಯದರ್ಶಿ [illegible]

ಪೋಲಂಡಿನ ಜನತೆಯ ತೀರ್ಪು

ಐ.ಎಂ.ಎಫ್. ದಾರಿ ಬೇಡ-ಲೆಕ್ ವಲೇಸಾ ಬೇಡ

ಪೋಲಂಡಿನ ಅಧ್ಯಕ್ಷ ಚುನಾವಣೆಯಲ್ಲಿ ಸಾಮ್ರಾಜ್ಯಶಾಹಿಗಳ, ವಿಶ್ವದ ಬಲಪಂಥೀಯರೆಲ್ಲರ ಪ್ರೀತಿಪಾತ್ರನಾಗಿದ್ದ ಲೆಕ್ ವಲೆಸಾ ಸೋತಿದ್ದಾರೆ ಎಂದು ವರದಿಯಾಗಿದೆ. ಪೋಲಂಡಿನಲ್ಲಿ ಸಮಾಜವಾದಿ ಪ್ರಭುತ್ವದ ಪತನದ ನಂತರ ಹೆಸರು ಬದಲಿಸಿಕೊಂಡು ಮರು ಸಂಘಟನೆಗೊಂಡ ಹಿಂದಿನ ಕಮ್ಯುನಿಸ್ಟ್ ಪಕ್ಷದ ಮುಖಂಡ ಅಲೆಕ್ಸಾಂಡರ್ ಕ್ವಾಸ್ನಿವ್ ಸ್ಕಿ ಹೊಸ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ತಿಳಿದು ಬಂದಿದೆ. ಎರಡು ವರ್ಷಗಳ ಹಿಂದೆ ಇವರ ಪಕ್ಷ ಅಂದರೆ ಹಿಂದಿನ ಕಮ್ಯುನಿಸ್ಟರು ಅಧಿಕಾರಕ್ಕೆ ಬಂದು ಜೋಸೆಫ್ ಒಲೆಸ್ಕಿ ಪ್ರಧಾನಮಂತ್ರಿಗಳಾದರು. ಈಗ ಅಧ್ಯಕ್ಷೀಯ ಚುನಾವಣೆಯ ತೀರ್ಪಿನೊಂದಿಗೆ ಪೋಲಂಡಿನ ಜನತೆ ಕಮ್ಯುನಿಸ್ಟ್-ವಿರೋಧಿಗಳನ್ನು ಸಂಪೂರ್ಣ ತಿರಸ್ಕರಿಸಿದಂತಾಗಿದೆ. ಈ ಚುನಾವಣೆಯಲ್ಲಿ 67.2% ಜನ ಭಾಗವಹಿಸಿದ್ದು ಇದು ಅತ್ಯಂತ ಹೆಚ್ಚು ಮತದಾನ ನಡೆದ ಚುನಾವಣೆ ಎಂದು ಹೇಳಲಾಗಿದೆ.

ಸಮಾಜವಾದದ ವಿರುದ್ಧ ಜಾಗತಿಕ ಹೋರಾಟದಲ್ಲಿ ಸಾಮ್ರಾಜ್ಯಶಾಹಿಗಳು, ಗುರುತಿಸಿದ ಕಟ್ಟಾ ಕಮ್ಯುನಿಸ್ಟ್-ವಿರೋಧಿ ಮುಖಂಡರಲ್ಲಿ ಲೆಕ್ ವಲೇಸಾ ಮೊದಲ ಸಾಲಿಗೆ ಸೇರಿದವರು. ಒಂದು 'ಸ್ವತಂತ್ರ' ಕಾರ್ಮಿಕ ಸಂಘ ಸಾಲಿಡಾರಿಟಿಯ ಈ ಮುಖಂಡ ಸಾಮ್ರಾಜ್ಯಶಾಹಿಗಳು, ವಿಶ್ವದ ಎಲ್ಲಾ ಬಲಪಂಥೀಯ ಹಾಗೂ ಬಲಿಷ್ಠ ಕ್ಯಾಥೋಲಿಕ್ ಧರ್ಮಗುರು ಪೋಪ್(ಆ ವೇಳೆಗೆ ಪೋಲ್ ಪೋಲಂಡಿನವರಾಗಿರುವುದು ಕೇವಲ ಆಕಸ್ಮಿಕವಲ್ಲ)ರ ಬೆಂಬಲದಿಂದ ಸಮಾಜವಾದವನ್ನು ಕಳಚಿ ಹಾಕುವಲ್ಲಿ ಯಶಸ್ವಿಯಾದರು. ಆದರೆ ಬೇಗನೇ ಪೋಲಂಡಿನ ಜನಸಾಮಾನ್ಯರ ಭ್ರಮೆ ಹರಿಯಿತು. ಎರಡು ವರ್ಷಗಳ ಹಿಂದೆ 1993ರಲ್ಲಿ 'ಸಾಲಿಡಾರಿಟಿ'ಯನ್ನು ಅಧಿಕಾರದಿಂದುರುಳಿಸಿದು. ಈಗ ಅದರ ಸರ್ವೋಚ್ಚ ಮುಖಂಡನನ್ನು ಮನೆಗೆ ಕಳಿಸಿದ್ದಾರೆ. ಏಕೆಂದರೆ "ಸ್ವತಂತ್ರ" ಕಾರ್ಮಿಕ ಸಂಘ ಎಷ್ಟು 'ಸ್ವತಂತ್ರ' ಎಂದು ಅವರಿಗೀಗ ಚೆನ್ನಾಗಿ ಮನವರಿಕೆಯಾಗಿದೆ. ಈ ಕಾರ್ಮಿಕ ಸಂಘ ಕಾರ್ಮಿಕರ ಪರವಾದ ನೀತಿಗಳನ್ನು ಅನುಸರಿಸುವಲ್ಲಿ 'ಸ್ವತಂತ್ರ'ವಾಗಿಲ್ಲ, ಸಾಮ್ರಾಜ್ಯಶಾಹಿ-ಪರ ನೀತಿಗಳನ್ನು ಐಎಂಎಫ್ ನಿರ್ದೇಶನದಡಿಯಲ್ಲಿ ಅನುಸರಿಸಿದ 'ಸ್ವಾತಂತ್ರ್ಯ' ಮಾತ್ರ ಇದೆ ಎಂದು ಅವರೀಗ ಅರಿತಿರುವ ಫಲವೇ ಈ ತೀರ್ಪು. ಈ ಬಾರಿಯೂ ಸಾಮ್ರಾಜ್ಯಶಾಹಿಗಳು ಮತ್ತು ಪೋಪ್ ರ ಭಾರೀ ಬೆಂಬಲವಿದ್ದರೂ ಜನರನ್ನು ದಾರಿ ತಪ್ಪಿಸಲು ಅವರಿಗಾಗಿಲ್ಲ.

ಉದಾರೀಕರಣವಾದಿಗಳೂ ಈಗ ಐಎಂಎಫ್ ಹೇರಿದ ದಾರಿ ಅಭಿವೃದ್ಧಿಶೀಲ ದೇಶಗಳಿಗೆ ತಕ್ಕ ದಾರಿಯಲ್ಲ ಎಂದು ಪೋಲಂಡಿನ ಜನರ ತೀರ್ಪು ದೃಢಪಡಿಸಿದೆ ಎಂದು ಹೇಳುತ್ತಿದ್ದಾರೆ. ಯಾಕೆಂದರೆ ಪೂರ್ವ ಯುರೋಪಿನ ದೇಶಗಳಲ್ಲಿ ಇತರರಿಗೆ ಹೋಲಿಸಿದರೆ ಆರ್ಥಿಕವಾಗಿ ಸ್ವಲ್ಪ ಹೆಚ್ಚು ಉತ್ತಮಸ್ಥಿತಿಯಲ್ಲಿರುವ ದೇಶ ಪೋಲಂಡ್. ಸೋವಿಯತ್ ಒಕ್ಕೂಟ ಕುಸಿದಾಗ ಪ್ರೊ. ಫುಕಯಾಮಾ ಎಂಬುವರು "ಇತಿಹಾಸದ ಅಂತ್ಯ"ವಾಯಿತು ಎಂದಿರುವುದು ಸುಳ್ಳಾಗಿದೆ ಎಂಬುದಕ್ಕೆ ವಲೇಸಾ ಪರಾಭವ ಮತ್ತೊಂದು ಸಾಕ್ಷಿ ಎಂದು ಒಂದು ಕಮ್ಯುನಿಸ್ಟ್-ವಿರೋಧಿ ಬೂರ್ಜ್ವಾ ಪತ್ರಿಕೆಯ ಸಂಪಾದಕೀಯವೂ ಈಗ ಒಪ್ಪಿಕೊಂಡಿದೆ.

ಕ್ಯೂಬಾದ ದಿಗ್ಬಂಧನ ವಿರುದ್ಧ ನಾಲ್ಕನೇ ಬಾರಿಗೆ ವಿಶ್ವ ಸಂಸ್ಥೆ ಮತ

ಕ್ಯೂಬಾದ ವಿರುದ್ಧ ಅಮೇರಿಕಾ ಹೇರಿರುವ ಮೂರು ದಶಕಗಳ ದಿಗ್ಬಂಧನವನ್ನು ತೆರವು ಮಾಡಬೇಕೆಂದು ವಿಶ್ವ ಸಂಸ್ಥೆಯ ಜನರಲ್ ಅಸೆಂಬ್ಲಿ ಸತತ ನಾಲ್ಕನೇ ಬಾರಿಗೆ ಭಾರೀ ಬಹುಮತದಿಂದ ಕರೆ ನೀಡಿದೆ.

ಕ್ಯೂಬಾ ಮಂಡಿಸಿದ ಈ ನಿರ್ಣಯಕ್ಕೆ ಪರವಾಗಿ 117 ದೇಶಗಳು ಮತ ನೀಡಿದರೆ, ವಿರೋಧ ಮತ ನೀಡಿದ ದೇಶಗಳು ಕೇವಲ 3 - ಅಮೇರಿಕಾ, ಇಸ್ರೇಲ್ ಮತ್ತು ಉಝುಬೇಕಿಸ್ತಾನ. 38 ದೇಶಗಳು ಗೈರು ಹಾಜರಾದವು. ಕಳೆದ ವರ್ಷ ದಿಗ್ಬಂಧನವನ್ನು ತೆಗೆಯಬೇಕೆಂದು 101 ದೇಶಗಳು ಹೇಳಿದ್ದವು, 2 ದೇಶಗಳು ವಿರೋಧಿಸಿದ್ದವು, 48 ದೇಶಗಳು ಗೈರುಹಾಜರಾಗಿದ್ದವು. 1993ರಲ್ಲಿ ಸಂಸ್ಥೆ ಅನುಕ್ರಮವಾಗಿ 88-4 ಮತ್ತು 57 ಗೈರುಹಾಜರಿ ಹಾಗೂ 1992ರಲ್ಲಿ 59-3 ಮತ್ತು 71 ಗೈರುಹಾಜರಿ ಅಂದರೆ ಕಳೆದ ನಾಲ್ಕು ವರ್ಷಗಳಲ್ಲಿ ಅಮೇರಿಕನ್ ದಿಗ್ಬಂಧನವನ್ನು ವಿರೋಧಿಸುವವರ ಸಂಖ್ಯೆ ಸತತವಾಗಿ ಹೆಚ್ಚುತ್ತಾ ಬಂದಿದೆ.

ಯುರೋಪಿಯನ್ ಯೂನಿಯನ್ ನ 15 ದೇಶಗಳಲ್ಲಿ ಬ್ರಿಟನ್, ಜರ್ಮನಿ ಮತ್ತು ನೆದರ್ಲೆಂಡ್ ಮಾತ್ರ ಗೈರು ಹಾಜರಾಗಿದ್ದವು. ಇತರ 12 ಯುರೋಪಿಯನ್ ದೇಶಗಳಲ್ಲದೆ ಚೀನಾ, ರಶ್ಯಾ, ಕೆನಡಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಅರ್ಜೆಂಟಿನಾ ಮತ್ತು ಮೆಕ್ಸಿಕೋ ದಿಗ್ಬಂಧನ ತೆಗೆಯಬೇಕೆಂದು ಹೇಳಿದವು. ಜಪಾನ್ ಮಾತ್ರ ಗೈರು ಹಾಜರಾಯಿತು.

1992ರಲ್ಲಿ ಅಮೇರಿಕನ್ ಆಡಳಿತ "ಟೋರಿಸೆಲ್ಲಿ ಕಾನೂನು" ತಂದು ಕ್ಯೂಬಾದೊಂದಿಗೆ ವ್ಯಾಪಾರ ಮಾಡುವ ಅಮೇರಿಕನ್ ಕಂಪನಿಗಳ ವಿದೇಶೀ ಉಪ ಸಂಸ್ಥೆಗಳ ಮೇಲೂ ಕಾನೂನು ಕ್ರಮ ಕೈಗೊಳ್ಳಬಹುದು, ಕ್ಯೂಬಾದ ಯಾವುದೇ ಬಂದರಿಗೆ ಹೋದ ಹಡಗುಗಳಿಗೆ ಆರು ತಿಂಗಳವರೆಗೆ ಯಾವುದೇ ಅಮೇರಿಕಾದ ಬಂದರಿಗೆ ಪ್ರವೇಶ ನಿರಾಕರಿಸುವ ಬೆದರಿಕೆ ಹಾಕಲಾಗಿತ್ತು.

ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಎ.ಎನ್.ಸಿ.ಗೆ ಭಾರೀ ವಿಜಯ

ನವಂಬರ್ 1ರಂದು ದಕ್ಷಿಣ ಆಫ್ರಿಕಾದಲ್ಲಿ ಸ್ಥಳೀಯ ಸಂಸ್ಥೆಗಳ ಮೊದಲ ಪ್ರಜಾಸತ್ತಾತ್ಮಕ ಚುನಾವಣೆಗಳು ನಡೆದವು. ಇದರಲ್ಲಿ ಎ.ಎನ್.ಸಿ. ಭಾರೀ ಜಯ ಗಳಿಸಿದೆ. 18 ತಿಂಗಳ ಹಿಂದೆ ಅಸ್ತಿತ್ವಕ್ಕೆ ಬಂದ ಎ.ಎನ್.ಸಿ. ನೇತೃತ್ವದ ರಾಷ್ಟ್ರೀಯ ಐಕ್ಯತೆಯ ಸರಕಾರದ ಕಾರ್ಯನಿರ್ವಹಣೆಯಿಂದ ಭ್ರಮನಿರಸನಗೊಂಡ ಜನ, ಮುಖ್ಯವಾಗಿ ಎ.ಎನ್.ಸಿ.ಯಿಂದ ಭ್ರಮನಿರಸನಗೊಂಡಿದ್ದು ಎ.ಎನ್.ಸಿ.ಯ ಜನಪ್ರಿಯತೆ ಕುಸಿದಿದೆ ಎಂದು ಹೇಳುತ್ತಿದ್ದವರ(ಬಹುಪಾಲು ಬಿಳಿಯರ ಬೂರ್ಜ್ವಾ ಪತ್ರಿಕೆಗಳು) ಭವಿಷ್ಯವಾಣಿಯನ್ನು ಈ ಚುನಾವಣಾ ಫಲಿತಾಂಶ ಸುಳ್ಳಾಗಿಸಿದೆ.

ಎ.ಎನ್.ಸಿ. ಹಿಂದಿನ ರಾಷ್ಟ್ರೀಯ ಚುನಾವಣೆಗಳಲ್ಲಿ 63% ಮತ ಪಡೆದಿತ್ತು. ಈ ಬಾರಿ ಅದು 70 % ಮತ ಪಡೆದಿದೆ. ಬಿಳಿಯರ 'ನ್ಯಾಶನಲ್ ಪಾರ್ಟಿ'ಯ ಪಾಲು 20.39%ರಿಂದ 18.2%ಕ್ಕಿಳಿದಿದೆ.

ರಾಷ್ಟ್ರೀಯ ಮಟ್ಟದ ಕೆಳಗೆ ಪ್ರಾಂತೀಯ ಮಟ್ಟದ ಚುನಾಯಿತ ಸಂಸ್ಥೆಗಳದ್ದು ಇವುಗಳ ಕೆಳಗಿನ ಹಂತದಲ್ಲಿನ ಚುನಾಯಿತ ಸಂಸ್ಥೆಗಳಿಗೆ ಈ ಚುನಾವಣೆ ನಡೆದಿವೆ. ಸಾಮಾನ್ಯವಾಗಿ ಈ ಹಂತದಲ್ಲಿ ಸ್ಥಳೀಯ ಸಮಸ್ಯೆಗಳೇ ಮುಖ್ಯವಾಗುತ್ತವೆ ಎಂದು ಹೇಳಲಾದರೂ ದಕ್ಷಿಣ ಆಫ್ರಿಕಾದ ವಿಷಯದಲ್ಲಿ ಹೀಗೆ ಹೇಳಲು ಸಾಧ್ಯವಿಲ್ಲ. ವರ್ಣದ್ವೇಷೀ ಆಳ್ವಿಕೆಯಲ್ಲಿ ವಿಪರೀತ ಶೋಷಣೆಗೊಳಗಾದ ಜನ ತಮ್ಮ ದೈನಂದಿನ ಸಮಸ್ಯೆಗಳ ಪರಿಹಾರಕ್ಕೆ ಈ ಚುನಾಯಿತ ಸಂಸ್ಥೆಗಳ ಪರಿಹಾರಕ್ಕೆ ಈ ಚುನಾಯಿತ ಸಂಸ್ಥೆಗಳ ಮಹತ್ವವನ್ನು ಅರಿತಿರುವ ಪರಿಣಾಮವಾಗಿ ಎ.ಎನ್.ಸಿ.ಯ ಮೇಲೆ ಅವರು ಹೆಚ್ಚಿನ ವಿಶ್ವಾಸ ವ್ಯಕ್ತಪಡಿಸಿದ್ದಾರೆ. 522 ಸ್ಥಳೀಯ ಮಂಡಳಿಗಳು, 175 ಗ್ರಾಮೀಣ ಜಿಲ್ಲಾ ಮಂಡಳಿಗಳು ಹಾಗೂ ಆರು ಮೆಟ್ರೋಪಾಲಿಟನ್(ಮಹಾನಗರ) ಮಂಡಳಿಗಳಿಗೆ ನವಂಬರ್ 1ರಂದು ಚುನಾವಣೆಗಳು ನಡೆಯಬೇಕಾಗಿದ್ದು ಕ್ವಾಝುಲು-ನಾಟಾಲ್ ನಲ್ಲಿ ಹಾಗೂ ಬೃಹತ್ ಕೇಪ್ ಟೌನ್ ರಾಜಕೀಯ ವಿವಾದಗಳಿಂದಾಗಿ 42 ಸ್ಥಾನಗಳಲ್ಲಿ ಚುನಾವಣೆ ನಡೆದಿರಲಿಲ್ಲ. ಉಳಿದ 661 ಸ್ಥಾನಗಳಲ್ಲಿ ಚುನಾವಣೆ ನಡೆದಿತ್ತು.

ಪಶ್ಚಿಮ ಕೇಪ್ ಪ್ರಾಂತ್ಯದಲ್ಲಿ ಬಿಳಿಯರ ನ್ಯಾಶನಲ್ ಪಾರ್ಟಿ ಅಧಿಕಾರದಲ್ಲಿದ್ದರೂ ಎ.ಎನ್.ಸಿ. ಮಹತ್ವದ ಗೆಲುವು ಸಾಧಿಸಿದೆ. ಎ.ಎನ್.ಸಿ.ಯ ನೆಲೆಗಳನ್ನು ದುರ್ಬಲಗೊಳಿಸಬಹುದು ಎಂದು ಬಿಳಿಯರು ನಿರೀಕ್ಷಿಸಿದ್ದ ಪಿ.ಎ.ಸಿ. ಪಕ್ಷ ತನ್ನ ಭದ್ರನೆಲೆಯೆನಿಸಿಕೊಂಡ ಪೂರ್ವ ಕೇಪ್ ಪ್ರಾಂತ್ಯದಲ್ಲಿಯೂ ಸೋಲುಂಡಿದೆ.

ಒಟ್ಟಾರೆಯಾಗಿ ಈ ಚುನಾವಣಾ ತೀರ್ಪು ಎ.ಎನ್.ಸಿ. ಬೆಂಬಲವನ್ನು ಮತ್ತೊಮ್ಮೆ ದೃಢಪಡಿಸಿದೆ, ತಾನು ಸರಕಾರ ನಡೆಸುವ ಪಕ್ಷವಾದರೂ ವಿಮೋಚನಾ ಸಮರದ ಕಾಲದ ಸಮರಶೀಲತೆಯಿಂದ ದೂರವಾಗಿಲ್ಲ ಎಂಬ ಎ.ಎನ್.ಸಿ. ಮುಖಂಡರ ವಾದವನ್ನು ಅನುಮೋದಿಸಿ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಬಹುಪಾಲು ಬಿಳಿಯರ ಕೈಯಲ್ಲಿರುವ ಪತ್ರಿಕೆಗಳು ಎ.ಎನ್.ಸಿ. ಈಗ ಆಳುವ ಪಕ್ಷವಾದ್ದರಿಂದ ಹಿಂದಿನ ಸಮರಶೀಲತೆ ಈಗ ಉಪಯೋಗವಿಲ್ಲ, ಆದ್ದರಿಂದ ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷ, ಕಾರ್ಮಿಕ ಸಂಘಗಳು ಇತ್ಯಾದಿಗಳೊಂದಿಗೆ ತನ್ನ ಸಂಬಂಧ ಕಡಿದುಕೊಳ್ಳಬೇಕು ಎಂದು ಸಲಹೆ ಮಾಡುತ್ತಿದ್ದವು. ಇಂತಹ ಸಲಹೆಗಳ ಟೊಳ್ಳುತನ ಈಗ ಸ್ಪಷ್ಟವಾಗಿದೆ ಎಂದೂ ವಿಶ್ಲೇಷಕರು ಅಭಿಪ್ರಾಯಪಡುತ್ತಾರೆ.

ಜನಮನ ಸೆಳೆದ ಕ್ಯಾಸ್ಟ್ರೋರ ಅಮೇರಿಕಾ ಭೇಟಿ

ಕಳೆದ ತಿಂಗಳು ನ್ಯೂಯಾರ್ಕಿನಲ್ಲಿ ವಿಶ್ವ ಸಂಸ್ಥೆಯ 50ನೇ ವಾರ್ಷಿಕೋತ್ಸವದ ಆಚರಣೆಯಲ್ಲಿ ಎಲ್ಲರ ಗಮನ ಸೆಳೆದ ಒಬ್ಬ ಮುಖಂಡರೆಂದರೆ ಕ್ಯೂಬಾದ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋ. ಅತಿಥೇಯ ದೇಶ ಅಮೇರಿಕಾದ ಮುಖಂಡರು ದೂಷಿಸಿದರೂ, ಹೀನಾಮಾನವಾಗಿ ಬೈದರೂ, ಅವರನ್ನು ಉಪೇಕ್ಷಿಸಲು ಯತ್ನಿಸಿದರೂ ಅಮೇರಿಕನ್ ಜನಸಾಮಾನ್ಯರು - ಕರಿಯರು, ಬಿಳಿಯರು, ಹಿಸ್ಪಾನಿಕರು - ಸಾವಿರಾರು ಮಂದಿ ನ್ಯೂಯಾರ್ಕಿನ ಬೀದಿಗೆ ಬಂದು ತಮ್ಮ 'ಫಿಡೆಲ್'ರನ್ನು ಅಭಿನಂದಿಸಿದರು.

ಕ್ಯಾಸ್ಟ್ರೋರ ನ್ಯೂಯಾರ್ಕ್ ಭೇಟಿಯ ಮೊದಲು ಬಲಪಂಥೀಯ ರಿಪಬ್ಲಿಕನ್ ಪಕ್ಷದ ಮಂದಿ ಎಷ್ಟೇ ವಿಷ ಕಾರಿದರೂ, ಅವರಿಗೆ ವೀಸಾ ನೀಡಬೇಡಿ ಎಂದು ಅಮೇರಿಕನ್ ಆಡಳಿತವನ್ನು ಒತ್ತಾಯಿಸಿದರೂ ಕ್ಯಾಸ್ಟ್ರೋರವರು ಬರದಂತೆ ತಡೆಯಲಾಗಲಿಲ್ಲ. ಏಕೆಂದರೆ ಒಂದು ವಿಶ್ವಸಂಸ್ಥೆಯ ಸಭೆಗೆ ಆಗಮಿಸುವ ಒಂದು ಸದಸ್ಯ ರಾಷ್ಟ್ರದ ಮುಖಂಡರಿಗೆ ಈ ರೀತಿ ಪ್ರವೇಶ ನಿರಾಕರಿಸುವ ಹಕ್ಕು ಅಮೇರಿಕಕ್ಕೆ ಇಲ್ಲ. ಆದರೂ ಅಪಪ್ರಚಾರ ನಡೆಸಲಾಯಿತು. ಕ್ಯಾಸ್ಟ್ರೋ ವಿಶ್ವಸಂಸ್ಥೆಯ ಸಮಾರಂಭದಲ್ಲಿ ಭಾಗವಹಿಸದಂತೆ ತಡೆಯಲಾಗದ ಅಧ್ಯಕ್ಷ ಕ್ಲಿಂಟನ್ ಮತ್ತು ನ್ಯೂಯಾರ್ಕಿನ ಮೇಯರ್ [illegible] ಅಲ್ಪತನದ ಪ್ರದರ್ಶನ ನಡೆಸಿದರು - ಈ ಸಂದರ್ಭದಲ್ಲಿ ನ್ಯೂಯಾರ್ಕಿಗೆ ಭೇಟಿ ನೀಡಿದ ದೇಶಗಳ ಮುಖಂಡರಿಗೆ ನೀಡಿದ ಯಾವುದೇ ಅಧಿಕೃತ ಸ್ವಾಗತ ಸಮಾರಂಭಕ್ಕೆ ಕ್ಯಾಸ್ಟ್ರೋರನ್ನು ಆಹ್ವಾನಿಸಲು ನಿರಾಕರಿಸಿದರು. ಆದರೆ ಅವರ ಈ ನಿರಾಕರಣೆ ಫಿಡೆಲ್ ಕ್ಯಾಸ್ಟ್ರೋರವರ [illegible] ಕಮ್ಮಿ ಮಾಡಲಾಗಲಿಲ್ಲ - ಅದನ್ನು ಇನ್ನಷ್ಟು ಹೆಚ್ಚಿಸಿತು. ರಾಷ್ಟ್ರಗಳ ಸಮೂಹದಲ್ಲಿ ಹಾಗೂ ಜನಸಾಮಾನ್ಯರಲ್ಲಿ ಅವರ ಅಪಾರ ಜನಪ್ರಿಯತೆಯನ್ನು ಇನ್ನಷ್ಟು ನಿಖರವಾಗಿ ಎತ್ತಿ ತೋರಿತು.

1960ರಲ್ಲಿ ಕ್ಯಾಸ್ಟ್ರೋ ನ್ಯೂಯಾರ್ಕಿಗೆ ಬಂದು ವಿಶ್ವ ಸಂಸ್ಥೆಯ ಸಾರ್ವತ್ರಿಕ ಸಭೆ(ಜನರಲ್ ಅಸೆಂಬ್ಲಿ)ಯನ್ನುದ್ದೇಶಿಸಿ ನಾಲ್ಕೂವರೆ ಗಂಟೆಗಳ ಕಾಲ ಮಾತನಾಡಿದರು. ಈ ಬಾರಿ 50ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಮಾತನಾಡಿದ್ದು ಕೇವಲ ಏಳು ನಿಮಿಷಗಳ ಕಾಲ(ಈ ಸಮಾರಂಭದಲ್ಲಿ ಎಲ್ಲಾ ಭಾಷಣಕಾರರಿಗೂ ನಿಗದಿಪಡಿಸಿದ ಕಾಲಾವಧಿ ಇದು). ಆದರೆ ಗಳಿಸಿದ್ದು ಅತ್ಯಂತ ದೀರ್ಘ ಕರತಾಡನ. ಶ್ರೀಮಂತ ದೇಶಗಳ ಆಳ್ವಿಕೆಯ ಮೇಲೆ ತೀಕ್ಷ್ಣ ಪ್ರಹಾರ ಹಾಗೂ ವಿಶ್ವ ಸಂಸ್ಥೆಯಲ್ಲಿ ನೈಜ ಪ್ರಜಾಪ್ರಭುತ್ವ ಬರಬೇಕೆಂಬ ಅವರ ಕರೆ ಅಲ್ಲಿ ನೆರೆದಿದ್ದ 185 ದೇಶಗ



ಳಲ್ಲಿ ಬಹುಪಾಲು ದೇಶಗಳ ಹೃದಯದ ಮಾತಾಗಿತ್ತು. ಆದರೆ ಬಹಳ ಮಂದಿಗೆ ಅಮೇರಿಕಾದ ವಿರುದ್ಧ ಮಾತನಾಡುವ ಧೈರ್ಯವಿರಲಿಲ್ಲ(ಭಾಷಣದ ಅನುವಾದಕ್ಕೆ ಪಕ್ಕದ ಬಾಕ್ಸ್ ನೋಡಿ). 'ಇಂಟರ್‌ನ್ಯಾಷನಲ್ ಹೆರಾಲ್ಡ್ ಟ್ರಿಬ್ಯೂನ್' ಪತ್ರಿಕೆಕೂಡಾ "ಅಧ್ಯಕ್ಷ ಕ್ಲಿಂಟನ್ ನಿಯಮಗಳನ್ನು ಉಪೇಕ್ಷಿಸಿ 17 ನಿಮಿಷ ಮಾತನಾಡಿದರೂ ಅವರಿಗೆ ದೊರೆತ ಸ್ಪಂದನ ಶ್ರೀಯುತ ಕ್ಯಾಸ್ಟ್ರೋರವರಿಗೆ ನೀಡಿದ ಅರ್ಧ ನಿಮಿಷದ ಭಾರೀ ಚಪ್ಪಾಳೆಗೆ ಹೋಲಿಸಿದರೆ ತೀರಾ ಸಪ್ಪೆ" ಎಂದಿತು.

ಆಕರ್ಷಣೆಯ ಕೇಂದ್ರ

ಮುಂದಿನ ನಾಲ್ಕು ದಿನ ಕ್ಯಾಸ್ಟ್ರೋ ಹೋದಲ್ಲೆಲ್ಲಾ ಆಕರ್ಷಣೆಯ ಕೇಂದ್ರವಾದರು. ಅಕ್ಟೋಬರ್ 21ರಂದು 'ಕ್ಯೂಬಾ ರಾಷ್ಟ್ರೀಯ ಜಾಲ' ಎಂಬ ಸಂಸ್ಥೆಯ ಆಶ್ರಯದಲ್ಲಿ ಅಮೇರಿಕಾದಲ್ಲಿರುವ 80ಕ್ಕೂ ಹೆಚ್ಚು ಗುಂಪುಗಳು ಒಂದು ಬೃಹತ್ ಮತಪ್ರದರ್ಶನ ನಡೆಸಿದವು. ನ್ಯೂಯಾರ್ಕ್ ನಗರದ ಬ್ರಾಂಕ್ಸ್ ಪ್ರದೇಶಕ್ಕೆ ಅಲ್ಲಿನ ಪ್ಯೂರ್ಟೋರಿಕೋ ಪ್ರತಿನಿಧಿ ಜೋಸ್ ಸೆರಾನೋ ಆಹ್ವಾನದ ಮೇರೆಗೆ ಭೇಟಿ ನೀಡಿದಾಗ ಕ್ಯಾಸ್ಟ್ರೋ ಬೆಂಬಲಿಗರು ಅವರನ್ನು ಮುತ್ತಿಕೊಂಡು ತಮ್ಮ ಅಭಿಮಾನ ವ್ಯಕ್ತಪಡಿಸಿದರು. ಹಾರ್ಲೆಂ ಎಂಬಲ್ಲಿ ಅಬಿಸಿನಿಯನ್ ಬ್ಯಾಪ್ಟಿಸ್ಟ್ ಚರ್ಚಿನಲ್ಲಿ ಕಿಕ್ಕಿರಿದು ನೆರೆದಿದ್ದ ಜನಸ್ತೋಮವನ್ನುದ್ದೇಶಿಸಿ ಮಾತನಾಡಿದಾಗ ಜನ ಭಾವಾವೇಶದಿಂದ ಕುಣಿದಾಡಿದರು. ಈ ಪ್ರದೇಶ ನ್ಯೂಯಾರ್ಕ್ ನಗರದ ಅತ್ಯಂತ ಬಡ ಪ್ರದೇಶ. 1960ರಲ್ಲಿ ಕ್ಯಾಸ್ಟ್ರೋ ಈ ನಗರಕ್ಕೆ ಬಂದಾಗ ಇಲ್ಲೇ ವಾಸವಾಗಿದ್ದರು.

ಅಮೇರಿಕಾದ ರಾಜಕೀಯ ಮುಖಂಡರು ಬಹಿಷ್ಕರಿಸಿದರೂ ಅಮೇರಿಕಾದ ವ್ಯಾಪಾರ ವಲಯಗಳು ಹಾಗೆ ಮಾಡಲಿಲ್ಲ. ಕ್ಯೂಬಾದಲ್ಲಿ ತಮ್ಮ ಹಣ ತೊಡಗಿಸಲು ಕಾತುರರಾಗಿದ್ದ ಹಲವರು ಕ್ಯಾಸ್ಟ್ರೋರವರನ್ನು ಭೇಟಿಯಾದರು.

ಈ ಭೇಟಿಯ ಕಾಲದಲ್ಲಿ ಕ್ಯಾಸ್ಟ್ರೋರವರ ಅತ್ಯುತ್ತಮ ಭಾಷಣವೆಂದರೆ ಮೇಲೆ ಹೇಳಿದ

ಪುಟ 8 ನೋಡಿ

ಅತ್ಯಂತ ದೀರ್ಘ ಕರತಾಡನ ಗಿಟ್ಟಿಸಿದ ಭಾಷಣ

ವಿಶ್ವಸಂಸ್ಥೆಯ 50ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ನಡೆದ ಜನರಲ್ ಅಸೆಂಬ್ಲಿಯ ವಿಶೇಷ ಅಧಿವೇಶನದಲ್ಲಿ ಅಕ್ಟೋಬರ್ 22, 1995ರಂದು ಫಿಡೆಲ್ ಕ್ಯಾಸ್ಟ್ರೋ ಮಾಡಿದ ಭಾಷಣ

"ಅರ್ಧ ಶತಮಾನದ ಹಿಂದೆ, ಒಂದು ದೈತ್ಯ ಯುದ್ಧ ಕೊನೆಗೊಂಡಾಗ ಈ ಸಂಯುಕ್ತ ರಾಷ್ಟ್ರ ಸಂಘಟನೆ ಹುಟ್ಟಿತು. ಆ ದೈತ್ಯ ಯುದ್ಧ ತುತ್ತ ತುದಿಯಲ್ಲಿದ್ದಾಗ ಸುಮಾರು ಒಂದು ಕೋಟಿ ಜೀವಗಳನ್ನು ನುಂಗಿತು. ಈಗ ಪ್ರತಿ ವರ್ಷ 2 ಕೋಟಿ ಗಂಡಸರು, ಹೆಂಗಸರು, ಮಕ್ಕಳು ಹಸಿವು ಮತ್ತು ಗುಣಪಡಿಸಬಹುದಾದ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಕೆಲವು ಸಂಪನ್ನ ದೇಶಗಳಲ್ಲಿ ಸರಾಸರಿ ಆಯುಷ್ಯ 80 ವರ್ಷವಾದರೆ ಕೆಲವು ದೇಶಗಳಲ್ಲಿ 40 ವರ್ಷ ಕೂಡಾ ಇಲ್ಲ. ಅಂದರೆ ಕೋಟಿ ಕೋಟಿ ಜನಗಳ ಜೀವನ ಅರ್ಧದಲ್ಲೇ ನಿಂತುಹೋಗುತ್ತಿದೆ. ಈ ಕಗ್ಗೊಲೆ ಕೊನೆಗೊಳ್ಳಲು ಇನ್ನೂ ಎಷ್ಟು ಕಾಲ ನಾವು ಕಾಯಬೇಕು?

[illegible] ಸಮಯ ಮುಗಿಯಿತು. ಆದರೆ [illegible] ಕಾಯಿದೆ ಇದೆ. ಪಡೆಗಳು ಮತ್ತು ಮಿಲಿಟರಿ ಯಜಮಾನಿಕೆ ತನ್ನನ್ನು ಶಾಶ್ವತಗೊಳಿಸುತ್ತಿದೆ. ಸಾಮೂಹಿಕ ನಾಶದ ಶಸ್ತ್ರಗಳನ್ನು ಸಂಪೂರ್ಣ ಇಲ್ಲವಾಗಿಸಲು, ಸಾರ್ವತ್ರಿಕ ನಿಶ್ಶಸ್ತ್ರೀಕರಣವಾಗಲು, ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಬಲಪ್ರಯೋಗ, ಉದ್ಧಟತನ ಹಾಗೂ ಒತ್ತಡ ನಿರ್ಮೂಲನಗೊಳ್ಳಲು ಇನ್ನು ಎಷ್ಟು ಕಾಲ ನಾವು ಕಾಯೋಣ?

ಬಲಿಷ್ಠರಿಗಿರುವ ಹಳಸಲಾಗಿರುವ ವಿಟೋ ಅಧಿಕಾರ ಮತ್ತು ಅವರಿಂದ ಭದ್ರತಾ ಮಂಡಳಿಯ ದುರುಪಯೋಗ ವಿಶ್ವಸಂಸ್ಥೆಯೊಳಗೇ ಒಂದು ಹೊಸ ವಸಾಹತುಶಾಹಿಯನ್ನು ಮೇಲೆತ್ತುತ್ತಿದೆ.

ಭದ್ರತಾ ಮಂಡಳಿಯಲ್ಲಿ ಲ್ಯಾಟಿನ್ ಅಮೇರಿಕಾ ಮತ್ತು ಆಫ್ರಿಕಾ ಖಂಡಗಳಿಗೆ ಒಂದಾದರೂ ಶಾಶ್ವತ ಸದಸ್ಯತ್ವ ಇಲ್ಲ. ವಿಸ್ತಾರದಲ್ಲಿ ಭಾರತದ ಜನಸಂಖ್ಯೆ ಸುಮಾರು ಒಂದು ಶತಕೋಟಿ. ಆದರೂ ಅದಕ್ಕೆ ಆ ಜವಾಬ್ದಾರಿ ಲಭ್ಯವಿಲ್ಲ.

ವಿಶ್ವಸಂಸ್ಥೆಯ ಪ್ರಜಾಪ್ರಭುತ್ವೀಕರಣ ಹಾಗೂ ದೇಶಗಳ ಸ್ವತಂತ್ರ ಮತ್ತು ಸಾರ್ವಭೌಮತೆ ಎಂಬುದು ವಾಸ್ತವಗೊಳ್ಳಬೇಕಾದರೆ ನಾವು ಇನ್ನೂ ಎಷ್ಟು ಕಾಲ ಕಾಯಬೇಕು? ದೇಶಗಳ ಆಂತರಿಕ ವ್ಯವಹಾರಗಳಲ್ಲಿ ಮಧ್ಯಪ್ರವೇಶಿಸುವುದು ಹಾಗೂ ಏಕಪಕ್ಷೀಯ ಆರ್ಥಿಕ [illegible] ಕೊನೆಗೊಳ್ಳಲು ಇನ್ನೂ ಎಷ್ಟು ಕಾಲ ಬೇಕು?

ನಾವು ಗಂಡಸರು, ಹೆಂಗಸರು, ಮಕ್ಕಳು, ಯುವಜನರು ಹಿರಿಯರನ್ನು [illegible] ಹೊಸ ವಿಧದ ದಿಗ್ಬಂಧನಗಳಲ್ಲದ ಜಗತ್ತು ಬೇಕೆಂದು ಒತ್ತಾಯಿಸುತ್ತೇವೆ.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು
ಫೋನ್ ನಂ. 2236462

ಡಿಸೆಂಬರ್ 15: ದೇಶಾದ್ಯಂತ ಮತ ಪ್ರದರ್ಶನ ರಾಷ್ಟ್ರೀಯ ವೇದಿಕೆಯ ಕರೆ

ನವಂಬರ್ 8ರಂದು ನವದೆಹಲಿಯಲ್ಲಿ ಸಭೆ ಸೇರಿದ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ದೇಶದಲ್ಲಿಯ ಪರಿಸ್ಥಿತಿಯನ್ನು ವಿಮರ್ಶಿಸಿ ನರಸಿಂಹರಾವ್ ಸರಕಾರ ಪ್ರತಿಗಾಮಿ ಆರ್ಥಿಕ ನೀತಿಗಳನ್ನು ಹಠಮಾರಿತನದಿಂದ ಮುಂದುವರೆಸುತ್ತಿರುವುದರಿಂದಾಗಿ ಜನಗಳ ಸಂಕಟಗಳು ಹೆಚ್ಚಿವೆ, ನಿರುದ್ಯೋಗ ಬೆಳೆಯುತ್ತಲೇ ಇದೆ, ಕಾರ್ಖಾನೆಗಳು ಮುಚ್ಚುತ್ತಿವೆ ಹಾಗೂ ಎಲ್ಲಾ ಸಾಮಗ್ರಿಗಳ ಬೆಲೆಗಳು ಏರುತ್ತಲೇ ಇವೆ ಎಂದು ಗಮನಿಸಿತು. ಅಲ್ಲದೆ ಸ್ಟೀಲ್ ಅಥಾರಿಟಿ, ಎನ್‌ಟಿಪಿಸಿ, ಬಿಹೆಚ್‌ಇಎಲ್, ಐಒಸಿ, ಒಎನ್‌ಜಿಸಿ, ಎನ್‌ಎಫ್‌ಸಿಯಂತಹ ದೊಡ್ಡ ಲಾಭ ಮಾಡುತ್ತಿರುವ ಸಾರ್ವಜನಿಕ ವಲಯಗಳ ಶೇರುಗಳ 1/3ರಷ್ಟು ಖಾಸಗಿ ಗುತ್ತೇದಾರಿಗಳ ಕೈಗೆ ಹೋಗಿವೆ. ಈ ಲಂಗುಲಗಾಮಿಲ್ಲದ ಖಾಸಗೀಕರಣ ದೇಶದ ಸ್ವಾವಲಂಬೀ ಆರ್ಥಿಕವನ್ನು ಬರಡುಗೊಳಿಸುತ್ತಿದೆ, ಸಾಮ್ರಾಜ್ಯಶಾಹಿ ದೇಶಗಳು ನವವಸಾಹತುಶಾಹೀ ಶೋಷಣೆಯ ಬಲೆಗೆ ಒಡ್ಡುತ್ತಿದೆ ಎಂದು ವೇದಿಕೆ ಅಭಿಪ್ರಾಯಪಟ್ಟಿದೆ.

ಈ ಹಿನ್ನೆಲೆಯಲ್ಲಿ ಹೋರಾಟವನ್ನು ತೀವ್ರಗೊಳಿಸಲು ನಡೆಯುತ್ತಿರುವ ಸಿದ್ಧತೆಗಳನ್ನು ರಾಷ್ಟ್ರೀಯ ವೇದಿಕೆ ಪರಿಶೀಲಿಸಿ ಡಿಸೆಂಬರ್ 15ರಂದು ದೇಶಾದ್ಯಂತ ಬೃಹತ್ ಮತ ಪ್ರದರ್ಶನಗಳನ್ನು ನಡೆಸಬೇಕು ಎಂಬ ತನ್ನ ಕರೆಯನ್ನು ಪುನರುಚ್ಚರಿಸಿದೆ. ಅಂದು ರಾಷ್ಟ್ರೀಯ ವೇದಿಕೆಯ ಎಲ್ಲಾ ಸದಸ್ಯ ಸಂಘಟನೆಗಳು ಎಲ್ಲಾ ರಾಜ್ಯಗಳ ರಾಜಧಾನಿಗಳಲ್ಲಿ ಜಿಲ್ಲಾ ಮುಖ್ಯ ಸ್ಥಳಗಳಲ್ಲಿ ಬೃಹತ್ ರ್‍ಯಾಲಿ, ಮತ ಪ್ರದರ್ಶನಗಳನ್ನು ನಡೆಸಬೇಕು ಎಂದು ಅದು ಹೇಳಿದೆ.

ದಿಲ್ಲಿ ಹಾಗೂ ಸುತ್ತಮುತ್ತಲಿಂದ ಬರುವ ರೈತರು, ಕಾರ್ಮಿಕರು, ಕೃಷಿ ಕೂಲಿಕಾರರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ದಿಲ್ಲಿಯ ಜಂತರ್ ಮಂತರ್ ಬಳಿ ಒಂದು ಬೃಹತ್ ಧರಣಿ ನಡೆಸಲಿದ್ದಾರೆ.

ಈ ಕಾರ್ಯಕ್ರಮವನ್ನು ಬೆಂಬಲಿಸಬೇಕೆಂಬ ರಾಷ್ಟ್ರೀಯ ವೇದಿಕೆ ಎಲ್ಲಾ ಇತರ ಕಾರ್ಮಿಕ ಸಂಘಗಳು ಹಾಗೂ ಸಾಮೂಹಿಕ ಸಂಘಟನೆಗಳು, ಎಡ, ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಶಕ್ತಿಗಳಿಗೆ ಮನವಿ ಮಾಡಿಕೊಂಡಿದೆ.

ಕಾಂ.ಎಂ.ಕೆ. ಕೃಷ್ಣನ್ ನಿಧನ

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ.ಎಂ.ಕೆ. ಕೃಷ್ಣನ್ ನವಂಬರ್ 14ರ ಮುಂಜಾನೆ ಹೃದಯಾಘಾತದಿಂದ ನಿಧನರಾದರು. ತ್ರಿಶೂರ್‌ನಲ್ಲಿ ಅಖಿಲ ಭಾರತ ಕಿಸಾನ್ ಸಭಾದ ರಾಜ್ಯ ಸಮ್ಮೇಳನಕ್ಕೆ ಶುಭ ಕೋರಿ ಮಾತನಾಡುತ್ತಾ ಕುಸಿದು ಬಿದ್ದ ಕಾಂ. ಕೃಷ್ಣನ್‌ರನ್ನು ತಕ್ಷಣ ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ ಅವರನ್ನು ಉಳಿಸಲಾಗಲಿಲ್ಲ.

ಕಾಂ.ಕೃಷ್ಣನ್ 1967ರಿಂದ 1969ರವರೆಗೆ, ನಂತರ 1979ರಿಂದ 1981ರವರೆಗೆ ಕೇರಳ ವಿಧಾನಸಭೆಯ ಸದಸ್ಯರಾಗಿದ್ದರು. ಮೊದಲ ಅವಧಿಯಲ್ಲಿ ಅರಣ್ಯ ಮಂತ್ರಿಯಾಗಿದ್ದರೆ, ಎರಡನೇ ಅವಧಿಯಲ್ಲಿ ಅಬಕಾರಿ ಮಂತ್ರಿಗಳಾಗಿದ್ದರು. 1971ರಲ್ಲಿ ಕೇರಳದ ಪೊನ್ನಾಣಿಯಲ್ಲಿ ಲೋಕಸಭೆಗೆ ಆಯ್ಕೆಯಾದರು.

ಒಂದು ಬಡ ಪರಿಶಿಷ್ಟ ಜಾತಿ ಕುಟುಂಬದಿಂದ ಬಂದ ಕಾಂ. ಕೃಷ್ಣನ್ ಕೃಷಿ ಕಾರ್ಮಿಕರು, ಬಡ ರೈತರು ಹಾಗೂ ಇತರ ದುಡಿಯುವ ಜನರ ಜೀವನ ಪರಿಸ್ಥಿತಿ ಸುಧಾರಿಸಲು ಹಲವು ಹೋರಾಟಗಳನ್ನು ನಡೆಸಿ ಕೃಷಿ ಕೂಲಿಕಾರ ಸಂಘದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯ ಸ್ಥಾನಕ್ಕೇರಿದರು. 1984ರಿಂದ ಅವರು ಕೇರಳ ರಾಜ್ಯದ ಕರ್ಷಕ ತೊಳಿಲಾಳಿ ಯೂನಿಯನ್‌ನ ಅಧ್ಯಕ್ಷರೂ ಸಿಪಿಐ(ಎಂ)ನ ಕೇರಳ ರಾಜ್ಯ ಸಮಿತಿಯ ಸದಸ್ಯರೂ ಆಗಿದ್ದರು.

"ಕೃಷ್ಣನ್ ರೈತ ಆಂದೋಲನದಿಂದ ಮೂಡಿ ಬಂದು ರಾಜ್ಯದಲ್ಲಿ ಹಾಗೂ ಕೇಂದ್ರದಲ್ಲಿ ಕೃಷಿ ಕೂಲಿಕಾರರಿಗಾಗಿ ಅವಿರತ ದುಡಿದ ಮುಖಂಡರಲ್ಲಿ ಒಬ್ಬರು" ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಶ್ರದ್ಧಾಂಜಲಿ ಅರ್ಪಿಸಿದೆ. 1947ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದ ಅವರು ಒಬ್ಬ ಸಮರ್ಪಿತ ಕಮ್ಯುನಿಸ್ಟ್ ಆಗಿ ವಿವಿಧ ಹೊಣೆಗಳನ್ನು ನಿಭಾಯಿಸಿದರು.

"ಅನಾರೋಗ್ಯದಿಂದ ನರಳುತ್ತಿದ್ದರೂ ಕಳೆದ ಕೆಲವು ವರ್ಷಗಳಿಂದ ಕೃಷಿ ಕೂಲಿಕಾರರ ಅಖಿಲ ಭಾರತ ಸಂಘಟನೆಯನ್ನು ಬೆಳೆಸುವಲ್ಲಿ ತೊಡಗಿದ್ದರು. ಅವರ ನಿಧನ ಪಕ್ಷಕ್ಕೆ ಹಾಗೂ ಕೃಷಿ ಕೂಲಿಕಾರರ ಆಂದೋಲನಕ್ಕೆ ಒಂದು ದೊಡ್ಡ ನಷ್ಟ" ಎಂದಿರುವ ಪೊಲಿಟ್‌ಬ್ಯೂರೋ ಅವರ ಪತ್ನಿ ಹಾಗೂ ಕುಟುಂಬದ ಸದಸ್ಯರಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರು ಒಂದು ಸಂತಾಪ ಸಂದೇಶ ಕಳಿಸಿದ್ದಾರೆ.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಹಾಗೂ ಅಖಿಲ ಭಾರತ ಕಿಸಾನ್ ಸಭಾಗಳು ಕಾಂ.ಕೃಷ್ಣನ್ ನಿಧನಕ್ಕೆ ಅತೀ ದುಃಖವನ್ನು ವ್ಯಕ್ತಪಡಿಸಿವೆ.

ಬಿಜೆಪಿಯ ಮುಂಬೈನ ಮಹಾಧಿವೇಶನ

ಪುಟ 5ರಿಂದ

ಬಹಿರಂಗ ಸ್ಪರ್ಧಾತ್ಮಕ ಬಿಡ್ಡಿಂಗ್ ಮೂಲಕ ಈ ಯೋಜನೆಯ ಪುನರುಜ್ಜೀವನ ಸಾಧ್ಯವಿರಲಿಲ್ಲವೇ ಎಂಬುದನ್ನು ವಿವರಿಸುವುದು ಬಿಜೆಪಿ ವಕ್ತಾರರಿಗೆ ಸಾಧ್ಯವಾಗಲಿಲ್ಲ. ಇಲ್ಲಿ ಆರ್‌ಎಸ್‌ಎಸ್ ಮತ್ತು ಅದರ 'ಸ್ವದೇಶೀ' ಹಂದರ ನಿಸ್ಸಹಾಯಕವಾಗಿ ಮೂಲೆಗೊತ್ತಲ್ಪಟ್ಟಿತು.

ಸಮಯಸಾಧಕತನವನ್ನು ಮರೆಮಾಚುವ ಯತ್ನ

ಈ 'ಮಹಾಧಿವೇಶನ'ದ ರಾಜಕೀಯ ಠರಾವು ಉತ್ತರ ಪ್ರದೇಶದ ಸಮಯಸಾಧಕತನದ ಬಗ್ಗೆ ಹಾರಿಕೆಯ ಸಮಜಾಯಿಷಿ ನೀಡಿದೆ. ಕೇವಲ ಒಂದೇ ವಾಕ್ಯದಲ್ಲಿ ತಾನು "ಎಸ್‌ಪಿ-ಬಿಎಸ್‌ಪಿ ಕೂಟದ ಭ್ರಷ್ಟ ಮಾಫಿಯಾ ಆಳ್ವಿಕೆಯನ್ನು ಕೊನೆಗೊಳಿಸಿ ನಂತರ ಬಿ.ಎಸ್.ಪಿ. ಸರಕಾರದ ದುರಾಡಳಿತದಿಂದ ರಾಜ್ಯವನ್ನು ಉಳಿಸಿದೆ" ಎಂದು ಅದು ಹೇಳಿಕೊಂಡಿದೆ. ಆದರೆ ಬಿ.ಎಸ್.ಪಿ. ಸರಕಾರದಿಂದ ರಾಜ್ಯವನ್ನು ಉಳಿಸುವ ಮೊದಲು ಒಬ್ಬ ದಲಿತ ಮುಖ್ಯಮಂತ್ರಿಯನ್ನು ಅಧಿಕಾರ ಪೀಠಕ್ಕೇರಿಸುವ ಬಗ್ಗೆ ದಲಿತರ ಬಗ್ಗೆ ತನಗಿರುವ 'ಆಳವಾದ ಆತಂಕ'ದ ಬಗ್ಗೆ ಹೇಳಿದ್ದನ್ನು ಮಾತ್ರ ಅದು ಸಂಪೂರ್ಣ ಮರೆಮಾಚಿದೆ.

ಅಡ್ವಾಣಿಯವರ ಭಾಷಣವಾಗಲೀ, ರಾಜಕೀಯ ಠರಾವಾಗಲೀ 'ಹಿಂದುತ್ವ'ದ ಪ್ರಶ್ನೆಗಳನ್ನೆಲ್ಲಾ ಕಿದಕಿ ಕೆದಕಿ ಸಾಯಿಸಿಯೇ ಬಿಟ್ಟವು-ಬಾಂಗ್ಲಾ ದೇಶದಿಂದ ಕಾನೂನುಬಾಹಿರ ನುಸುಳಿಕೆ, ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟುವುದು, ಸಮಾನ ನಾಗರಿಕ ಸಂಹಿತೆ, ವೋಟ್ ಬ್ಯಾಂಕ್ ರಾಜಕೀಯ ಇತ್ಯಾದಿ ಇತ್ಯಾದಿ. ಟಾಡಾ ಎಂಬ ಕುಖ್ಯಾತ ಕಾನೂನಿನ ರದ್ಧತಿಯಿಂದ ದೇಶದ ಭದ್ರತೆಗೇ ಅಪಾಯ ಒದಗಿದೆ ಎಂಬಂತೆ ಖಂಡಿಸಲಾಯಿತು. ಇವೆಲ್ಲಾ ಬಿಜೆಪಿಗೆ ಬಹಳ ಮುಖ್ಯ ಪ್ರಶ್ನೆಗಳಲ್ಲ ಎಂಬ ತೀರ್ಮಾನಕ್ಕೆ ಬರುವುದು ತಪ್ಪಾದೀತು. ಈ ಪ್ರಶ್ನೆಗಳನ್ನೆತ್ತುವಾಗ ಹಿಂದಿನ ಕರ್ಕಶತೆ ಕಾಣುತ್ತಿಲ್ಲವಾದರೆ ಅದಕ್ಕೆ ಕಾರಣ ಅಲ್ಪಸಂಖ್ಯಾತರ ತೆಗಳಿಕೆ, ಕೋಮು ಭಾವನೆಗಳನ್ನು ಉದ್ರೇಕಿಸುವುದು ಇವನ್ನೆಲ್ಲಾ ವಿಹೆಚ್‌ಪಿಯಂತಹ ಆರ್‌ಎಸ್‌ಎಸ್‌ನ ಇತರ ಸಂಘಟನೆಗಳ ಮೂಲಕ ಸಕ್ರಿಯಗೊಳಿಸಲಾಗುವುದು. ಸದ್ಯಕ್ಕೆ ತನ್ನ ಆಂತರಿಕ ಅಲ್ಲೋಲ-ಕಲ್ಲೋಲದಿಂದ ನಲುಗಿರುವ ಹಾಗೂ ಆತ್ಮವಿಶ್ವಾಸ ಕಳಕೊಂಡಿರುವ ಬಿಜೆಪಿ ಮತಗಳಿಸಲು ನೆರವಾಗಬಹುದೆಂದು ಅದು ಆಶಿಸುವ ಪ್ರತಿಯೊಂದು ಪ್ರಶ್ನೆಯನ್ನು ಎತ್ತಿಕೊಳ್ಳುತ್ತದೆ. ರಕ್ಷಣೆ, ಆರ್ಥಿಕ ನೀತಿ, ಭ್ರಷ್ಟಾಚಾರ ಏನು ಸಿಗುತ್ತೋ ಎಲ್ಲವನ್ನೂ ಚುನಾವಣಾ ಬುಟ್ಟಿಯಲ್ಲಿ ಹಾಕಿಟ್ಟಿದೆ. ಆದರೆ ಇಲ್ಲೂ ಕೂಡಾ ಬಿಜೆಪಿಗೆ ತಾನೊಂದು "ಭಿನ್ನರೀತಿಯ ಪಕ್ಷ" ಎಂದು ತೋರಿಸಿಕೊಳ್ಳಲಾಗುತ್ತಿಲ್ಲ.

ಆರ್ಥಿಕ ನೀತಿ - ಅದೇ ವಂಚಕ ನಿಲುವು

ಆರ್ಥಿಕ ಧೋರಣೆಯನ್ನು ಕುರಿತಂತೆ ಬಿಜೆಪಿ ಬಳಕೆ ವಸ್ತುಗಳ ವಲಯದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶವನ್ನು ತಡೆಯುವ ಬಗ್ಗೆ ಮಾತನಾಡುತ್ತಿದೆ. ಇದೊಂದು ಮೋಸದ ನಿಲುವು. ಬಳಕೆ ಸರಕುಗಳ ವಲಯದಲ್ಲಷ್ಟೇ ಏಕೆ? ಬಹುರಾಷ್ಟ್ರೀಯ ಕಂಪನಿಗಳು ಹಣಕಾಸು ವಲಯವನ್ನು, ಟೆಲಿಕಾಂ ವಲಯವನ್ನು, ವಿದ್ಯುತ್ ಮುಂತಾದ ಪ್ರಮುಖ ಕ್ಷೇತ್ರಗಳನ್ನು ವಹಿಸಿಕೊಳ್ಳುವುದಕ್ಕೆ ಬಿಜೆಪಿಯ ವಿರೋಧವಿದ್ದಂತಿಲ್ಲ. ಸ್ವದೇಶೀ ತಂತ್ರಜ್ಞಾನ ಮತ್ತು ಸಾಮರ್ಥ್ಯವಿದ್ದಲ್ಲಿ ಕೂಡಾ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶವನ್ನು ತಡೆಯುವ ಬಗ್ಗೆಯೂ ಬಿಜೆಪಿ ಮಾತಾಡುತ್ತಿಲ್ಲ. ಎನ್ರೋನ್, ಸಂಬಂಧಪಟ್ಟಂತೆ ಉರುಳಿ ಬಿದ್ದ ಮೇಲೆ ಅದು ಆರ್ಥಿಕದ ಪ್ರಧಾನ ವಲಯಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಬಿಟ್ಟುಕೊಟ್ಟು ಟೂತ್ ಪೇಸ್ಟ್, ಫ್ರೈಡ್ ಚಿಕನ್ ಮುಂತಾದ ಕ್ಷೇತ್ರಗಳಲ್ಲಿ ಮಾತ್ರ ಅವುಗಳ ಪ್ರವೇಶವನ್ನು ವಿರೋಧಿಸುವುದರಿಂದ ತೃಪ್ತವಾಗಿದೆ. ಉಚ್ಚ ತಂತ್ರಜ್ಞಾನದ ವಲಯದಲ್ಲಿ ಮಾತ್ರ ವಿದೇಶೀ ಬಂಡವಾಳ ಸ್ವೀಕರಿಸುತ್ತೇವೆ ಎಂಬ ಬಿಜೆಪಿ ಹೇಳಿಕೆ ಕೂಡಾ ಸುಳ್ಳಾಗಿದೆ. ಏಕೆಂದರೆ ಗುಜರಾತ್ ಮತ್ತು ಮಹಾರಾಷ್ಟ್ರ ಸರಕಾರಗಳು ಸಿನೆಮಾ ಸಭಾಂಗಣಗಳನ್ನು ಕಟ್ಟಲು ಹಾಗೂ ನಡೆಸಲು ಅಮೇರಿಕಾದ ಒಂದು ಬಹುರಾಷ್ಟ್ರೀಯ ಕಂಪನಿಗೆ ಅನುಮತಿ ನೀಡಿವೆ.

ಅವರ ಭ್ರಷ್ಟಾಚಾರ-ವಿರೋಧಿ ನಿಲುವು ಹಾಗೂ ತಮ್ಮದೊಂದು ನೀತಿಬದ್ಧ ಪಕ್ಷ ಎಂಬ ಹೆಗ್ಗಳಿಕೆಯಂತೂ ಗುಜರಾತ್, ಉತ್ತರಪ್ರದೇಶದ ಘಟನೆಗಳಿಂದಾಗಿ ಕಾಂಗ್ರೆಸ್‌ನ ತತ್ವ ಭ್ರಷ್ಟತೆಯಿಂದ ಲಾಭ ಗಿಟ್ಟಿಸುವ ಅದರ ಆಸೆ ನುಚ್ಚುನೂರಾಗಿದೆ. ಮುಂಬೈಯ 'ಮಹಾಧಿವೇಶನ'ದಲ್ಲಿ ಕಂಡು ಬಂದ ದಿಕ್ಕೇಡಿತನ ಲಕ್ಷ್ಯವಿಹೀನತೆ ಹಾಗೂ ಅಸಮಂಜಸತೆಯಿಂದಾಗಿ ಅದು ಮತ್ತೆ ತನ್ನ ಆರ್.ಎಸ್.ಎಸ್. ಚೌಕಟ್ಟಿನ ಮೊರೆ ಹೋಗಬೇಕಾಗಬಹುದು. ಅಧಿವೇಶನದ ಅಂತ್ಯದಲ್ಲಿ ಅಟಲ್ ಬಿಹಾರಿ ವಾಜಪೇಯಿಯವರನ್ನು ಪ್ರಧಾನ ಮಂತ್ರಿ ಸ್ಥಾನಕ್ಕೆ ಬಿಜೆಪಿ ಅಭ್ಯರ್ಥಿ ಎಂದು ಮುಂದಿಟ್ಟಿರುವುದು ತನ್ನ ಹಿಂದುತ್ವ ವೇದಿಕೆ ದೇಶಾದ್ಯಂತ ಒಂದು ವಿಶ್ವಾಸಾರ್ಹ ಚುನಾವಣಾ ಪ್ರಯೋಜನ ಕೊಡಲಿಕ್ಕಿಲ್ಲ ಎಂಬ ಮಿತಿಯ ಬಗ್ಗೆ ಅದಕ್ಕೆ ಅರಿವಾಗಿದೆ ಎಂಬುದನ್ನು ತೋರಿಸಿದೆ. ಬಿಜೆಪಿ ಮುಖಂಡರ ಕೊನೆಯಾಸೆಯೆಂದರೆ ಹೇಗಾದರೂ ಮಾಡಿ ವಾಜಪೇಯಿಯವರು ಜನಗಳ ಮುಂದೆ ತಮ್ಮ ಒಂದು ಹೆಚ್ಚು ಸ್ವೀಕಾರಾರ್ಹವಾದ ಮುಖವನ್ನು ಇಡಬಹುದು ಎಂದು. ಹೀಗೆ ಮಾಡಿರುವುದೇ ತಾವು ಸೋತೆವು ಎಂದು ಹಿಂದುತ್ವದ ಪ್ರತಿಪಾದಕರು ಒಪ್ಪಿಕೊಂಡಿರುವುದರ ಸಂಕೇತ.

ಕುದುರೆ ಜೂಜು ಮತ್ತು ಅಶ್ವಮೇಧ

□ ಬಿಜೆಪಿಯ ಈ ಮಹಾಧಿವೇಶನ ನಡೆದದ್ದು ಮುಂಬೈಯ ದೊಡ್ಡ ಕುದುರೆ ಜೂಜಿನ ಕೇಂದ್ರ 'ಮಹಾಲಕ್ಷ್ಮಿ ರೇಸ್ ಕೋರ್ಸ್'ನಲ್ಲಿ. ಈ ಮಹಾಧಿವೇಶನ ಮುಂಬೈಯ ರೇಸ್ ಕೋರ್ಸ್‌ನಿಂದ ದಿಲ್ಲಿಯ ರೇಸ್ ಕೋರ್ಸ್ ರಸ್ತೆಗೆ(ಪ್ರಧಾನಿ ನಿವಾಸ ಇರುವ ಜಾಗ) ಬಿಜೆಪಿ ನಾಯಕರನ್ನು ಒಯ್ಯುತ್ತದೆ ಎಂದು ಬಿಜೆಪಿ ಮುಖಂಡರು ಮತ್ತೆ-ಮತ್ತೆ ಹೇಳುತ್ತಿದ್ದರಂತೆ.

□ "ಬಿಜೆಪಿ ರೇಸ್ ಕೋರ್ಸಿನಲ್ಲಿ ಈ ಜೂಜು ಗೆಲ್ಲಬಹುದೇ?" ಎಂಬ ಸ್ವಾಗತ ಬ್ಯಾನರ್ ಅಲ್ಲಿ ಎಲ್ಲರ ಗಮನ ಸೆಳೆಯಿತಂತೆ. ಅಂದರೆ ಕೋಟ್ಯಾಂತರ ಜನಗಳ ಜೀವವನ್ನು ತಟ್ಟುವ ರಾಜಕೀಯ ಈ ಮಂದಿಗೆ ಒಂದು ಜೂಜಾಟ!

□ ಮಹಾಧಿವೇಶನ ಪ್ರವೇಶದ್ವಾರದ ಮೇಲೆ 'ಅಶ್ವಮೇಧ' ಎಂಬ ಹೆಸರೂ ರಾರಾಜಿಸುತ್ತಿತ್ತು. ಕುದುರೆ ಜೂಜು ಮತ್ತು ಅಶ್ವಮೇಧ! - ಬಿಜೆಪಿ ರಾಜಕಾರಣವನ್ನು ಪ್ರತಿಬಿಂಬಿಸುವ ಸಂಕೇತಗಳು?

□ ಈ ಸ್ಥಳವನ್ನು ಬಿಜೆಪಿ ಮಹಾಧಿವೇಶನಕ್ಕೆ ಆರಿಸಿಕೊಂಡ ರೀತಿಯೂ ಈ ಅಧಿಕಾರದಾಹಿ ಪಕ್ಷದ ಸ್ವರೂಪಕ್ಕೆ ಹಿಡಿದಿರುವ ಕನ್ನಡಿ. 230 ಎಕ್ರೆ ವಿಸ್ತಾರವಾಗಿರುವ ಈ ರೇಸ್‌ಕೋರ್ಸಿನ್ನು ನೋಡಿಕೊಳ್ಳುತ್ತಿರುವ ರಾಯಲ್ ವೆಸ್ಟರ್ನ್ ಇಂಡಿಯಾ ಟರ್ಫ್ ಕ್ಲಬ್ ತನ್ನ ನಿಯಮಗಳನ್ನು ಬದಲಿಸಿ ಈ ಮೈದಾನವನ್ನು ಬಿಜೆಪಿ ಮಹಾಧಿವೇಶನಕ್ಕೆ ಕೊಡದಿದ್ದರೆ ರಾಜ್ಯ ಸರಕಾರ ಅದನ್ನು ವಹಿಸಿಕೊಳ್ಳುವುದಾಗಿ ಬಿಜೆಪಿ ಉಪಮುಖ್ಯಮಂತ್ರಿ ಬೆದರಿಸಿರುವುದಾಗಿ ಮುಂಬೈಯಲ್ಲಿ ಸುದ್ದಿಯಾಗಿತ್ತು. ಈ ಕುದುರೆ ಜೂಜಿನ ಮೈದಾನ ಹಿಂದೆಂದೂ ಕಾಣದಷ್ಟು ಹಾನಿಯನ್ನು ಈ ಮೂರು ದಿನಗಳ ಕಾಲ ಅನುಭವಿಸಬೇಕಾಯಿತಂತೆ.

ನ. 29ಕ್ಕೆ ಅಖಿಲ ಭಾರತ ವಿದ್ಯಾರ್ಥಿ ಮುಷ್ಕರ

ಕೇಂದ್ರ ಸರಕಾರದ ಶಿಕ್ಷಣ ವಿರೋಧಿ ಮತ್ತು ಜನವಿರೋಧಿ ನೀತಿಗಳನ್ನು ಪ್ರತಿಭಟಿಸಲು ರಾಷ್ಟ್ರಮಟ್ಟದಲ್ಲಿ ಐದು ವಿದ್ಯಾರ್ಥಿ ಸಂಘಟನೆಗಳು-ಎಸ್‌ಎಫ್‌ಐ, ಎಐಎಸ್‌ಎಫ್, ವಿದ್ಯಾರ್ಥಿ ಜನತಾದಳ, ಎಐಎಸ್‌ಬಿ ಮತ್ತು ಎಐಪಿಎಸ್‌ಯು ನವಂಬರ್ 29ರಂದು ಅಖಿಲ ಭಾರತ ವಿದ್ಯಾರ್ಥಿ ಮುಷ್ಕರಕ್ಕೆ ಕರೆ ನೀಡಿವೆ. ಅಂದು ರಾಜ್ಯದಾದ್ಯಂತ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿ ಮೆರವಣಿಗೆ, ಪ್ರದರ್ಶನ, ಧರಣಿ, ರಸ್ತೆ ತಡೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಈ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ರಾಜ್ಯದ ವಿದ್ಯಾರ್ಥಿ ಸಮುದಾಯ ಮತ್ತು ಶಿಕ್ಷಕ ಸಮುದಾಯ ಕರೆ ನೀಡಿವೆ.

ಬೇಡಿಕೆಗಳು: ರಾಷ್ಟ್ರೀಯ ಒಟ್ಟು ಉತ್ಪನ್ನದಲ್ಲಿ ಶೇ. 6ರಷ್ಟನ್ನು ಶಿಕ್ಷಣಕ್ಕಾಗಿ ಮೀಸಲಿರಿಸಬೇಕು, ಶಿಕ್ಷಣ ಕ್ಷೇತ್ರದಿಂದ ಕೇಂದ್ರ ಸರಕಾರವು ತನ್ನ ಜವಾಬ್ದಾರಿ ಕಳಚಿಕೊಳ್ಳುವುದು, ಖಾಸಗಿ ವಿಶ್ವವಿದ್ಯಾಲಯಗಳ ಆರಂಭ ಮತ್ತು ಶಿಕ್ಷಣ ವಾಣಿಜ್ಯೀಕರಣವನ್ನು ನಿಲ್ಲಿಸಬೇಕು, ಶಿಕ್ಷಣದಲ್ಲಿ ಹಣದ ಪ್ರಭಾವವನ್ನು ತಡೆದು ಅರ್ಹತೆಯನ್ನು ಎತ್ತಿ ಹಿಡಿಯುವ ಮೂಲಕ ಶಿಕ್ಷಣ ಮೌಲ್ಯವನ್ನು ಕಾಪಾಡಬೇಕು, ವಿದ್ಯಾರ್ಥಿ ವೇತನ, ಸ್ಟೈಫಂಡ್, ಮಧ್ಯಾಹ್ನದ ಉಪಹಾರ, ಗ್ರಂಥಾಲಯ ಇನ್ನಿತರ ಸಹಾಯಕ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಬೇಕು, ಉದ್ಯೋಗವನ್ನು ಮೂಲಭೂತ ಹಕ್ಕನ್ನಾಗಿಸಬೇಕು ಹಾಗೂ ನಿರುದ್ಯೋಗ ಭತ್ಯೆಯನ್ನು ನೀಡಬೇಕು ಹಾಗೂ ಅಮೇರಿಕಾದೊಂದಿಗೆ ಮಿಲಿಟರಿ ಸಹಕಾರದಲ್ಲಿ, ದೇಶದ ಸಾರ್ವಭೌಮತೆಯ ರಕ್ಷಣೆ ಇತ್ಯಾದಿ ಈ ಹೋರಾಟದ ಬೇಡಿಕೆಗಳು.

ಕ್ಯಾಸ್ಟ್ರೋರ ಅಮೇರಿಕಾ ಭೇಟಿ..

ಪುಟ 7ರಿಂದ

ಹಾರ್ಲೆಂನಲ್ಲಿ ಎನ್ನಲಾಗುತ್ತಿದೆ. ತಮ್ಮ ಎಂದಿನ ಮಿಲಿಟರಿ ಸಮವಸ್ತ್ರದಲ್ಲಿದ್ದ ಕ್ಯಾಸ್ಟ್ರೋ ಸಭಿಕರನ್ನು ನಗೆಗಡಲಿನಲ್ಲಿ ತೇಲಿಸಿದರು. ತಾನು ಬಿಸಿನೆಸ್ ಸೂಟುಗಳ ಬದಲು ಮಿಲಿಟರಿ ಸಮವಸ್ತ್ರಗಳನ್ನೇ ಏಕೆ ತೊಡುತ್ತೇನೆ ಎನ್ನವುದರಿಂದ ಹಿಡಿದು ತನ್ನ ಜನರ ದಶಕಗಳ ಅವಿರತ ದೀರ್ಘ ಹೋರಾಟದ ಕಥೆಯನ್ನು ಹೇಳಿದರು.

"ಹಸಿದುಕೊಂಡಿರಬೇಕಾಯಿತು!"

"ನಾವು ಈ ಪ್ರದೇಶಕ್ಕೆ ಮೊದಲ ಭೇಟಿ ಮತ್ತದರ 35ನೇ ವಾರ್ಷಿಕೋತ್ಸವವಿದು. ಆದರೆ ನಂಬಲಾಗದ ಸಂಗತಿಯೆಂದರೆ ನಾನು ಈಗಲೂ ಉಚ್ಚಾಟಿತ, ಈಗಲೂ ಸತ್ಕಾರ ಕೂಟಗಳಿಂದ ದೂರವಿಡುತ್ತಾರೆ-ಕಳೆದ 35 ವರ್ಷಗಳಲ್ಲಿ ಏನೇನೂ ಬದಲಾಗಿಲ್ಲವೋ ಎನ್ನುವಂತೆ, ನಾವಿನ್ನೂ ಶೀತಲ ಯುದ್ಧದ ದಿನಗಳಲ್ಲೇ ಇದ್ದೇವೆಯೋ ಎನ್ನುವಂತೆ ಭಾಸವಾಗುತ್ತಿದೆ" ಎಂದರು ಕ್ಯಾಸ್ಟ್ರೋ. ನ್ಯೂಯಾರ್ಕಿನ ಮೇಯರ್ ಸತ್ಕಾರ ಕೂಟಕ್ಕೆ ಆಹ್ವಾನಿಸದ ಬಗ್ಗೆ ಹೇಳುತ್ತಾ "ನಾನೊಬ್ಬ ರಾಕ್ಷಸ ಎಂದರಂತೆ ಮೇಯರ್. ರಾಕ್ಷಸನನ್ನು ಊಟಕ್ಕೆ ಕರೆಯುವುದಿಲ್ಲ. ನ್ಯೂಯಾರ್ಕಿನಲ್ಲಿ ಮೊದಲ ದಿನ ನಾನು ಹಸಿದುಕೊಂಡಿರಬೇಕಾಯಿತು!" ಎಂದು ನಗೆಯಾಡಿದರು.

ತಮ್ಮ ಪುಟ್ಟ ದೇಶದ ಸಾಧನೆಗಳ ಬಗ್ಗೆ ಹೇಳುತ್ತಾ "ಬಹುಶಃ ನಮ್ಮ ಜನ ತಮ್ಮ ಆದರ್ಶಗಳನ್ನು ಈಡೇರಿಸಿದ್ದಾರೆ. ನಮ್ಮ ಡಾಕ್ಟರುಗಳು ಆಫ್ರಿಕಾ, ಲ್ಯಾಟಿನ್ ಅಮೇರಿಕಾ ಮತ್ತಿತರ ಭಾಗಗಳಲ್ಲಿ ಮಿಲಿಯಾಂತರ ಜನರ ಆರೈಕೆ ಮಾಡಿದ್ದಾರೆ. ಕ್ಯೂಬಾದ ಸಾವಿರಾರು ಅಧ್ಯಾಪಕರು, ಪ್ರಾಧ್ಯಾಪಕರು ತಂತ್ರಜ್ಞರಿಗೆ ತರಬೇತು ನೀಡಿದ್ದಾರೆ" ಎಂದರು.

ಅಮೇರಿಕಾಕ್ಕೆ ಡಾಕ್ಟರುಗಳು ಬೇಕಾದರೆ......

"1958ರಲ್ಲಿ ಕ್ಯೂಬಾದಲ್ಲಿದ್ದ 6000 ಡಾಕ್ಟರುಗಳಲ್ಲಿ 3000 ಮಾತ್ರ ಉಳಿದರು. ಉಳಿದವರನ್ನೆಲ್ಲಾ ಉತ್ತಮ ಸಂಬಳದ ಆಮಿಷ ತೋರಿಸಿ ಇಲ್ಲಿ ಅಮೇರಿಕಾಕ್ಕೆ ಸೆಳೆಯಲಾಯಿತು. ಆದರೆ ಈಗ ನಮ್ಮಲ್ಲಿ 60,000 ಡಾಕ್ಟರುಗಳಿದ್ದಾರೆ. ಒಂದು ದಿನ ಅಮೇರಿಕನ್ನರಿಗೆ ಡಾಕ್ಟರುಗಳ ಅವಶ್ಯಕತೆ ಬಿದ್ದರೆ - ನಿಜ ಇಲ್ಲಿ ಬಹಳಷ್ಟು ಒಳ್ಳೆ ಡಾಕ್ಟರುಗಳಿದ್ದಾರೆ ಎಂದು ನನಗೆ ತಿಳಿದಿದೆ. ಆದರೂ ಎಲ್ಲಾದರಲ್ಲೊಂದು ಕಡೆ ನಿಮಗೆ ಡಾಕ್ಟರುಗಳು ಸಿಗದಿದ್ದರೆ ನಮ್ಮ ಡಾಕ್ಟರುಗಳು ಬರುತ್ತಾರೆ" ಎಂದಾಗ "ಕ್ಯೂಬಾದ ಕ್ರಾಂತಿ ಚಿರಾಯುವಾಗಲಿ"(ವೈವಾ ಕ್ಯೂಬಾ ರಿವೋಲೂಸ್ಯೊನಾರಿಯಾ) ಎಂಬ ಘೋಷಣೆ ಗಗನ ಮುಟ್ಟಿತು.

ಕ್ಯೂಬಾವು ಅತ್ಯುತ್ತಮ ಆರೋಗ್ಯ ವ್ಯವಸ್ಥೆ, ಅಧ್ಯಾಪಕರ, ಪ್ರಾಧ್ಯಾಪಕರ ಸಂಖ್ಯೆ ಇಲ್ಲಿ ಅತ್ಯಂತ ಹೆಚ್ಚು, ವಿಶ್ವದಲ್ಲಿಯೇ ಅತ್ಯಂತ ಹೆಚ್ಚಿನ ಡಾಕ್ಟರುಗಳ ಪ್ರಮಾಣ ಹೊಂದಿರುವ ದೇಶ ಎನ್ನುತ್ತಾ ಕ್ಯಾಸ್ಟ್ರೋ "ನಾವು ಅದಕ್ಕಿಂತಲೂ ಹೆಚ್ಚಿನದೊಂದನ್ನು ಮಾಡಿದ್ದೇವೆ. ವಸಾಹತುಶಾಹಿಯ ವಿರುದ್ಧ ಹೋರಾಡುತ್ತಾ ರಕ್ತ ಸುರಿಸಿದ್ದೇವೆ. ವಸಾಹತುಶಾಹಿಯ ವಿರುದ್ಧ ಸಮರದ ಅಂತರ್ರಾಷ್ಟ್ರೀಯ ಮಿಶನ್‌ಗಳಲ್ಲಿ 2000ಕ್ಕೂ ಹೆಚ್ಚು ಕ್ಯೂಬನ್ನರು ಜೀವ ತೆತ್ತಿದ್ದಾರೆ. ನಮ್ಮಲ್ಲಿ ಹೆಮ್ಮೆ ತುಂಬಿರುವ ಸಂಗತಿಯೇನಾದರೂ ಇದ್ದರೆ ಅದು 15 ವರ್ಷಗಳ ಕಾಲ ದಕ್ಷಿಣ ಆಫ್ರಿಕಾದ ಜನಾಂಗ ದ್ವೇಷ, ವರ್ಣದ್ವೇಷದ ವಿರುದ್ಧ ನಾವು ನಡೆಸಿದ ಹೋರಾಟ" ಎಂದರು.

ಎರಡು ಗಂಟೆಗಳಿಗೂ ಹೆಚ್ಚು ಕಾಲ ಜನಗಳನ್ನು ಸೆಳೆದಿಟ್ಟುಕೊಂಡ ತಮ್ಮ ಭಾಷಣದಲ್ಲಿ ಕ್ಯಾಸ್ಟ್ರೋ "ಇತರರು ಬದಲಾಗದಿದ್ದರೆ ನಾವೂ ಬದಲಾಗುವುದಿಲ್ಲ. ಅವರು ಬದಲಾಗಬಹುದು. ಏಕೆಂದರೆ ಅವರದ್ದು ಸರಿದಾರಿಯಲ್ಲ. ಆದರೂ ನಾವೆಂದೂ ಬದಲಾಗೆವು. ಏಕೆಂದರೆ ನಮ್ಮದು ಸರಿ ದಾರಿ. ಇದಕ್ಕೆ ಅತ್ಯುತ್ತಮ ಸಾಕ್ಷಿ ಎಂದರೆ ನೀವು ಸೇರಿರುವುದು ಹಾಗೂ ಇಲ್ಲಿ ಪಡೆಯುತ್ತಿರುವ ಅಪಾರ ಆತಿಥ್ಯ" ಎಂದರು.